# DAMAGE BOOK

brown
book

**THE BOOK WAS DRENCHED**

UNIVERSAL LIBRARY
OU_200377
UNIVERSAL LIBRARY

OUP—552—7-7-66—10,000

**OSMANIA UNIVERSITY LIBRARY**

Call No. K83 T118 Accession No. K500.

Author ಲಕ್ಷ್ಮೀ ಸಾ. ಸಿ

Title ಶಿಶು ದೈ ತ್ಯ

This book should be returned on or before the date last marked below

# ಶ್ರೀ ಶುದ್ಧೈತ್ರ್ಯ

ತ. ರಾ. ಸು.

ವಿಶಾಲ ಸಾಹಿತ್ಯ ಪ್ರಕಾಶನ
ನೂರಡಿ ರಸ್ತೆ ಮೈಸೂರು.

ಪ್ರಥಮ ಮುದ್ರಣ : ೨೬–೧–೫೭

ಎಲ್ಲ ಹಕ್ಕುಗಳೂ ಲೇಖಕರವಶ

ಪಡಿಯಚ್ಚು
ಪ್ರಸಾದ್ ಪ್ರೋಸೆಸ್ ಲಿಮಿಟೆಡ್, ಮದ್ರಾಸ್

ಮುಖಚಿತ್ರ
ಜಿ. ಕೆ. ಮೂರ್ತಿ, ಧಾರವಾಡ

ಬೆಲೆ ೧ ೪ ೦ ನಯಾ ಪೈಸಾ ೧.೨೫

ಮುದ್ರಕರು·
ಪಿ. ಆರ್. ಸೀತಾರಾಮ್, ಬಿ. ಎಸ್‌ಸಿ., ಎಲ್. ಎ. ಎಂ. ಎಸ್.
ಶ್ರೀ ಸೀತಾರಾಘವ ಪ್ರೆಸ್, ರಾಮಸ್ವಾಮಿ ಸರ್ಕಲ್, ಮೈಸೂರು.

ತಳುಕು

೧—೧—೫೭

' ಗೆಳೆಯ ನರಸಿಂಹಮೂರ್ತಿ,

ಹೊಸವರ್ಷದ ಶುಭಾಷಯಗಳು.

ಈ ದಿನ ಪ್ರತ್ಯೇಕವಾಗಿ ರಿಜಿಸ್ಟರ್ಡ್ ಬುಕ್‌ಪೋಸ್ಟಿನ ಮೂಲಕ ಶಿಶುದೈತ್ಯದ ಸಂಪೂರ್ಣ ಹಸ್ತಪ್ರತಿಯನ್ನು ಕಳಿಸಿದ್ದೇನೆ. ಅದನ್ನು ನನ್ನ ಶುಭಾಷಯುಗಳೊಂದಿಗೆ ಸ್ವೀಕರಿಸು.

ಇದರಿಂದ ನಿನಗೆ ಒಳಿತಾಗಲೆಂದು ಹಾರೈಸುತ್ತೇನೆ.

ಪ್ರೀತಿಯಿರಲಿ

ನಿನ್ನವನೇ

**ತ. ರಾ. ಸು.**

ಹೀಗೆಂದು ಪ್ರೀತಿಪೂರ್ವಕವಾಗಿ ಹಾರೈಸಿ ನಿಮ್ಮಗಳತ್ತ ಸುಗ್ಗಿಯ ಕಾಲಕ್ಕೆ ಹಿಗ್ಗು ಹೆಮ್ಮೆಗಳಿಂದ ಈ ಹೊತ್ತಗೆಯನ್ನು ಹೊರತರಲು ನಮ್ಮೊಡನೆ ಹೆಗಲೆಣೆಯಾಗಿ ನಿಂತಿರುವ ಶ್ರೀ ತ. ರಾ. ಸು. ರವರಿಗೆ ನಾವು ಚಿರಋಣಿಗಳು.

ಸಂಕ್ರಾಂತಿ ನಿಮ್ಮೆಲ್ಲರಲ್ಲೂ ಕ್ರಾಂತಿ ಮೂಡಿಸಿ ಬಾಳನ್ನು ಬೆಳಗಿಸಿ ಮಂಗಳಮಯವನ್ನಾಗಿಸಲಿ. ನಮ್ಮೊಡನೆ ಸಹಕರಿಸಿದ ಎಲ್ಲರಿಗೂ ನೆನಕೆಗಳು.

**ಪ್ರಕಾಶಕರು**

ಬೊಂಬಾಯಿನ ಸಾಹಿತಿ ಬಂಧುಗಳಾದ

ನಿ. ವ್ಯಾ. ಬಲ್ಲಾಳ

ಮ. ವಿ. ನಾಯಕ್

ಗೋಪೀನಾಥ್ ಕಾಮತ್–ರಿಗೆ

ಕಲಿನಾದಲ್ಲಿ ಕಳೆದ ರಾತ್ರಿಯ

ನೆನಪಿಗಾಗಿ

## ಅರ್ಪಣೆ

ಕುಸುಮಾ—ಕೇಶವರಾವ್

# ೧

'ಜೀವನ ಹಲವಾರು ಆಕರ್ಷಕ-ವಿಕರ್ಷಕ ಆಕಸ್ಮಿಕಗಳ ಮಣಿಗಳಿಂದ ರಂಜಿತವಾದ ಪರಿಚಯ-ಪರಿಣಾಮಗಳ ಮಾಲೆ' ಎಂದು ಎಲ್ಲೋ ಯಾರೋ ಒಬ್ಬರು ಬರೆದುದನ್ನು ಓದಿದ ನೆನಪು ನನಗಿದೆ. ಎಷ್ಟು ಸತ್ಯ ಆ ಮಾತು. ನಾನು ಎಂದೆಂದಿಗೂ ನಿರೀಕ್ಷಿಸದಂತಹ ಆಕಸ್ಮಿಕ ಘಟನೆಯೊಂದು ನಡೆಯದೆ ಹೋಗಿದ್ದರೆ, ನನಗೆ ಖಂಡಿತವಾಗಿಯೂ ಡಾ. ಘರಪುರೆಯವರ ಪರಿಚಯವಾಗುತ್ತಿರಲಿಲ್ಲ. ಅವರ ಪರಿಚಯವಾಗದಿದ್ದರೆ ನನಗೆ ಈ ಕಥೆ ಬರೆಯುವುದೂ ಸಾಧ್ಯವಾಗುತ್ತಿರಲಿಲ್ಲ.

ನಾನು ಕನ್ನಡದಲ್ಲಿ ಕಥೆ, ಕಾದಂಬರಿಗಳನ್ನು ಬರೆಯುವಾತ, ಡಾ. ಘರಪುರೆ ಕನ್ನಡದ ಗಂಧವೇ ಇಲ್ಲದ 'ಸೈಕಿಯಾಟ್ರಿಸ್ಟ್' (Psychiatrist) ನನ್ನದು ಮೈಸೂರು, ಅವರದು ಬೊಂಬಾಯಿ. ಹೀಗೆ, ದೇಶ, ಭಾಷೆ, ವೃತ್ತಿಗಳೆಲ್ಲವೂ ನಮ್ಮಿಬ್ಬರನ್ನು ಬೇರೆ ಬೇರೆ ವೃತ್ತಗಳಲ್ಲಿ ಸುತ್ತಿಸುತ್ತಿರುವಾಗ, ನಮ್ಮಿಬ್ಬರನ್ನು ಹತ್ತಿರಕ್ಕೆ ಕರೆತಂದು ಮಿತ್ರರನ್ನಾಗಿ ಮಾಡುವ ಅನುಕೂಲ, ಅವಕಾಶಗಳೊಂದೂ ಇಲ್ಲದಿದ್ದಾಗ, ನಾವಿಬ್ಬರೂ ಕಲೆತೆವು; ಮಿತ್ರರಾದೆವು.

ನಮ್ಮಿಬ್ಬರನ್ನು ಕಲೆಸಿದ ಕೊಂಡಿ—ಒಂದು ಆಕಸ್ಮಿಕ! ಬಹು ಪ್ರಿಯವಾದ ಆಕಸ್ಮಿಕ!

ಅದಾದದ್ದು ಹೀಗೆ.

ಆದಿನ—ಯಾವುದೋ ದೂರದ ವೃತ್ತಗಳಲ್ಲಿ, ಪರಸ್ಪರ ಕಲೆಯುವ ಅವಕಾಶವೇ ಇಲ್ಲದೆ ಸುತ್ತುತ್ತಿದ್ದ ನನಗೂ, ಡಾ. ಘರಪುರೆಯವರಿಗೂ ಪರಸ್ಪರ ಪರಿಚಯವಾದ ದಿನ—

ಯಾವುದೋ ಕೆಲಸದ ಮೇಲೆ, ಬೊಂಬಾಯಿಗೆ ಬಂದು, ನಿರೀಕ್ಷಿಸಿದ ಅವಧಿಗಿಂತ ಹೆಚ್ಚು ದಿನ ಬೊಂಬಾಯಿಯಲ್ಲೇ ಕೆಲಸವಿಲ್ಲದೆ ಇರಬೇಕಾಗಿ ಬಂದು, ನಾನು ಬೇಸರದ ಬಂದಿಯಾಗಿದ್ದೆ.

ಆದಿನ ಸಂಜೆ ನನ್ನ ಪಾಲಿಗೆ ಬಗೆ ಬಗೆಯ ಬೇಸರದ ಸರಳುಗಳಿಂದ ನಿರ್ಮಿತವಾದ ಪಂಜರವಾಗಿತ್ತು. ಬಂದ ಕೆಲಸ ಆಗದ ಬೇಸರ, ಕೆಲಸ ವಿಲ್ಲದೆ ಇಲ್ಲಿ ಕಾಲ ಕಳೆಯಬೇಕೆಂಬ ಬೇಸರ, ಕೆಲಸವಿಲ್ಲದ ಕಾಲವನ್ನು ಹೇಗೆ ಕಳೆಯಬೇಕೆಂಬ ಚಿಂತೆಯ ಬೇಸರ, ಗೆಳೆಯರೊಂದಿಗೆ ಹರಟೆ ಹೊಡೆ ದಾದರೂ ಆ ಬೇಸರವನ್ನು ಕಳೆದುಕೊಳ್ಳೋಣ ಎಂದಿದ್ದಾಗ, ಬರುತ್ತೇನೆ ಎಂದವರೂ ಬರದೆ, ಆ ನಿರಾಶೆಯ ಬೇಸರ—

ಬಗೆಬಗೆಯ ಬೇಸರಗಳ ಸರಳುಗಳಿಂದ ನಿರ್ಮಾಣವಾದ ಪಂಜರ ವಾಗಿತ್ತು ಸಂಜೆ.

ಆ ಸಂಜೆ—

ಮೆರೀನ್‌ಡ್ರೈವ್‌ನ ಕಡಲ ದಂಡೆಯಲ್ಲಿ ತಿರುಗಾಡುತ್ತಿದ್ದ ಲಕ್ಷಾಂತರ ಜನದ ಪಾಲಿಗೆ ಬಹು ಚಿತ್ತಾಕರ್ಷಕವಾಗಿದ್ದ ಸಂಜೆ ನನ್ನ ಪಾಲಿಗೇನೋ ಸಪ್ಪೆಯಾಗಿತ್ತು. ಸುತ್ತಲೂ ಸಾವಿರಾರು ಜನರಿದ್ದರೂ, ಮಾತನಾಡು ವುದಕ್ಕೆ ಜೊತೆಯಿಲ್ಲದೆ, ಬೊಂಬಾಯಿನ ವಿಹಾರ ಸ್ಥಳ ನನ್ನ ಮಟ್ಟಿಗೆ ಮಾತ್ರ ಸೆರೆಮನೆಯಾಗಿತ್ತು.

ಒಂಟಿಯಾಗಿ ಅಲೆದಾಡುವಾಗ ಒಂದು ಪಾರ್ಶ್ವದಲ್ಲಿ ಚಲಿಸುವ ನನ್ನ ನೆರಳಿನಂತೆಯೇ, ಹೋದತ್ತ ಬಂದತ್ತ ಬೇಸರವೂ ನನ್ನನ್ನು ಹಿಂಬಾಲಿ ಸಿತ್ತು. ಮೌನದ ಮಹಾಮಹಿಮೆಯನ್ನು, ಎಷ್ಟೋ ಜನ ಕವಿಗಳು, ದಾರ್ಶ ನಿಕರು ವರ್ಣಿಸಿದ್ದಾರೆ. ಆತ್ಮ ದರ್ಶನಕ್ಕೋ, ಸತ್ಯ ಸಾಕ್ಷಾತ್ಕಾರಕ್ಕೋ— ಮೌನವೇ ಮಹಾಮಾರ್ಗ ಎಂದು ಹೊಗಳಿದಾರೆ. ಚಿಂತಿಸುವುದಕ್ಕೆ ಮಿದುಳಿನಲ್ಲಿ ಒಂದು ಸಮಸ್ಯೆಯಿದ್ದಾಗ, ಮೌನ ಅಪೇಕ್ಷಣೀಯವೇ, ಸ್ವಾಗತಾರ್ಹವೇ ಇರಬಹುದು. ಆದರೆ ಹಾಗೆ ಯಾವ ಸಮಸ್ಯೆಯೂ ಇಲ್ಲದೆ, ಬೇಸರ ಹೊರಲಾಗದ ಹೊರೆಯಾಗಿ, ಹಗುರವಾದ ನಗೆ, ಹಿತ ವಾದ ಮಿತ್ರಾಲಾಪವನ್ನು ಹೃದಯ ಹಾರೈಸುತ್ತಿರುವಾಗ, ಸುತ್ತ ಸಾವಿ ರಾರು ಜನರಿದ್ದರೂ ಯಾರೊಬ್ಬರೊಂದಿಗೂ ಮಾತನಾಡಲಾಗದಂಥ ಪರಿ ಸ್ಥಿತಿಯಿದ್ದು, ನುಡಿಯಲೆಳಸುವ ನಾಲಗೆಯ ನರಗಳಿಗೆ ಬಲಾತ್ಕಾರ ಮೌನದ ಬೇಡಿ ಬಿದ್ದರೆ, ಅಂಥ ಮೌನಕ್ಕಿಂತ ಮಿಗಿಲಾದ ಚಿತ್ರಹಿಂಸೆ ಬೇರೊಂದು ಇಲ್ಲವೇ ಇಲ್ಲ ಎನ್ನಬಹುದು. ಸತ್ಯಾಗ್ರಹ ಸಮರದಲ್ಲಿ ಕಾರಾಗೃಹದಲ್ಲಿ

ದ್ದಾಗ ಅನುಭವಿಸಿದ ' ಸಾಲಿಟರಿ ಇಂಪ್ರಿಸನ್‌ಮೆಂಟ್ ' (ಒಂಟಿ–ಬಂಧನ) ಖಂಡಿತವಾಗಿಯೂ ನನಗೆ, ಆ ಸಂಜೆಯಷ್ಟು ಕಷ್ಟವಾಗಿ ಕಂಡಿರಲಿಲ್ಲ.

ಪರಿಚಯದವರು ಯಾರಾದರೂ ಸಿಗಬಾರದೇ ; ಹೆಚ್ಚೇನೂ ಬೇಡ, ಸುಮ್ಮನೆ ಕಾಣಿಸಿಕೊಂಡು ' ಹಲೋ ' ಎಂದರೂ ಈ ಬೇಸರದ ಬೇಡಿ ಕಳಚಿ ಬಿದ್ದೀತು ಎಂದು ಹಾರೈಸುತ್ತಾ, ಚರ್ಚ್‌ಗೇಟ್ ಸ್ಟೇಷನ್ನಿನ ಬಳಿಯ ನೂಕು ನುಗ್ಗಲಿನಲ್ಲಾದರೂ ಯಾರಾದರೂ ಪರಿಚಿತರು ಕಾಣಬಹುದು ಎನಿಸಿ, ಹಾಗೇ ಅತ್ತಕಡೆ ಕಾಲು ಹಾಕಿದೆ.

ಚರ್ಚ್‌ಗೇಟ್ ಸ್ಟೇಷ್ನ, ಆದರ ಬದಿಯಲ್ಲಿದ್ದ 'ಭೂಗರ್ಭ-ಮಾರ್ಗ,' ಸ್ಟೇಷನ್ನಿನ ಇದಿರು ಭಾಗದಲ್ಲಿದ್ದ ' ಇರಾಸ್ ' ಚಲಚ್ಚಿತ್ರ ಮಂದಿರದ ಬಳಿಯ ಜನರ ಗುಂಪು ಎಲ್ಲವನ್ನೂ ನೋಡಿಕೊಂಡು, ಎಲ್ಲೂ ಯಾವ ಪರಿಚಿತರನ್ನೂ ಕಾಣದೆ, ಈ ವೇಳೆಗಾದರೂ, ನಾನು ಇಳಿದುಕೊಂಡಿದ್ದ ಹೋಟೇಲ್ ಬಳಿಗೆ ಯಾರಾದರೂ ಗೆಳೆಯರು ಬಂದಿರಬಹುದು ಎಂದು ಆಶಿಸಿ, ಮತ್ತೆ ಹಿಂದಕ್ಕೆ ಹೆಜ್ಜೆ ಹಾಕಿದೆ.

ಇರಾಸ್ ಚಿತ್ರ ಮಂದಿರಕ್ಕೆ ಇದಿರಾಗಿ ಒಂದು ದೊಡ್ಡ ಇರಾನಿ ರೆಸ್ಟುರಾ. ಅದರ ಬದಿಯಲ್ಲೇ ಒಂದು 'ಬಸ್‌ಸ್ಟಾಪ್.' ಬಸ್‌ಸ್ಟಾಪಿನ ಬಳಿ ದೊಡ್ಡದೊಂದು ' ಕ್ಯೂ ' ನಿಂತಿತ್ತು. ಸಾವಿರ ಕಾಲಿನ ಜರಿಯಂತೆ ಸಾಲಾಗಿ ನಿಂತ ' ಕ್ಯೂ ' ನಲ್ಲಿದ್ದವರನ್ನು ನೋಡುತ್ತಾ ಮುಂದುವರಿಯುತ್ತಿರುವಾಗ, ಕ್ಯೂನಲ್ಲಿ ನಿಂತ ಯಾರೋ ಒಬ್ಬರು ನನ್ನನ್ನೇ ದಿಟ್ಟಿಸುತ್ತಿರುವಂತೆ ಭಾಸವಾಯಿತು.

ಯಾರಿರಬಹುದು ಎಂದುಕೊಂಡು ನಾನೂ ಮತ್ತೊಮ್ಮೆ, ಸಾಲಾಗಿ ನಿಂತರೂ ದಿಕ್ಕು ದಿಕ್ಕಿಗೆ ತಿರುಗಿದ ಜನರ ಮುಖಗಳನ್ನು ನೋಡಿದೆ ನನಗೆ ಪರಿಚಿತವಾದ ಮುಖ ಒಂದೂ ಆ ಸಾಲಿನಲ್ಲಿ ಕಾಣಲಿಲ್ಲ.

ಮರಳು ಗಾಡಿನಲ್ಲಿ ಬಾಯಾರಿ ನಡೆದುಬರುತ್ತಿರುವ ಪಾಂಥನಿಗೆ ದೂರದ ಬಿಸಿಲ ಝಳವೂ ನೀರಾಗಿ ಕಾಣುತ್ತದೆಯಂತೆ. ನನಗೂ ಅಂಥದೇ ಭ್ರಮೆಯಾಗಿರಬೇಕು ಎಂದುಕೊಂಡೆ.

ಭ್ರಮೆ–ಅಷ್ಟಲ್ಲದೆ ಮತ್ತೇನು ?

ಬೊಂಬಾಯಿಯಲ್ಲಿ ನನಗೆ ಪರಿಚತರಾದವರ ಸಂಖ್ಯೆ ಬೆರಳ ಮೆ,

ಎಣಿಸಬಹುದಾದಷ್ಟು ಅಲ್ಪ. ಆ ಪರಿಚಿತ ಮುಖಗಳಲ್ಲಿ ಒಂದೂ ಆ ಸಾಲಿನಲ್ಲಿರಲಿಲ್ಲ. ಅಲ್ಲದೆ ಅಪರಿಚಿತರೂ ತಿರುಗಿ ನೋಡುವಷ್ಟು ಗಮನಾರ್ಹವಾದ ವ್ಯಕ್ತಿತ್ವವೂ ನನ್ನದಲ್ಲ. ಹಾಗಿರುವಾಗ ನನ್ನನ್ನು ನೋಡುವವರು ಯಾರು?

ಹಾಗೆಂದು ನನಗೆ ನಾನೇ ಸಮಾಧಾನ ಹೇಳಿಕೊಂಡರೂ, ಯಾರೋ ನನ್ನ ಕಡೆಯೇ ನೋಡುತ್ತಿದ್ದಾರೆ ಎಂಬ ಭಾವನೆ ಮಾತ್ರ ನನ್ನಿಂದ ದೂರವಾಗಲಿಲ್ಲ.

ನಿಜ—ನನಗೆ ಪರಿಚಯರಾದವರು ಯಾರೂ ಆ ಸಾಲಿನಲ್ಲಿಲ್ಲ. ಆದರೂ ಎಂದೋ, ಹೇಗೋ, ಏಕೋ ನನ್ನನ್ನು ನೋಡಿದವರು ಆ ಗುಂಪಿನಲ್ಲಿರಬಾರದೇಕೆ ?

ಇದ್ದಾರೆಯೇ—ನನ್ನನ್ನು ನೋಡುತ್ತಿದ್ದಾರೆಯೇ ಎಂದು ಯೋಚಿಸುತ್ತಾ ನಾನೂ ಹಾಗೇ ತಲೆಯಿಂದ ತುದಿಯವರೆಗೆ ' ಕ್ಯೂ ' ನ ಮೇಲೆ ಕಣ್ಣಾಡಿಸುತ್ತಾ ನಿಂತೆ.

ನಾನು ನಿಂತದ್ದರಿಂದ ನನ್ನನ್ನು ನೋಡುತ್ತಿದ್ದವರಿಗೆ ನನ್ನ ಗುರುತು ಸ್ಪಷ್ಟವಾಗಿ ಹತ್ತಿರಬೇಕು. ಎಂತಲೇ ಎರಡು ನಿಮಿಷ ಎನ್ನುವುದರೊಳಗಾಗಿ, ' ಕ್ಯೂ ' ನ ಮಧ್ಯಭಾಗದಲ್ಲಿದ್ದ, ಅತ್ಯಾಧುನಿಕ ರೀತಿಯಲ್ಲಿ ಅಲಂಕೃತಳಾದ ಯುವತಿಯೊಬ್ಬಳು, ತನ್ನ ಅಕ್ಕಪಕ್ಕದಲ್ಲಿದ್ದ ಜನರನ್ನು ಬಿಡಿಸಿಕೊಂಡು ನನ್ನ ಕಡೆ ಬಂದಳು

ಆಕೆ ನನ್ನ ಕಡೆಯೇ ಬಂದರೂ, ಆಕೆಯ ರೂಪು ಅಲಂಕಾರವನ್ನು ನೋಡಿ ನನಗೆ ಆಕೆ ನನ್ನನ್ನು ನೋಡಲು, ಮಾತನಾಡಿಸಲು ಬಂದವಳೆಂದು ನಂಬಿಕೆಯಾಗಲಿಲ್ಲ.

ಎಂದೂ, ಎಲ್ಲೂ ನಾನಾಕೆಯನ್ನು ನೋಡಿರಲಿಲ್ಲ. ಊಹೂ—ಎಂದೆಂದೂ ನೋಡಿದ ಮುಖ ಅಲ್ಲ ಅದು. ಒಮ್ಮೆ ನೋಡಿದ್ದರೂ ಆ ಮುಖವನ್ನು ನಾನು ಮರೆಯುತ್ತಿರಲಿಲ್ಲ. ಒಮ್ಮೆ ನೋಡಿದರೂ ಮರೆಯುವಂಥ ಮುಖ ಅಲ್ಲ ಅದು !

ಯಾರಿರಬಹುದು, ಆಕೆ ಯಾರಿಗಾಗಿ ಬರುತ್ತಿರಬಹುದು ಎಂದು ನಾನು ಯೋಚಿಸುತ್ತಿರುವಾಗಲೇ ಆಕೆ ನನ್ನ ಬಳಿ ಬಂದು ನಿಂತು—

' ಕ್ಷಮಿಸಿ. ನೀವು—ರಾವ್ ಅಲ್ಲವೇ ? '

—ಎಂದು ನನ್ನ ಹೆಸರು ಹೇಳಿ ಕನ್ನಡದಲ್ಲಿ ಕೇಳಿದಳು.

ಆಕೆಗೆ ನನ್ನ ಮುಖ ಪರಿಚಯವಿತ್ತು, ಹೆಸರಿನದೂ ಪರಿಚಯವಿತ್ತು. ಆದರೆ ನನಗೆ ಮಾತ್ರ ಆಕೆಯ ಹೆಸರಾಗಲಿ ಮುಖವಾಗಲೀ ಯಾವುದೊಂದೂ ಪರಿಚಯವಿರಲಿಲ್ಲ. ಎಂತಲೇ ಸ್ವಲ್ಪ ಪೆಚ್ಚಾಗಿ—

'ನೀವು ಹೇಳುವುದು ನಿಜ. ಆದರೆ ನಮಗೆ ನಿಮ್ಮ ಗುರುತು ಹತ್ತಲಿಲ್ಲ. ಕ್ಷಮಿಸಬೇಕು. ತಾವು ದಯವಿಟ್ಟು, ನಾನು ನಿಮ್ಮನ್ನು ಎಲ್ಲಿ ನೋಡಿದ್ದೆ ಎಂದು ನೆನಪಿಸಿದರೆ, ನನ್ನ ತಪ್ಪು ತಿದ್ದಿಕೊಳ್ಳುತ್ತೇನೆ'

—ಎಂದು ಹೇಳಿದೆ.

'ನಿಮಗೆ ನನ್ನ ಗುರುತು ಹತ್ತದಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ.'

—ಅಪರಿಚಿತ ಯುವತಿ ನಗುತ್ತಾ ಹೇಳಿದಳು.

'ಇಂದಿನವರೆಗೆ ನಾನೆಂದೂ ನಿಮ್ಮೊಂದಿಗೆ ಮಾತಾಡಿಲ್ಲ. ಆದರೆ–ನೀವು ನನ್ನನ್ನು ನೋಡಿರುವುದೂ ಸಾಧ್ಯವಿಲ್ಲ. ಆದರೆ ನಾನು ಮಾತ್ರ ನಿಮ್ಮನ್ನು ನೋಡಿದ್ದೆ.'

'ಎಲ್ಲ ?'

'ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕಳೆದ ವರ್ಷ ನೀವು ಭಾಷಣ ಮಾಡಲೆಂದು ಬಂದಾಗ, ಆದಿನದ ಸಭೆಯಲ್ಲಿ ನಾನು ನಿಮ್ಮನ್ನು ಕಂಡಿದ್ದೆ. ನನ್ನ-ನಿಮ್ಮ ಪರಿಚಯ ಅಷ್ಟೆ'

'ಸದ್ಯ–ಪರಿಚಯಸ್ಥರ ಗುರುತು ಮರೆತ ಅಪಚಾರ ನನ್ನಿಂದ ಎಲ್ಲಿ ಆಗಿತ್ತೋ ಎಂದು ಭಯವಾಗಿತ್ತು. ಆ ಭೀತಿ ತಪ್ಪಿಸಿದಿರಿ. ತಾವು ಮಹಾರಾಜಾ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದಿರಾ ?'

'ಹೌದು.'

'ಯಾವ ವಿಷಯ ತೆಗೆದುಕೊಂಡಿದ್ದಿರಿ ?'

'ಸೈಕಾಲಜಿ. ಅಲ್ಲಿ ಆನರ್ಸ್ ಕೋರ್ಸು ಮುಗಿಸಿಕೊಂಡು, ಈಗ ಹೆಚ್ಚಿನ ಅಭ್ಯಾಸಕ್ಕೆಂದು ಇಲ್ಲಿಗೆ ಬಂದಿದೇನೆ.'

'ತುಂಬಾ ಸಂತೋಷವಾಯಿತು. ಇಲ್ಲಿ ಯಾವ ಕಾಲೇಜಿನಲ್ಲಿ ಕಲಿಯುತ್ತಿದ್ದೀರಾ ?'

'ಇಲ್ಲಿ ಯಾವ ಕಾಲೇಜಿಗೂ ಸೇರಿಲ್ಲ. ಇಲ್ಲಿ ಬಹಳ ಪ್ರಸಿದ್ಧ ಮನೋ

ವಿಜ್ಞಾನಿಗಳಾದ ಡಾ. ಘೋರಪುರೆಯವರ ಬಳಿ ಅಭ್ಯಾಸ ಮಾಡುತ್ತಿದ್ದೇನೆ—ಥಿಸೀಸು ಬರೆಯುವ ಸಲುವಾಗಿ. ನೀವೂ ಡಾ. ಘೋರಪುರೆಯವರ ಹೆಸರು ಕೇಳಿರಬೇಕಲ್ಲವೇ?'

' ಹೆಸರು ಕೇಳಿದೀನಿ. ಅಷ್ಟೆ.'

' ಅಷ್ಟೇ ಆದರೆ ಸಾಲದು-ರಾವ್. ನೀವು ಅವರ ಪರಿಚಯಮಾಡಿಕೊಳ್ಳಬೇಕು. ಲಕ್ಷಕ್ಕೊಬ್ಬರೂ ಅಂಥವರು ಸಿಗುವುದಿಲ್ಲ. ನಮ್ಮ ದೇಶದಲ್ಲಿ ಚೆನ್ನಾಗಿ ತರಬೇತಾದ 'ಸೈಕಿಯಾಟ್ರಿಸ್ಟ್ಸ್' (Psychiatrists) ಸಂಖ್ಯೆ ತುಂಬಾ ಕಡಮೆ. ಮನೋವೈಜ್ಞಾನಿಕ ಚಿಕಿತ್ಸಾಕ್ರಮ (Psychotherapy) ವಂತೂ ಈಗೀಗ ಕಾಲಿಡುತ್ತಿದೆ. ಬಹಳ ಮುಂದುವರಿದ ಬೊಂಬಾಯಿನಲ್ಲೇ, ಬೆರಳಮೇಲೆ ಎಣಿಸುವಷ್ಟು ಕೂಡಾ ಅಂಥಾ ಚಿಕಿತ್ಸಾಮಂದಿರಗಳಿಲ್ಲ. ದೇಶಕ್ಕೆ, ಜನಕ್ಕೆ ಹೊಸದಾದ ಈ ವಿಷಯ, ಈ ರಂಗದಲ್ಲಿ ದುಡಿಯುತ್ತಿರುವವರಲ್ಲಿ ಅಗ್ರಗಾಮಿಗಳಾದ ಡಾ. ಘೋರಪುರೆಯವರ ಪರಿಚಯವನ್ನು ನೀವು ಖಂಡಿತ ಮಾಡಿಕೊಳ್ಳಬೇಕು.'

—ಆಕೆ ಒತ್ತಾಯ ತುಂಬಿದ ಧ್ವನಿಯಲ್ಲಿ ಹೇಳಿದಳು.

' ಏಕೆ-ನನಗೆ ಆ ಬಗೆಯ ಚಿಕಿತ್ಸೆ ಅಗತ್ಯವಿದೆ ಎಂದು ನಿಮ್ಮ ಅಭಿಪ್ರಾಯವೇ?'

—ಆಕೆಯ ಒತ್ತಾಯದ ಮಾತನ್ನು ಕೇಳಿ ನಗುತ್ತಾ ಕೇಳಿದೆ ನಾನು.

ನನ್ನ ಮರುಪ್ರಶ್ನೆ ಕೇಳಿ ಆಕೆಗೂ ನಗು ಬಂತು. ನಗುತ್ತಲೇ—

' ಛೆ, ಛೆ, ನನ್ನ ಅಭಿಪ್ರಾಯ ಹಾಗಲ್ಲ.'

—ಎಂದಳು.

' ಮತ್ತೆ—?'

' ಆ ಮಾತು ಹೇಳಿದಾಗ ನನ್ನ ಮನಸ್ಸಿನಲ್ಲಿ ಬೇರೇನೂ ಭಾವನೆ ಇರಲಿಲ್ಲ. ನಾನು ನಿಮ್ಮ ಕೆಲವು ಕಾದಂಬರಿಗಳನ್ನು ಓದಿ ಮೆಚ್ಚಿಕೊಂಡಿದ್ದೇನೆ. ಮನೋವಿಜ್ಞಾನದ ಸಾಧನೆಗಳ ಪರಿಚಯ ನಿಮಗಿದ್ದರೆ, ನಿಮ್ಮ ಕೃತಿಗಳು ಮತ್ತಷ್ಟು ಸಹಜವಾಗಬಹುದು, ಸುಂದರವಾಗಬಹುದು ಎಂಬ

ಭಾವನೆಯಿಂದ ಹೇಳಿದೆ. ನಿಮ್ಮ ಪಾತ್ರ–ವಿಶ್ಲೇಷಣಕ್ಕೆ ಮತ್ತಷ್ಟು ಖಚಿತತೆ ಬರುತ್ತದೆ–ಅಲ್ಲವೇ '

'ನಿಮ್ಮ ಉದ್ದೇಶ ಅಷ್ಟೇ ಆದರೆ ಸಂತೋಷ–ನಾನು ಬದುಕಿದೆ.'

'ಏಕೆ ?'

'ಎಷ್ಟಾದರೂ ನೀವು ಮನೋವಿಜ್ಞಾನಿಗಳು ಮುಖ ನೋಡುತ್ತಿದ್ದ ಹಾಗೇ, ಕಣ್ಣಿನ ಕಿಟಕಿಯ ಮೂಲಕ ಜೀವನದ ಅಂತರಂಗವನ್ನೆಲ್ಲ ಅರಿಯುತ್ತೀರಿ. ಹಾಗೇ ನನ್ನಲ್ಲಿ ಏನು ಕಂಡು ಮನೋರೋಗಿ ಎಂಬ ನಿಶ್ಚಯಕ್ಕೆ ಬಂದು ಡಾಕ್ಟರ ಹತ್ತಿರಕ್ಕೆ ಬನ್ನಿ ಎಂದು ಕರೆದಿರೋ ಎಂದು ಹೆದರಿಕೆಯಾಗಿತ್ತು. ಆ ಭಯ ಇಲ್ಲಾಂದಿರಲ್ಲಾ–ಅಷ್ಟು ಸಾಕು '

—ಎಂದು, ನಕ್ಕು—

' ಈಗ ನನಗೆ ಬಹಳ ಆಗತ್ಯವಾಗಿರುವುದೇನು ಗೊತ್ತೆ ?'

—ಎಂದು ಕೇಳಿದೆ.

' ಏನು ?'

' ಎಲ್ಲಿಯಾದರೂ ಒಂದು ಕಪ್‌ಚಾ. ಈ ಪಕ್ಕದಲ್ಲಿ ಇರಾನಿ ರೆಸ್ಟುರಾ, ಎದುರು ಬದಿಗೆ 'ಪುರೋಹಿತ್ಸ್' ಎರಡೂ ನಿನ್ನ ಆಗತ್ಯ ತೀರಿಸಲು ನಾವು ಸಿದ್ಧವಾಗಿದ್ದೇವೆ ಎನ್ನುತ್ತಿರುವಾಗ, ಬಸ್‌ಸ್ಟಾಪಿನ ಬಳಿ ನಿಂತು ಬಾಯು ಚಪಲ ತೀರಿಸಿಕೊಳ್ಳುವುದು ಮಹಾಪರಾಧ ಎನಿಸುತ್ತದೆ-ನನಗೆ–ನಿಮಗೂ ಕಾಲಾವಕಾಶವಿದ್ದರೆ, ತೊಂದರೆಯಾಗದಿದ್ದರೆ ಬನ್ನಿ '

—ಎಂದೆ, ಆಕೆ ಬಸ್ಸಿಗೆ ಕಾಯುತ್ತಿದ್ದುದರ ನೆನಪಾಗಿ

' ಈ ಬಸ್ಸಿನಲ್ಲಿ ಸೀಟ್ ಸಿಗುವ ಆಸೆಯಂತೂ ಇಲ್ಲ. ಮುಂದಿನ ಬಸ್ಸಿಗೆ ಇನ್ನೂ ಹದಿನೈದು ನಿಮಿಷ ಕಾಯಬೇಕು. ಅಂತೂ ನಿಮಗೆ, ನನ್ನ ಬಸ್ಸು ತಪ್ಪಿಸಿದುದಕ್ಕೆ ಅಷ್ಟಾದರೂ ಜುಲ್ಮಾನೆಯಾಗಲಿ '

—ಎಂದು ನಗುತ್ತಾ ಹೇಳಿದಳು ಆಕೆ, ರೆಸ್ಟುರಾದತ್ತ ನಡೆಯಲು ಸಿದ್ಧಳಾಗಿ

' ಈ ಸಂಜೆ ನೀವು ಮಾಡಿದ ಉಪಕಾರಕ್ಕೆ ಅಷ್ಟೇನೂ ಜುಲ್ಮಾನೆಯಲ್ಲ, ಬೇರೇನು ದಂಡ ವಿಧಿಸಿದರೂ ಕೊಡುವುದಕ್ಕೆ ಸಿದ್ಧವಾಗಿದೇನೆ.

ನಿಮ್ಮ ಈ ಆಕಸ್ಮಿಕ ಪರಿಚಯ ನನ್ನನ್ನು ಎಂಥ ಬಂಧನದಿಂದ ಬಿಡುಗಡೆ ಗೊಳಿಸಿತೆಂಬುದು ನಿಮಗೆ ತಿಳಿಯದು— '

' ಏಕೆ—ಅಂಥದೇನಾಗಿತ್ತು ? '

' ಹೆಚ್ಚು ಜನರ ಪರಿಚಯವಿಲ್ಲದ ಸ್ಥಳದಲ್ಲಿ ಮಾಡಲು ಕೆಲಸ, ಹೋಗಲು ಸ್ಥಳ ಇಲ್ಲದೆ ಸುಮ್ಮನೆ ಅಲೆದಾಡಬೇಕಾಗಿ ಬರುವುದು ಎಂಥ ಭಯಂಕರ ಪರಿಸ್ಥಿತಿ ಎಂಬುದು ನಿಮಗೆ ಅನುಭವವಾಗಿದೆಯೋ ಇಲ್ಲವೋ— ಆಗದಿದ್ದರೆ ಎಂದೂ ಆಗುವುದು ಬೇಡ. ಯಾರಾದರೂ ಪರಿಚಯಸ್ಥರ ಮುಖ ಕಂಡರೆ ಸಾಕು—ಬಾಯಿಗೆ ಬಲಾತ್ಕಾರವಾಗಿ ಬಿದ್ದ ಬೀಗ ಮುರಿ ದೇನು ಎಂದು ಹಾತೊರೆಯುತ್ತಿದ್ದೆ. ದೇವರೇ ಕಳಿಸಿದಂತೆ—ನೀವಾ ಗಿಯೇ ನನ್ನ ಗುರುತು ಹಿಡಿದು ಬಂದಿರಿ. ಇದು ಸಣ್ಣ ಉಪಕಾರವೇ ? '

—ಎಂದು ಕೇಳಿದೆ ನಾನು.

## ೨

ಆ ವೇಳೆಗೆ ನಾವಿಬ್ಬರೂ ರೆಸ್ಟುರಾದೊಳಗೆ ಬಂದಿದ್ದೆವು. ಆಕೆ, ನಾನು ಆಕೆಗಾಗಿ ಸರಿಸಿದ ಕುರ್ಚಿಯಲ್ಲಿ ಕುಳಿತು ಹೇಳಿದಳು—

' ನಿಜ, ನಿಜ—ಕೆಲವು ವೇಳೆ ಅಂಥ ಪರಿಸ್ಥಿತಿ ಬಹು ಭಯಂಕರ ಪರಿಣಾಮಕ್ಕೂ ಎಡೆಕೊಡಬಹುದು. '

—ಎಂದಳು ಆಕೆ, ಇದ್ದಕ್ಕಿದ್ದ ಹಾಗೇ ತನ್ನ ಜೀವನದಲ್ಲಿ ಎಂದೋ ಆದ ಯಾವುದೋ ಘಟನೆಯನ್ನು ನೆನೆಸಿಕೊಂಡು, ಕೊಂಚ ಕಹಿಯಾದ ಧ್ವನಿಯಲ್ಲಿ. ಆ ಮಾತನ್ನಾಡುತ್ತಾ ಏಕೋ ಆಕೆಯ ಮುಖವೂ ಮಂಕಾ ಯಿತು.

ಏನು ವಿಷಯವೋ, ಏನು ಘಟನೆಯೋ—ಹೆಚ್ಚು ಪರಿಚಯವಿಲ್ಲದ ಆಕೆಯನ್ನು ' ಅದೇನು ಇದೇನು ' ಎಂದು ಕೆಣಕಿ ಕೇಳುವುದು ಸೌಜನ್ಯ ವಲ್ಲವೆನಿಸಿದರೂ, ತಟಕ್ಕನೆ ತಲೆದೋರಿ ಪ್ರಬಲಿಸಿದ ಕುತೂಹಲವನ್ನು ತಡೆಯಲಾರದೆ—

' ಏಕೆ, ಏನಾಯಿತು ? ನಿಮಗೂ ಇದರ ಅನುಭವವಾಯಿತೆ ? '

—ಎಂದು ಕೇಳಿದೆ

' ಹೋಗಲಿ ಬಿಡಿ ಸಂತೋಷದ ಹೊತ್ತಿನಲ್ಲಿ ಕಹಿ ನೆನಪೇಕೆ ? ಮತ್ತೆಂದಾದರೂ ಹೇಳುತ್ತೇನೆ. ಮೊದಲು—ನಿಮ್ಮ ಆರ್ಡರಿಗಾಗಿ ಕಾದಿರುವ ' ಸರ್ವರ್ ' ಗೆ ಏನು ಬೇಕೋ ಹೇಳಿ ಕಳುಹಿಸಿ '

—ಎಂದಳು ಆಕೆ, ಆ ಮಾತಿನ ಕೊಂಡಿಯನ್ನು ಅಲ್ಲಿಗೇ ಕತ್ತರಿಸಿ.

ಆಕೆಗೆ, ಇದ್ದಕ್ಕಿದ್ದ ಹಾಗೆ ನೆನಪಾಗಿಯೂ ಮರೆಯಬೇಕೆನ್ನಿಸಿದ ನೆನಪನ್ನು ನಾನಾಗಿ ಕೆಣಕುವುದೇಕೆ ಎಂಬ ಸೌಜನ್ಯಕ್ಕೆ ಕಟ್ಟುಬಿದ್ದು, ಕುತೂಹಲವನ್ನು ಮೆಟ್ಟಿ—

' ಕ್ಷಮಿಸಿ '

ಎಂದು, ಮೇಜಿನ ಬಳಿಯೇ ಕಾದಿದ್ದ ಹುಡುಗನಿಗೆ ಇಬ್ಬರಿಗೆ ಚಾ ತರುವಂತೆ ಹೇಳಿ ಕಳುಹಿಸಿದೆ

ಹುಡುಗ ಸ್ವಲ್ಪ ಹೊತ್ತಿನಲ್ಲೇ, ಇಬ್ಬರಿಗೂ ಬೇರೆ ಬೇರೆ ಕಪ್ಪುಗಳಲ್ಲಿ ಚಾ, ಒಂದು ತಟ್ಟೆಯಲ್ಲಿ ಅಷ್ಟು ಬಿಸ್ಕತ್, ಮತ್ತೊಂದು ತಟ್ಟೆಯಲ್ಲಿ ಪಚ್ಚೆ ಬಾಳೆ ಹಣ್ಣುಗಳನ್ನು ತಂದಿಟ್ಟ

ಆಕೆ, ಇದ್ದಕ್ಕಿದ್ದ ಹಾಗೇ ಮನದಲ್ಲಿ ಮೂಡಿದ ನೆನಪಿನ ಕಹಿಯನ್ನು ಮರೆವಿನಲ್ಲಿ ಕರಗಿಸುವಂತೆ ಏನೂ ಮಾತನಾಡದೆ, ಚಹಾದ ಬಟ್ಟಲಿನಲ್ಲಿ ಸಕ್ಕರೆ ಹಾಕಿಕೊಂಡು ಅದನ್ನು ಚಮಚಾದಿಂದ ಕಲಕಿಸಿ, ಕರಗಿಸಿ, ಒಂದು ಗುಟುಕು ಟೀ ಕುಡಿದು—

'ಆಕಸ್ಮಿಕ ಪರಿಚಯದ ಸಂತೋಷದಲ್ಲಿದ್ದಾಗ, ಯಾವುದೋ ಅಪ್ರಿಯ ಘಟನೆಯನ್ನು ಜ್ಞಾಪಿಸಿಕೊಂಡ ನನ್ನ ಮನೋದೌರ್ಬಲ್ಯವನ್ನು ಮನ್ನಿಸಿ '

—ಎಂದಳು, ಏಕೋ ನೀರಸವಾದ ಸ್ವರದಲ್ಲಿ ಮತ್ತೆ ಜೀವ ತುಂಬಲು ಯತ್ನಿಸಿ.

' ಹೋಗಲಿ ಬಿಡಿ. ಎಂದಿನದೋ ಮಾತನ್ನು ಜ್ಞಾಪಿಸಿಕೊಂಡು ಸರಿಯಾಗಿರುವ ಹೊತ್ತನ್ನು ಕಹಿಮಾಡಿಕೊಳ್ಳುವುದೇಕೆ ?— ಅಂದ ಹಾಗೆ— ನೀವು ಡಾ. ಘರಪುರೆಯವರ ವಿಷಯ ಹೇಳುತ್ತಿದ್ದಿರಲ್ಲ. ನಾನು ಅವರ ಪರಿಚಯ ಮಾಡಿಕೊಳ್ಳಲೇ ಬೇಕು ಎಂದೂ ಹೇಳಿದಿರಿ. ನಿಮಗೆ ಅವರ

ಪರಿಚಯವಿದೆ ಎಂದೂ ಹೇಳಿದಿರಿ ನೀವೇ, ಯಾವಾಗಲಾದರೂ ನಿಮಗೆ ಬಿಡುವಿದ್ದಾಗ, ನನಗೂ ಅವರ ಪರಿಚಯ ಮಾಡಿಸಿಕೊಡಿ '

—ಎಂದೆ, ಮಾತನ್ನು ಬೇರೆ ಜಾಡಿನಲ್ಲಿ ನಡೆಸುತ್ತಾ.

' ಆಗತ್ಯವಾಗಿ. ಅದಕ್ಕಿಂತ ಇನ್ನು ಸಂತೋಷದ ಕೆಲಸ ನನ ಗುಂಟೆ ? ನಿಮಗೆ ಬಿಡುವಿದ್ದರೆ ಹೇಳಿ–ಈದಿನವೇ ಅವರ ಪರಿಚಯ ಮಾಡಿ ಸಿಕೊಡುತ್ತೇನೆ. you must meet him.'

—ಎಂದಳು ಆಕೆ ಉತ್ಸಾಹದಿಂದ.

' ಈ ದಿನವೇ ನೀವು ಅವರ ಪರಿಚಯ ಮಾಡಿಸುವುದಾದರೆ, ನನಗೂ ಬಹಳ ಸಂತೋಷ. ಹೊತ್ತು ಕಳೆಯಲು ದಾರಿಯೇ ಕಾಣದೆ ಬಳಲು ತ್ತಿರುವ ನನಗಂತೂ ಅದು ಬಹಳ ಸ್ವಾಗತಾರ್ಹವಾದ ವಿಷಯ. ಆದರೆ–'

' ಏಕೆ–ಆದರೆ ?'

' ಇನ್ನೇನೂ ಇಲ್ಲ. ನನ್ನ ಮುಖ ನೋಡಿ ಗುರುತು ಹಿಡಿದ ತಪ್ಪಿಗೆ ಈಗಾಗಲೇ ನಿಮಗೆ ಒಂದು ಬಸ್ಸು ತಪ್ಪಿದ ಶಿಕ್ಷೆಯಾಯಿತು. ನಿಮಗೆ ಬೇರೆ ಎಲ್ಲಿ ಏನು ಕೆಲಸವಿದೆಯೊ ಏನೊ ? ಅದನ್ನೆಲ್ಲಾ ತಪ್ಪಿಸಿ, ನಿಮ್ಮ ಸಂಜೆಯನ್ನೆಲ್ಲಾ ಹಾಳುಮಾಡುವ ಇಚ್ಛೆ ನನಗಿಲ್ಲ. ನನಗಂತೂ ಇನ್ನೆ ರಡು ದಿನ ಬೇರೇನೂ ಕೆಲಸವಿಲ್ಲ. ನಿಮಗೆ ಬಿಡುವಾದಾಗ, ಡಾಕ್ಟರಿಗೂ ಅನುಕೂಲವಾದ ವೇಳೆ ತಿಳಿದುಕೊಂಡು 'ಫೋನ್' ಮಾಡಿ. ಆಗತ್ಯವಾಗಿ ನೀವು ತಿಳಿಸಿದ ಹೊತ್ತಿಗೆ, ಎಲ್ಲಿಗೆಂದರೆ ಅಲ್ಲಿಗೆ ಬರುತ್ತೇನೆ.'

' ಈಗ ನನಗೂ ಏನೂ ಕೆಲಸವಿಲ್ಲ. ನಾನೂ 'ಚಿಕಿತ್ಸಾಲಯ' (clinic) ನಿಂದ ಹಾಸ್ಟೆಲ್‌ಗೆ ಹೊರಟಿದ್ದೆ. ಸ್ವಲ್ಪ ತಡವಾದರೇನೂ ಲೋಕ ಮುಳುಗುವುದಿಲ್ಲ. ಹೇಗೂ ನಿಮಗೆ ಸಂಜೆ ಕಳೆಯಲು ಬೇರೆ ದಾರಿಯಿಲ್ಲ ಎಂದಿರಿ. ಡಾ. ಘರಪುರೆಯವರನ್ನು ನೋಡಬೇಕೆಂದು ಅಪೇಕ್ಷೆ ಯಿದ್ದರೆ–ಬನ್ನಿ. ಪರಿಚಯ ಮಾಡಿಸುತ್ತೇನೆ '

— ಎಂದಳು ಆಕೆ.

ಅಪರಿಚಯಸ್ಥನಾದ ನನ್ನಲ್ಲಿ ಆಕೆ ತೋರಿಸಿದ ವಿಶ್ವಾಸವನ್ನು ಕಂಡು ನನಗೆ ಆಶ್ಚರ್ಯವಾಯಿತು.

' ಅಂತೂ–ನನ್ನಿಂದ ನಿಮಗೆ ತುಂಬಾ ತೊಂದರೆಯಾಯಿತು.'

'ತೊಂದರೆ-ಏಕೆ ?'

'ಅಷ್ಟಲ್ಲದೆ ಮತ್ತೇನು ? ನನ್ನನ್ನು ನೀವು ಗುರುತು ಹಿಡಿದು ಮಾತನಾಡಿಸಿದುದರಿಂದ ನನಗೇನೋ ತುಂಬಾ ಉಪಕಾರವೇ ಆಯಿತು, ಆದರೆ ಆದರಿಂದ ನಿಮಗೆ-'

'ಅಷ್ಟೇನೇ—'

—ಆಕೆ ನಕ್ಕು ಹೇಳಿದಳು—

'ನನಗಾದ ಲಾಭ ನಿಮಗೆ ತಿಳಿಯದು'

'ನಿಮಗೇನು ಲಾಭ ಆಯಿತು ?'

'ನಮ್ಮ ಡಾಕ್ಟರ್ ಎದುರಿಗೆ ನಮ್ಮ ದೇಶದ ಒಳ್ಳೆ ಲೇಖಕರು ನನ್ನ ಮಿತ್ರರು ಎಂದು ಬಡಾಯಿ ಕೊಚ್ಚಿಕೊಳ್ಳುವ ಅವಕಾಶ ಲಭಿಸಿತು. ಆಕಸ್ಮಿಕವಾಗಿ ದೊರಕಿದ ಈ ಸುಯೋಗವನ್ನು ಕಳೆದುಕೊಳ್ಳಬಾರದೆಂದೇ, ನಾನೇ ಮೇಲೆ ಬಿದ್ದು ಮಾತನಾಡಿಸಿದೆ. ಸದ್ಯ-ನೀವು ಯಾರೊ 'ಟಾರ್ಟ್' (Tart) ಅಂತ ತಿಳಿದುಕೊಂಡು ಮುಖ ತಿರುಗಿಸಿಕೊಂಡು ಹೋಗಲಿಲ್ಲವಲ್ಲ, ಅದೇ ನನಗೆ ದೊಡ್ಡ ಉಪಕಾರ. ನಿಮ್ಮ ಮುಖ ನೋಡಿ ಗುರುತು ಹಿಡಿದಾಗ, ನೀವು ನನ್ನೊಂದಿಗೆ ಇಷ್ಟು ವಿಶ್ವಾಸವಾಗಿ ಮಾತನಾಡುವಿರೆಂದು ನಿರೀಕ್ಷಿಸಿರಲಿಲ್ಲ.' ನಾನೂ ಬಹಳ ಹೊತ್ತು ಮಾತನಾಡಿಸುವುದೇ ಬಿಡುವುದೇ ಎಂದು ತುಂಬಾ ಯೋಚನೆ ಮಾಡಿ, ನಂತರ ಆದದ್ದಾಗಲಿ ಎಂದು ಧೈರ್ಯ ಮಾಡಿದೆ. 'ಹಾಗೆ ಮಾತನಾಡಿಸಿದಾಗ, ನನ್ನ ವಿಷಯ ನೀವು ಏನು ತಿಳಿದುಕೊಂಡಿರೊ ಏನೋ ?'

'ತಿಳಿದುಕೊಳ್ಳುವುದೇನು ಬಂತು ? ಆಶ್ಚರ್ಯವಾದದ್ದಂತೂ ನಿಜ.'

'ಏಕೆ ?'

'ಅಪರಿಚಿತರು-ಆದರಲ್ಲೂ ಹೆಂಗಸರು-ನನ್ನನ್ನು ಗುರುತು ಹಿಡಿದು ತಾವಾಗಿಯೇ ಮುಂದೆ ಬಂದು ಮಾತನಾಡಿಸಿದುದು ಇದೇ ಮೊದಲು.'

'ನಿಜ, ನಿಜ. ನನಗೂ ನಿಮ್ಮನ್ನು ಮಾತನಾಡಿಸಿದಾಗ ಮಾತನಾಡಿಸಬೇಕೋ, ಬೇಡವೋ ಎಂಬ ಸಂದಿಗ್ಧವೇ ಇತ್ತು.'

'ಹಾಗೂ-ಮಾತನಾಡಿಸಿದಿರಿ. ಏಕೆ ?'

'ಪರಭಾಷೆ, ಪರಪ್ರಾಂತಗಳ ಜನಗಳೇ ತುಂಬಿ ತುಳುಕುತ್ತಿರುವ

ಬೊಂಬಾಯಿನಲ್ಲಿ, ನಮ್ಮ ಭಾಷೆ, ನಮ್ಮ ಊರಿನ ಜನರನ್ನು ನೋಡಿದಾಗ ಆಗುವ ಸಂತೋಷ ಅಷ್ಟಿಷ್ಟಲ್ಲ ರಾವ್. ಆ ಸಂತೋಷದಿದಿರು ಎಲ್ಲ ಸಂಕೋಚಗಳೂ, ಎಲ್ಲ ರೀತಿ ನೀತಿಗಳೂ ಮರೆತು ಹೋಗುತ್ತವೆ; ಅತ್ಯಂತ ಅಪರಿಚಯಸ್ಥರೂ ಆತ್ಮೀಯರೆಂಬ ಭಾವನೆ ಮೂಡುತ್ತದೆ. ನಿಜಕ್ಕೂ ನಾವು ನಮ್ಮ ಭಾಷೆ, ನಮ್ಮ ಜನರನ್ನು ಪ್ರೀತಿಸುವುದನ್ನು ಕಲಿಯಬೇಕೆಂದರೆ, ಇಂಥ ಕಡೆ ನಾಲ್ಕಾರು ವರ್ಷ ಇರಬೇಕು. ನಿಮ್ಮನ್ನು ನೋಡಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಬೆಳಗಿನ ದುಡಿತದಿಂದಾದ ಬೇಸರವೆಲ್ಲಾ ಮರೆತು ಹೋಯಿತು'

—ಎದೆ ತುಂಬಿ, ಹೇಳಿದಳು ಆಕೆ.

ಎಷ್ಟು ನಿಜ ಆ ಮಾತು.

೩

ಮೈಸೂರಿನ ರಸ್ತೆಗಳಲ್ಲೋ, ಬೆಂಗಳೂರಿನ ಬೀದಿಗಳಲ್ಲೋ–ಎಷ್ಟೋ ವೇಳೆ ಅಪರಿಚಯಸ್ಥರು ನನ್ನನ್ನು ಗುರುತು ಹಿಡಿದುದರ ಅನುಭವ ನನಗಾಗಿತ್ತು. ಆದರೆ, ಅದರ ರೀತಿಯೇ ಬೇರೆ. ನೋಡಿದುದರಿಂದ ನನಗಾಗಲಿ, ಅವರಿಗಾಗಲಿ ಈ ಬಗೆಯ ಸಂತೋಷವಾಗುತ್ತಿರಲಿಲ್ಲ. ಅದಕ್ಕೆ ಬದಲು ಮೃಗಾಲಯದಲ್ಲಿ ಅಪರಿಚಿತ ಪ್ರಾಣಿಗಳನ್ನು ಕಂಡು ಓಡಾಡುತ್ತಿರುವವನು, ತನಗೆ ಅಲ್ಪ ಪರಿಚಯವಿದ್ದ ಪ್ರಾಣಿಯನ್ನು ಕಂಡು 'ಆಗೋ-ಕೋತಿ !' ಎಂದು ಹೇಳುವ ರೀತಿಯಲ್ಲಿ ನನ್ನನ್ನು ನೋಡುತ್ತಿದ್ದ ಅಂಥ ಜನರನ್ನು ಕಂಡು–ನನ್ನನ್ನು ಕಂಡು ಅವರಿಗೆ ಏನು ಅನಿಸುತ್ತಿತ್ತೋ ನಾನರಿಯೆ–ನನಗಂತೂ ಖಂಡಿತ ಆನಂದವಾಗುತ್ತಿರಲಿಲ್ಲ. ಏಕೆ, ಬಹು ಬಾರಿ ಬೇಸರವೇ ಆಗುತ್ತಿತ್ತು. ಹಾಗಾಗಿ–ನನ್ನ ದಾರಿ ಹಿಡಿದು ನಾನು ಹೋಗುತ್ತಿದ್ದೆ, ಅವರ ದಾರಿ ಹಿಡಿದು ಅವರು ಹೋಗುತ್ತಿದ್ದರು. ಅಷ್ಟೇ ಹೊರತು ಅಂಥ ಘಟನೆ ಹೆಚ್ಚಿನ ಪರಿಚಯ, ಸ್ನೇಹಕ್ಕೆ ಕಾರಣವಾಗುತ್ತಿರಲಿಲ್ಲ.

ಒಂದು ವೇಳೆ ಇದೇ ಯುವತಿ, ಬೆಂಗಳೂರಿನಲ್ಲೋ, ಮೈಸೂರಿನಲ್ಲೋ ನನ್ನನ್ನು ಕಂಡಿದ್ದರೆ—

ಆಕೆಯ ಭಾಷಾಭಿಮಾನ ಪ್ರಾಯಶಃ ನನ್ನನ್ನು ಗುರುತು ಹಿಡಿಯಲು ಸಹಾಯವಾಗುತ್ತಿತ್ತು ಅಷ್ಟೆ. ಖಂಡಿತವಾಗಿಯೂ ಅದಕ್ಕಿಂತ ಹೆಚ್ಚು ದೂರ ಮುಂದುವರಿಯುತ್ತಿರಲಿಲ್ಲ. ಆಗುವುದು ಸಾಧ್ಯವೂ ಇರಲಿಲ್ಲ.

ಅಲ್ಲಿ ಅಪರಿಚಿತ ಹೆಣ್ಣು ಗಂಡುಗಳ ಕಲೆಯುವಿಕೆ, ಮಾತಾಡುವಿಕೆಗೆ ಹೆಚ್ಚೇಕೆ ಪರಸ್ಪರ ನೋಡುವಿಕೆಗೂ-ಒಂದೇ ಅರ್ಥ, ಶಯ್ಯಾಗೃಹ ಸಂಬಂಧ !

ಎಂತಲೇ ನನ್ನನ್ನು ಆಕೆ ನೋಡಿದ್ದರೂ, ಸಾಹಿತ್ಯಾಭಿಮಾನದಿಂದ ನನ್ನನ್ನು ಮಾತನಾಡಿಸಬೇಕು ಎಂದಾಕೆಗೆ ಅನಿಸಿದ್ದರೂ—ಅದು ಆ ಅನಿಸುವಿಕೆಯಲ್ಲೇ ಮುಕ್ತಾಯವಾಗುತ್ತಿತ್ತೇ ವಿನಾ—ಅಲ್ಲಿಂದಾಚೆಗೆ ಹೆಜ್ಜೆ ಇಡುತ್ತಿರಲಿಲ್ಲ.

ಒಂದು ವೇಳೆ, ಇಲ್ಲಿನಂತೆ ಆಕೆಯೇ ಮುಂದುವರಿದು ಮಾತನಾಡಿಸಿದ್ದರೂ, ಸುತ್ತಲ ಜನದ ಭಾವನೆ ನಮ್ಮ ಹೃದಯದಲ್ಲಿ ಅಪ್ರತ್ಯಕ್ಷವಾಗಿ ಮೂಡಿಸುವ ಅಳುಕಿನಿಂದ, ನಾನೂ ಸಂಪ್ರದಾಯದ ಎರಡು ಮಾತಾಡಿ, ಅಷ್ಟಕ್ಕೇ ಸುತ್ತಲಿನವರು ಏನು ತಿಳಿದುಕೊಂಡರೊ ಎಂದು ಅತ್ತಿತ್ತ ನೋಡುತ್ತಾ ದುರ್ದಾನ ತೆಗೆದುಕೊಂಡವನಂತೆ ಹೋಗುತ್ತಿದ್ದೆ. ಖಂಡಿತವಾಗಿಯೂ, ದೇವರಾಣೆಗೂ—ಹೀಗೆ ವಿಶ್ವಾಸವಾಗಿ 'ಬನ್ನಿ, ಹಾಯಾಗಿ ಹರಟೆ ಹೊಡೆದುಕೊಂಡು ಕಾಫಿ ಕುಡಿಯೋಣ' ಎಂದು ಕರೆಯುತ್ತಿರಲಿಲ್ಲ.

ನಾನು ಕರೆಯುತ್ತಿರಲಿಲ್ಲ—ನಾನು ಕರೆದರೂ ಆಕೆ ಬರುತ್ತಿರಲಿಲ್ಲ.

ಅದೇ ನಾನು—ಅದೇ ಆಕೆ—ಬೊಂಬಾಯಿನಲ್ಲಿ—

ನಿಜ—ಸಣ್ಣ ಊರು ತಾವು ಸಣ್ಣದಾಗಿರುವುದೇ ಅಲ್ಲದೆ, ತನ್ನಲ್ಲಿ ವಾಸಿಸುವ ಮಾನವನನ್ನೂ, ಅವನ ಮನೋಭಾವನೆಯನ್ನೂ ಸಣ್ಣದು ಮಾಡುತ್ತದೆ—ಕೈಕನ್ನಡಿಯಲ್ಲಿ ವಿಶಾಲವಾದ ಮುಗಿಲೂ ಕಿರಿದಾಗಿ ಕಾಣುವಂತೆ—

ಸಣ್ಣ ಊರು—ಸಣ್ಣ ಮನಸ್ಸು; ದೊಡ್ಡ ಊರು, ದೊಡ ಮನಸ್ಸು.

ದೊಡ್ಡ ಊರಿನಲ್ಲಿ ನಮ್ಮ ಆದರ, ಅಭಿಮಾನ, ಹೃದಯ, ಮನಸ್ಸು ಎಲ್ಲವೂ ವಿಶಾಲವಾಗುತ್ತದೆ—

ನಮ್ಮದು—ಸುತ್ತಲಿನವರದು.

ಅಲ್ಲವೇ—ನಾನು, ಆಕೆ 'ಬಸ್‌ಸ್ಟಾಪ್' ನಂಥ ನೂರಾರು ಜನ ತುಂಬಿದ ಸ್ಥಳದಲ್ಲಿ ಪರಸ್ಪರ ಗುರುತು ಹಿಡಿದು ಮಾತಾಡುತ್ತಾ, ನಗುತ್ತಾ, ಹೋಟಲಿನತ್ತ ನಡೆದಾಗ,—

ಹತ್ತಾರು ಜನರ ನಡುವೆ ನಿಂತ ಹೆಣ್ಣು, ತಾನು ಹೋಗಲಿದ್ದ ಬಸ್ಸನ್ನು ಬಿಟ್ಟು ಬಂದು ಮಾತನಾಡಿಸಿದಾಗ—

ಎಲ್ಲಕ್ಕಿಂತ ಹೆಚ್ಚಾಗಿ **ಹೆಣ್ಣು—ಗಂಡು**—

ಊಹೂ—ನಮ್ಮ ಊರಿನಲ್ಲದು ಸಾಧ್ಯವೇ ಇರಲಿಲ್ಲ. ಸಾವಿರ ಕಣ್ಣು, ಹಲಬಗೆಯ ಸಂಶಯದಿಂದ ಕಿಸಿದು ನಮ್ಮತ್ತ ನೋಡುತ್ತಿದ್ದವು.

ಆದರೆ—ಇಲ್ಲಿ—

ಸಂಶಯವಿರಲಿ, ನಮ್ಮತ್ತ ಯಾರೂ ತಿರುಗಿ ಸಹ ನೋಡಿರಲಿಲ್ಲ.

ನಿಜ, ನಿಜ—ಸಣ್ಣ ಊರು, ಸಣ್ಣ ಮನಸ್ಸು—ದೊಡ್ಡ ಊರು, ದೊಡ್ಡ ಮನಸ್ಸು. ಜನರ ಹೃದಯ ವಿಶಾಲವಾಗುವುದಕ್ಕೆ, ಅಭಿಮಾನ ವಿಶಾಲವಾಗುವುದಕ್ಕೆ ಸಣ್ಣ ಊರಿನ ಕೆರೆಯ ಕಪ್ಪೆಗಳನ್ನು, ಬೊಂಬಾಯಿನ ಕಡಲಿನಲ್ಲಿ ತಂದು ಬಿಟ್ಟು ಆಡಿಸಿಕೊಂಡು ಹೋಗಬೇಕು.

ಓ—ಮಾನವನ ಮನಸ್ಸಿನ ಮೇಲೆ ಎಂಥ ಸುಂದರ ಪರಿಣಾಮವನ್ನು ಮೂಡಿಸುತ್ತದೆ ಬೊಂಬಾಯಿ.

ನಿಜ—ಕನ್ನಡಿಗ ಕನ್ನಡಿಗನಾಗಬೇಕಾದರೆ, ಮನುಷ್ಯ ಮನುಷ್ಯನಾಗಬೇಕಾದರೆ, ಬೊಂಬಾಯಂಥ ಊರಿನಲ್ಲಿ ನಾಲ್ಕಾರು ವರ್ಷ ಇರಬೇಕು.

'ನಿಜಕ್ಕೂ ನಾವು ನಮ್ಮ ಭಾಷೆ, ನಮ್ಮ ಜನರನ್ನು ಪ್ರೀತಿಸುವುದನ್ನು ಕಲಿಯಬೇಕು ಎಂದರೆ ಇಂಥ ಕಡೆ ನಾಲ್ಕಾರು ವರ್ಷ ಇರಬೇಕು'

—ಎಂದು ಆಕೆ ಹೇಳಿದ ಮಾತು ನನ್ನ ಮನಸ್ಸನ್ನು ಹೀಗೆ ಯಾವ ಯಾವುದೋ ಯೋಚನೆಗಳ ಲೋಕದಲ್ಲಿ ಸುತ್ತಾಡಿಸಿಕೊಂಡು ಬಂದಿತು.

ಆಕೆಯ ಮಾತು ಕೇಳಿ ನಾನು ಸುಮ್ಮನೆ ಕುಳಿತುದನ್ನು ಕಂಡು ಆಕೆಯೇ—

'ಏಕೆ, ಸುಮ್ಮನಾಗಿಬಿಟ್ಟಿರಿ.'

—ಎಂದಳು

'ನಿಮ್ಮ ಮಾತು ಕೇಳಿ ತಲೆಯಲ್ಲಿ ಏನೇನೋ ಯೋಚನೆಗಳು ಬಂದವು. ಅದಕ್ಕೇ ಸುಮ್ಮನೆ ಕುಳಿತೆ'

'ಅಷ್ಟೇ ತಾನೇ?'

—ನನ್ನ ಮಾತನ್ನು ನಂಬದಂತೆ ಕೇಳಿದಳು ಆಕೆ.

'ಖಂಡಿತ—ಅಷ್ಟೆ.'

'ಸದ್ಯ—ನನ್ನ ವಾಚಾಳತ್ವದಿಂದ ನಿಮಗೆ ಬೇಸರವಾಯಿತೇನೋ ಎಂದಿದ್ದೆ. ಕನ್ನಡದಲ್ಲಿ ಮಾತನಾಡಿಯೇ ಎಷ್ಟೋ ತಿಂಗಳುಗಳಾಗಿತ್ತು, ಅದಕ್ಕೆ ಇವತ್ತು ನನ್ನ ನಾಲಗೆ ಸ್ವಲ್ಪ ಸಡಿಲವಾಗಿದೆ ಅದರಿಂದ ನಿಮಗೆ 'ಇದೆಲ್ಲಿಯ ಮಾತಿನಮಲ್ಲಿ ಗಂಟುಬಿದ್ದಳು' ಅಂತ ಬೇಸರವಾಯಿತೇನೋ ಎಂದು ಹೆದರಿದ್ದೆ—ನೀವು ಸುಮ್ಮನೆ ಕುಳಿತುದುದನ್ನು ಕಂಡು, ಅದಲ್ಲ ತಾನೇ—'

'ಊಹೂ, ಅದಲ್ಲ, ಬೇರೆ ಏನೋ ಯೋಚನೆ ಬಂತು.'

'ಏನು?'

'ನಾವಿಬ್ಬರೂ ಹೀಗೆ ಬರೀ ಕನ್ನಡಿಗರೇ ತುಂಬಿದ ಬೆಂಗಳೂರಿನಲ್ಲೋ, ಮೈಸೂರಿನಲ್ಲೋ ಕಲೆತಿದ್ದರೆ, ಹೀಗೆ ಮಾತಾಡಿದ್ದರೆ ಏನಾಗುತ್ತಿತ್ತು ಎಂದು ಊಹಿಸಿದೆ... ..'

ನನ್ನ ಮಾತು ಕೇಳಿ ಆಕೆ, ನನ್ನ ಮಾತನ್ನು ಮುಂದುವರಿಸಲೂ ಬಿಡದೆ ಗಟ್ಟಿಯಾಗಿ ನಕ್ಕುಬಿಟ್ಟಳು. ಒಂದೆರಡುಗಳಿಗೆ ನಕ್ಕು—

'ನಿಜ, ನಿಜ—ಅಲ್ಲಿ ನಾವಿಬ್ಬರೂ ಹೀಗೆ ಕಲೆತು ಮಾತನಾಡಿದ್ದರೆ ಏನಾಗುತ್ತಿತ್ತೆಂದು ನಾನೂ ಬಲ್ಲೆ, ಇಷ್ಟು ಹೊತ್ತಿಗೆ ನಮ್ಮಿಬ್ಬರ ಹೆಸರೂ ಕಾಲೇಜಿನ ಗೋಡೆಗಳಿಗೆ ಅಲಂಕಾರವಾಗುತ್ತಿತ್ತು. ಹಾಗೆ ನೋಡಿದರೆ—ನಾವಿಬ್ಬರೂ ಅಲ್ಲಿ ಒಬ್ಬರನ್ನೊಬ್ಬರು ನೋಡದಿದ್ದುದೇ ಒಳಿತಾಯಿತು. ಇಂಥ ಅನಿರೀಕ್ಷಿತ ಪರಿಚಯವೇ ಹೆಚ್ಚು ಆನಂದಕರ, ಹಾಗೂ ಶಾಶ್ವತ. ಇನ್ನು ನೀವೂ ನನ್ನನ್ನು ಮರೆಯುವುದಿಲ್ಲ, ನಾನೂ ನಿಮ್ಮನ್ನು

ಮರೆಯುವುದಿಲ್ಲ ಆ ದೃಷ್ಟಿಯಿಂದ ನಿಜವಾಗಿಯೂ ಬೊಂಬಾಯಿ—ಗ್ರೇಟ್ ಸಿಟಿ. (Great city).'

ಆಕೆ—

' ಇನ್ನು ನೀವೂ ನನ್ನನ್ನು ಮರೆಯುವುದಿಲ್ಲ, ನಾನೂ ನಿಮ್ಮನ್ನು ಮರೆಯುವುದಿಲ್ಲ '

—ಎಂದಾಗ, ಆ ಮಾತಿಗೆ ಉತ್ತರವಾಗಿ, ನಾನು—

' ಹೌದು ಮರೆಯುವುದಿಲ್ಲ '

—ಎಂದು ಹೇಳಿದಾಗ, ಇದ್ದಕ್ಕಿದ್ದ ಹಾಗೇ ನನಗೆ ನೆನಪಾಯಿತು

ಆಕೆಗೆ ನನ್ನ ಮುಖಪರಿಚಯವಿತ್ತು, ನನ್ನ ಹೆಸರಿನದೂ ಪರಿಚಯ ವಿತ್ತು. ನನಗೆ ಈಗ ಆಕೆಯ ಮುಖ ಪರಿಚಯವಾಗಿತ್ತು ಆದರೆ ಹೆಸರು—

ಇಷ್ಟು ಹೊತ್ತು ಮಾತಾಡುತ್ತಾ ಕುಳಿತಿದ್ದರೂ ನಾನಾಕೆಯ ಹೆಸರೇನೆಂದು ಕೇಳಿರಲಿಲ್ಲ ಆಕೆಯೂ ನನಗೆ ತನ್ನ ಹೆಸರೇನೆಂದು ತಿಳಿಸಿರಲಿಲ್ಲ.

ಅದು ನೆನಪಾಗಿ, ನಕ್ಕು ಕೇಳಿದೆ—

' ಅಂದ ಹಾಗೆ ನಿಮ್ಮ ಹೆಸರೇನು ? '

' ಇನ್ನೂ ಅದನ್ನು ನಾನು ನಿಮಗೆ ಹೇಳಲೇ ಇಲ್ಲವೇ ? ಕಸುಮಾ ಕೇಶವರಾವ್.'

' ಬಹಳ ಸುಂದರವಾದ ಹೆಸರು.'

' ನಿಜವಾಗಿಯೂ.'

'Sure. The name is as beautiful as the owner of that name. (ಆ ಹೆಸರಿನ ಮಾಲೀಕರಷ್ಟೇ ಹೆಸರೂ ಸುಂದರವಾಗಿದೆ.)

—ಎಂದೆ ನಾನು ನಗುತ್ತಾ.

ಆಕೆಯೂ ನನ್ನ ನಗುವಿನೊಂದಿಗೆ ಬೆರೆತು ನಕ್ಕು—

' ಈಗ ನೀವು ಬರಹಗಾರರ ಹಾಗೆ ಮಾತಾಡುತ್ತಿದ್ದೀರ '

—ಎಂದು, ತಟಕ್ಕನೆ ಏನೋ ಜ್ಞಾಪಿಸಿಕೊಂಡು ಮತ್ತೆ ನಕ್ಕಳು.

'ಏಕೆ?'

'ಏನೂ ಇಲ್ಲ. ಮೊದಲ ದಿನ ಡಾ. ಘರಪುರೆಯವರನ್ನು ನಾನು ಭೇಟಿ ಮಾಡಿದಾಗ ಅವರೂ ಅದೇ ಮಾತು ಹೇಳಿದ್ದರು—' ನಿಮ್ಮ ಹೆಸರು ಕೇಳಿ ಮೆಚ್ಚಿಕೊಂಡಿದ್ದೆ. ಮುಖ ನೋಡಿ ಎಲ್ಲಿ ನನ್ನ ಪರೀಕ್ಷೆ ವಿಫಲವಾಗು ವುದೋ ಎಂದು ಹೆದರಿದ್ದೆ. Thank god for the fulfill ment' ಎಂದಿದ್ದರು—ಡಾ ಘರಪುರೆ ನಿಮ್ಮ ಮಾತು ಕೇಳಿ ಅವರ ಮಾತು ನೆನಸಾಯಿತು ನೀವಿಬ್ಬರೂ ಖಂಡಿತ ಕಲೆಯಬೇಕು ಏಳಿ— ಹೋಗೋಣ'

—ಎಂದಳು ಆಕೆ, ಅದುವರೆಗೂ ಮೇಜಿನ ಮೇಲಿರಿಸಿದ ತನ್ನ ಕೈಚೀಲವನ್ನು ಹೆಗಲಿಗೆ ಹಾಕಿಕೊಂಡು, ಮರೆತು ಹೋದ ಮಾತನ್ನು ನೆನಪಿಸಿ.

'ಸರಿ ಹೋಗೋಣ. ನಿಮಗೇನೂ ಅಭ್ಯಂತರವಿಲ್ಲ ತಾನೇ?'

—ಎಂದು ಆಕೆಯನ್ನು ಕೇಳಿ, ಅನುಮತಿ ಪಡೆದು, ನಾನೂ ಅದು ವರೆಗೂ ಆಕೆಯ ಮಾತಿನಲ್ಲಿ ಮರೆತಿದ್ದ ಸಿಗರೇಟು ಹೊತ್ತಿಸಿಕೊಂಡು, ಹೋಟಲಿನವನ ಋಣ ತೀರಿಸಿ ಆಕೆಯನ್ನು ಹಿಂಬಾಲಿಸಿದೆ.

## ೪

ಇಬ್ಬರೂ ಹೋಟಲಿನಿಂದ ಹೊರಗೆ ಬಂದು ರಸ್ತೆಯ ಬದಿಗೆ ನಿಂತೆವು.

ಕುಸುಮಾ ಹೋಗೋಣ ಎಂದಾಗ 'ಎಲ್ಲಿಗೆ, ಹೇಗೆ ಹೋಗು ವುದು?' ಎಂದು ಕೇಳದೆ ನಾನೂ ಆಕೆಯನ್ನು ಹಿಂಬಾಲಿಸಿ ಬಂದಿದ್ದೆ. ಹೋಟಲಿನಿಂದ ಹೊರಗೆ ಬಂದ ಬಳಿಕ ಅದು ನೆನಪಾಗಿ—

'ಅಂದ ಹಾಗೆ ಡಾಕ್ಟರ್‌ರ ಕ್ಲಿನಿಕ್ ಇರುವುದು ಎಲ್ಲಿ?'

—ಎಂದು ಕೇಳಿದೆ.

ನನ್ನ ಪ್ರಶ್ನೆಗೆ ಉತ್ತರವಾಗಿಯೋ ಎಂಬಂತೆ ಆಕೆ ತನ್ನ ಕೈಗಡಿ ಯಾರವನ್ನು ನೋಡಿಕೊಂಡು—

‘ಓ, ಆರುಗಂಟೆಯ ಮೇಲಾಯಿತು. ಈಗವರು ಕ್ಲಿನಿಕ್‌ನಲ್ಲಿ ಸಿಕ್ಕುವುದಿಲ್ಲ. ಮಾತಿನಲ್ಲಿ ನನಗೂ ಇಷ್ಟು ಹೊತ್ತಾದದ್ದು ತಿಳಿಯಲಿಲ್ಲ’

—ಎಂದಳು.

‘ಅಂದರೆ—ಈ ದಿನ ಅವರನ್ನು ನೋಡುವುದು ಸಾಧ್ಯವಿಲ್ಲವೆಂದೇ ಅರ್ಥವೇ?’

—ಕೊಂಚ ನಿರಾಶನಾಗಿ ಕೇಳಿದೆ ನಾನು.

‘ಹಾಗೇನೂ ಅಲ್ಲ. ಕ್ಲಿನಿಕ್ ಆದರೆ ಬಹಳ ಹತ್ತಿರವಾಗಿತ್ತು. ಇಲ್ಲೇ ‘ಅಂಬ್ಯಾಸಡರ್’ ಹೋಟಲಿನ ಬಳಿ ಇತ್ತು. ಇಷ್ಟು ಹೊತ್ತಿಗೆ ಅವರು ಕ್ಲಿನಿಕ್ ಬಿಟ್ಟು ಬಿಟ್ಟಿರುತ್ತಾರೆ.’

‘ಅಂದರೆ—ಅವರನ್ನು ಈಗ ನೋಡಬೇಕು ಅಂದರೆ ಅವರ ಮನೆಗೇ ಹೋಗಬೇಕೇ?’

‘ಇಷ್ಟು ಬೇಗ ಅವರು ಮನೆಗೆಲ್ಲಿ ಹೋಗುತ್ತಾರೆ. ರಾತ್ರಿ ಹತ್ತು ಗಂಟೆಯ ವೇಳೆಗೆ ಅವರು ಮನೆಯ ಮುಖ ಕಂಡರೆ, ಅವರ ಹೆಂಡತಿಯ ಪುಣ್ಯ’

—ಕುಸುಮಾ ನಗುತ್ತಾ ಹೇಳಿದಳು.

‘ಹಾಗಾದರೇನು—ಕ್ಲಬ್‌ಗಿಬ್‌ಗೆ ಹೋಗಿರುತ್ತಾರೋ ಏನೋ. ಅಲ್ಲೇಕೆ ಹೋಗಿ ಅವರನ್ನು ತೊಂದರೆಪಡಿಸುವುದು.’

‘ಕ್ಲಬ್ಬೂ ಇಲ್ಲ, ಮನೆಯೂ ಇಲ್ಲ. ಅದಕ್ಕೆಲ್ಲಾ ಡಾಕ್ಟರಿಗೆ ಪುರುಸೊತ್ತೇ ಇಲ್ಲ, ಈ ವೇಳೆಗೆ ಅವರು ತಮ್ಮ ‘ಚಿಲ್ಡ್ರನ್ಸ್ ಕ್ಲಿನಿಕ್’ (ಶಿಶು ಚಿಕಿತ್ಸಾಲಯ)ದಲ್ಲಿರಬೇಕು.’

—ಕುಸುಮಾ ಹೇಳಿದಳು.

‘ಇಲ್ಲಿ ದುಡಿದ ಮೇಲೆ ವಿಶ್ರಾಂತಿಯನ್ನು ತೆಗೆದುಕೊಳ್ಳದೆ, ಮತ್ತೆ ಬೇರೆ ಕಡೆ ದುಡಿತಕ್ಕೆ ಹೋಗುತ್ತಾರೆಯೇ? ನಿಮ್ಮ ಡಾಕ್ಟರಿಗೆ ‘All work and no play makes Jack dull and grey’ ಅನ್ನೋದು ಗೊತ್ತಿಲ್ಲಾಂತ ಕಾಣುತ್ತೆ.’

‘ಹಾಗೇನೂ ಇಲ್ಲ. He is full of life, ಆದರೆ ವಿರಾಮಕ್ಕಾಗಲಿ, ವಿನೋದಕ್ಕಾಗಲಿ ಅವರಿಗೆ ವೇಳೆಯೇ ದೊರೆಯುವುದಿಲ್ಲ.’

' ಏಕೆ ? '

' ಉಳಿದ ಡಾಕ್ಟರುಗಳ ಹಾಗೆ ಅವರು ವೃತ್ತಿಯನ್ನು ಗಳಿಕೆಯ ಯಂತ್ರವೆಂದು ಭಾವಿಸಿಲ್ಲ ರಾವ್, ಸೇವೆಯ ಸಾಧನ ಎಂದು ಭಾವಿಸಿದಾರೆ. ಗಳಿಕೆಯೊಂದೇ ಗುರಿಯಾಗಿದ್ದರೆ, ಅವರು ಈ ವೃತ್ತಿಗೇ ಬರಬೇಕಾಗಿರಲಿಲ್ಲ. ಇವರು, ಇವರ ಮಕ್ಕಳು ಮೊಮ್ಮಕ್ಕಳು ಕುಳಿತು ತಿಂದರೂ ಸವೆಯದಷ್ಟು ಆಸ್ತಿಯನ್ನು ಅವರ ಹಿರಿಯರು ಗಳಿಸಿಟ್ಟು ಹೋಗಿದಾರೆ ಹಾಗೆ ನೋಡಿದರೆ ಅವರ ಮನೆಯವರ ದೃಷ್ಟಿಯಲ್ಲಿ ಡಾಕ್ಟರೇ 'ಬ್ಲ್ಯಾಕ್‌ಷೀಪ್' (Black sheep).'

—ಕೊಂಚ ಕಹಿಯಾಗಿ ಹೇಳಿದಳು ಕುಸುಮಾ.

' ಆದೇಕೆ ? '

' ಮತ್ತೆ. ಡಾಕ್ಟರ ತಂದೆ ಹತ್ತಾರು ವರ್ಷಗಳ ಕಾಲ ಬೊಂಬಾಯಿ ಮೇಯರ್ ಆಗಿದ್ದರು. ಈಗಲೂ ಅಷ್ಟೆ-ಅವರಿಲ್ಲದೆ ಬೊಂಬಾಯಿಯಲ್ಲಿ ಯಾವ ಸಮಾರಂಭವೂ ನಡೆಯುವುದಿಲ್ಲ. ಡಾಕ್ಟರ ಅಣ್ಣ–ಇಲ್ಲಿನ ಸೋಷಿಯಲ್ ಲೈಫ್‌ನ ಲೀಡಿಂಗ್ ಲೈಟ್. ಮನೆಯ ಹೆಂಗಸರೂ ಅಷ್ಟೆ– ಸಿ ಸಿ. ಐ. ಕ್ಲಬ್‌ನಲ್ಲಿ ತಿಂದು, ಮೆರೆಯುವುದೇ ಬಾಳಿನ ಪರಮೋದ್ದೇಶ ಎಂದು ನಂಬಿರುವ ಬಣ್ಣದ ಚಿಟ್ಟೆಗಳು. ಇರಲಿಕ್ಕೆ ಮಲಬಾರ್ ಹಿಲ್‌ನಲ್ಲಿ ಬಂಗಲೆ, ತಿರುಗಾಡಲು ಕ್ಯಾಡಿಲಾಕ್ ಕಾರು, ಬೆರೆಯಲು ಸಿ. ಸಿ. ಐ ನ ಶ್ರೀಮಂತ ಜನ ಇರುವಾಗ ಆದನ್ನು ಬಿಟ್ಟು, ಸೇವೆ ಸೇವೆ ಎಂದುಕೊಂಡು, ಹಗಲಿರುಳೂ ಗಾಣಿಗನ ಕೋಣದಂತೆ ದುಡಿಯುವವರನ್ನು ಕಂಡರೆ ಅಂಥ ಜನಕ್ಕೆ ಬೇಸರವಾಗದೆ ಮತ್ತೇನಾಗಬೇಕು ? ಅವರು, ಡಾಕ್ಟರು ಮನೋವೈಜ್ಞಾನಿಕ ಚಿಕಿತ್ಸಾಕ್ರಮದಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲೆಂದು ವಿಯನ್ನಾಕ್ಕೆ ಕಳಿಸಿದ್ದೂ, ಇವರು ಇಲ್ಲಿಗೆ ಬಂದು ಹೀಗೆ–ಮನೆ, ಹೆಂಡತಿ, ಮಕ್ಕಳನ್ನು ಮರೆತು ದುಡಿಯಲೆಂದಲ್ಲ—'

' ಮತ್ತೇಕೆ ? '

' ಬೊಂಬಾಯಿನ ಶ್ರೀಮಂತ ಜನ, ಸೈಕಿಯಾಟ್ರಿಸ್ಟ್ (Psychiatrist) ಬಳಿ ಹೋಗುವುದೂ ಒಂದು ಫ್ಯಾಷನ್ ಎಂದು ಭಾವಿಸಿದಾರೆ. ಆದರಿಂದ ಇವರ ಬಳಿ ದೊಡ್ಡ ದೊಡ್ಡ ಶ್ರೀಮಂತರು, ಸಿನಿಮಾತಾರೆಯರು

ಅಡ್ಡಾಡಬಹುದು. ಇವರ ವೃತ್ತಿಯಿಂದ ತಮ್ಮ ಮೆರೆತಕ್ಕೆ ಅನುಕೂಲ ವಾಗಬಹುದು ಎಂದು ಭಾವಿಸಿ, ಇವರನ್ನು ಓದಲು ಕಳಿಸಿದರು. ಆದರೆ ಈಗ ಅವರೆಲ್ಲರ ಪಾಲಿಗೆ ಡಾಕ್ಟರು ಬಹು ದೊಡ್ಡ ನಿರಾಶೆಯಾಗಿದ್ದಾರೆ.'

' ಏಕೆ–ಡಾಕ್ಟರ ವೃತ್ತಿ ಅವರೆಲ್ಲಾ ನಿರೀಕ್ಷಿಸಿದಂತೆ ನಡೆಯುತ್ತಿಲ್ಲವೆ? ಅಥವಾ ಇವರು ನಿರೀಕ್ಷಿಸಿದಂಥ ರೋಗಿಗಳು ಡಾಕ್ಟರ ಬಳಿ ಬರುತ್ತಿಲ್ಲವೋ'

' ಎರಡೂ ಅಲ್ಲ. ಡಾಕ್ಟರ ಬಳಿ ಬರುವ ರೋಗಿಗಳ ಸಂಖ್ಯೆಗೂ ಕಡಮೆಯಿಲ್ಲ, ಅಥವಾ ಶ್ರೀಮಂತರು, ಸೊಗಸುಗಾರರು ಬರುತ್ತಿಲ್ಲ ಎಂತಲೂ ಅಲ್ಲ.'

' ಮತ್ತೆ ?'

' ಡಾಕ್ಟರು ಅವರನ್ನು ಶ್ರೀಮಂತರು, ಸಮಾಜ ಮುಖಂಡರು ಎಂಬ ದೃಷ್ಟಿಯಲ್ಲಿ ಕಂಡು, ಅವರ ಪರಿಚಯ ಬೆಳೆಸಿಕೊಂಡು ಅಲ್ಲಿ ಗಣ್ಯರಾಗಲು ಯತ್ನಿಸುತ್ತಿಲ್ಲ ಎಂದು. ಡಾಕ್ಟರದು ವಿಚಿತ್ರ ದೃಷ್ಟಿ–ಅವರು ತಮ್ಮ ಬಳಿಗೆ ಬರುವವರು ರೋಗಿಯೋ ಅಲ್ಲವೇ ಎಂಬುದಷ್ಟು ವಿನಾ, ಅವರು ರೋಗಿಗಳಾಗಿದ್ದರೆ ಆ ರೋಗವನ್ನು ಗುಣಪಡಿಸುವುದು ಹೇಗೆ ಎಂಬುದರ ಚಿಂತೆ ವಿನಾ–ಬೇರಾವ ಯೋಚನೆಯನ್ನು ಮಾಡುವುದಿಲ್ಲ. ಷೇರು ಮಾರ್ಕೆಟ್ಟಿನ ಶ್ರೀಮಂತನಾಗಲಿ, ಬಟ್ಟೆ ಗಿರಣಿಯ ಕೂಲಿಗಾರನಾಗಲಿ– ಇಬ್ಬರೂ ಅವರ ದೃಷ್ಟಿಯಲ್ಲಿ ಒಂದೆ ಹಾಗೆ ನೋಡಿದರೆ–ತಮ್ಮ ಬಳಿಗೆ ಬರುವ ಶ್ರೀಮಂತರಿಗಿಂತ ಬಡವರಿಗೇ ಹೆಚ್ಚು ಗಮನ ಕೊಡುತ್ತಾರೆ ಡಾಕ್ಟರು.'

' ಏಕೆ ? ಡಾಕ್ಟರ್ ದೃಷ್ಟಿಯಲ್ಲಿ ಎಲ್ಲರೂ ರೋಗಿಗಳೇ ತಾನೇ. ಅವರಲ್ಲೇ ಏಕೆ ವ್ಯತ್ಯಾಸ ಮಾಡುತ್ತಾರೆ? ಶ್ರೀಮಂತರಾಗಲಿ, ಬಡವ ರಾಗಲಿ–ರೋಗಿಗಳು ರೋಗಿಗಳೇ ಅಲ್ಲವೇ ?'

' ಹಾಗಲ್ಲ–ಡಾಕ್ಟರ ದೃಷ್ಟಿಯೇ ಬೇರೆ. '

' ಏನು ?'

' ಬಡವರಿಗೆ ಖಾಯಿಲೆಗಳು ತಾವಾಗಿಯೇ ಬರುತ್ತದೆ; ಶ್ರೀಮಂತರು ರೋಗಗಳನ್ನು ತಾವಾಗಿಯೇ ತಂದುಕೊಳ್ಳುತ್ತಾರೆ–ಎಂಬುದು ಡಾಕ್ಟರ ಖಚಿತಾಭಿಪ್ರಾಯ. ಎಂತಲೇ ಅವರು ಅನಿವಾರ್ಯವಾದ ಪರಿಸ್ಥಿತಿಯ

ಬಲಿಗಳಾಗಿ ಬಳಲುವ ಬಡವರತ್ತ ಹೆಚ್ಚಿನ ಲಕ್ಷ್ಯ ಕೊಡುತ್ತಾರೆ. ಅದರಿಂದಲೂ ಅವರ ಮನೆಯವರಿಗೆ ಡಾಕ್ಟರ ವಿಷಯದಲ್ಲಿ ಬೇಸರ ಹೆಚ್ಚಲು ಕಾರಣವಾಗಿದೆ. ಈ ವೇಳೆಗೆ ಅವರು ಚಿಲ್ರನ್ಸ್ ಕ್ಲಿನಿಕ್‌ನಲ್ಲಿರಬೇಕು ಎಂದು ಹೇಳಿದೆನಲ್ಲ. ಡಾಕ್ಟರು ಅದನ್ನು ಆರಂಭಿಸಿದುದು ಬಡವರ ಮಕ್ಕಳಿಗೆ ಅನುಕೂಲವಾಗಲೆಂದೇ. ಹೋಗಲಿ ಬಿಡಿ ಈಗೇನು ಆ ಮಾತು. ಡಾಕ್ಟರ ಪರಿಚಯವಾದಾಗ ನಿಮಗೇ ಅರ್ಥವಾಗುತ್ತದೆ—ಅವರು ಎಂಥವರೆಂದು. ನಾನೇಕೆ ಸಂಪಿಗೆಗೆ ಪರಿಮಳ ಕೊಡುವ ವೃಥಾ ಪ್ರಯತ್ನ ಮಾಡಲಿ ? '

' ಅಂತೂ ನಿಮ್ಮ ಮಾತು ಕೇಳಿದರೆ ಡಾಕ್ಟರು ಬಹಳ ' ರಿಮಾರ್ಕಬಲ್ ' ವ್ಯಕ್ತಿಗಳು ಅನಿಸುತ್ತದೆ. '

' ಹಾಗೆಂದರೆ ಅದು ಅತಿಶಯೋಕ್ತಿಯಂತೂ ಆಗುವುದಿಲ್ಲ. '

—ಎಂದು ನನ್ನ ಮಾತಿಗೆ ಉತ್ತರ ಕೊಟ್ಟು ಕುಸುಮಾ, ಹತ್ತಿರದಲ್ಲಿ ಹಾದು ಹೋಗುತ್ತಿದ್ದ ಬೇಬಿ ಟ್ಯಾಕ್ಸಿಯೊಂದನ್ನು ಕೈ ಬೀಸಿ ಕರೆದಳು.

ಇಬ್ಬರೂ ಟ್ಯಾಕ್ಸಿಯಲ್ಲಿ ಕುಳಿತ ಬಳಿಕ, ಆಕೆಯೇ ಟ್ಯಾಕ್ಸಿ ಡ್ರೈವರಿಗೆ ಹೋಗಬೇಕಾದ ದಾರಿಯನ್ನು ಹೇಳಿದಳು—

" ತಾರಾಪೂರ್‌ವಾಲಾ ಅಕ್ವೇರಿಯಮ್ ' ಬಳಿ ಇರುವ ' ಚಿಲ್ಡ್ರನ್ಸ್ ಪಾರ್ಕ್ ' ಲ್ಲಿ ಬಿಡು. '

ಸಂಜೆಯ ವೇಳೆಯ ಕಿಕ್ಕಿರಿದ ಜನಗಳು, ವಾಹನಗಳ ಗುಂಪಿನಲ್ಲಿ ನುಸುಳಿಕೊಂಡು ಟ್ಯಾಕ್ಸಿ ಆಕೆ ಹೇಳಿದ ಗುರಿಯತ್ತ ನಡೆಯಿತು.

# ಡಾ. ಘರಪುರೆ

# ೧

ಸಂಜೆಯ ಸೂರ್ಯನ ಹೊಂಬಿಸಿಲು, ಶಾಂತಸಾಗರದ ಕಡಲಲೆಗಳ ಮೇಲೆ ಅಲ್ಲಲ್ಲಿ ಬೆಳ್ಳಿ, ಬಂಗಾರ, ಹವಳವನ್ನು ಚಿಮುಕಿಸಿತ್ತು ಬಿಸಿಲು ಸೋಕದ ಹಸುರು–ನೀಲಿಯ ಬಣ್ಣದ ಅಲೆಗಳೂ, ನವಿಲುಗರಿಯಂತೆ ತಳ ತಳಿಸುತ್ತಿದ್ದವು. ಕಡಲ ದೇಹದಲ್ಲಿ ತೆಳು ಅಲೆಗಳ ಪುಳಕವನ್ನು ಮೂಡಿಸಿ ಬಂದ ತಂಗಾಳಿ, ತನಗಾಗಿಯೇ ದಂಡೆಯಲ್ಲಿ ಕಾದುಕುಳಿತ ಜನದ ಮೈಗೆ ತಂಪೆರೆದು ಹೊಸ ಉತ್ಸಾಹವನ್ನು ಮೂಡಿಸುತ್ತಿತ್ತು.

ಬೀದಿಯಲ್ಲಿ ಓಡಾಡುವ ಬಣ್ಣ ಬಣ್ಣದ ಕಾರುಗಳು, ಬಣ್ಣ ಬಣ್ಣದ ಬಟ್ಟೆಗಳನ್ನು ಬಗೆಬಗೆಯಾಗಿ ಧರಿಸಿ, ಯಾವ ಅವಸರವೂ ಇಲ್ಲದೆ ಓಡಾ ಡುವ ನಾನಾ ಜಾತಿ, ದೇಶದ ಜನ, ಸಂಜೆಯ ಶಾಂತಿಯ ಬಳ್ಳಿಯಲ್ಲಿ ಅರಳಿದ ಹೂವುಗಳಂತಿದ್ದರು

ಕಡಲ ದಂಡೆಗೆ ಇದಿರಾಗಿ ತಾರಾಪುರ್‌ವಾಲಾ 'ಅಕ್ವೇರಿಯಂ' (ಜಲಚರ ಸಂಗ್ರಹಾಲಯ) ಅದರ ಬದಿಯಲ್ಲೇ ಸಣ್ಣದಾದರೂ ಸುಂದರ ವಾದ ಉದ್ಯಾನ. ಉದ್ಯಾನದಲ್ಲಿ ಅಲ್ಲಲ್ಲಿ ನಿರ್ಮಿಸಿದ ಸಿಮೆಂಟಿನ ಜಾರು ಬಂಡೆಗಳು, ಮರದ ಉಯ್ಯಾಲೆಗಳು, ಏರಿಳಿದ ತೊಲೆಗಳು (Set show) ಮೊದಲಾದ ಮಕ್ಕಳ ಆಟದ ವಸ್ತುಗಳೇ, ಅದು ಮಕ್ಕಳ ಆಟಕ್ಕಾಗಿ ನಿರ್ಮಾಣವಾದ ಉದ್ಯಾನವೆಂದು ಸಾರಿ ಹೇಳುತ್ತಿದ್ದ ಅಲ್ಲಲ್ಲಿ ಬೆಳೆಸಿದ 'ಬೇಗೆನ್‌ವಿಲ್ಲಾ' ಬಳ್ಳಿಗಳ ಪೊದರೆಗಳನ್ನು ನವಿಲು, ಆನೆ, ಒಂಟೆ ಮೊದ ಲಾದ ನಾನಾ ಪಶುಪಕ್ಷಿಗಳ ಆಕಾರದಲ್ಲಿ ಕತ್ತರಿಸಿದ್ದರು. ಆಕಾಶದಿಂದ ಬಣ್ಣದಿಂದ ಮಕ್ಕಳ ಮನಸ್ಸನ್ನು ಸೆಳೆಯಬಲ್ಲ ನಾನಾ ಜಾತಿಯ ಗಿಡಮರ ಗಳು ಅಲ್ಲಿದ್ದವು.

ಉದ್ಯಾನದಲ್ಲಿ ಅಲ್ಲಲ್ಲಿ, ಒಂಟಿಯಾಗಿ, ಗುಂಪಾಗಿ, ಆಯಾಗಳು ದಬ್ಬುವ ಕೈ ಗಾಡಿ (Perambulators)ಗಳಲ್ಲಿ ನೂರಾರು ಮಕ್ಕಳು

ತುಂಬಿ, ತಮ್ಮ ನಗೆ, ಕುಣಿತದಿಂದ ಉದ್ಯಾನದ ಬಾಳನ್ನು ಸಾರ್ಥಕ ಗೊಳಿಸಿದ್ದವು.

ವನದ ಒಂದು ಪಾರ್ಶ್ವದಲ್ಲೇ ಡಾ. ಘರಪುರೆಯವರ ' ಶಿಶು ಚಿಕಿತ್ಸಾಲಯ ' (Children's Clinic). ಆಧುನಿಕ ರೀತಿಯಲ್ಲಿ, ಸೀಮೆಂಟಿನಿಂದ ನಿರ್ಮಿತವಾದ ಶುಭ್ರ ಶ್ವೇತವರ್ಣದ ಚಿಕಿತ್ಸಾಲಯದ ಭವನ, ಅಷ್ಟು ದೂರ ಇದ್ದವರನ್ನು ಹತ್ತಿರ ಬನ್ನಿ ಎಂದು ಕರೆಯು ವಂತಿತ್ತು. ತಳತಳಿಸುವ ಕಪ್ಪುಶಿಲೆಯ ದ್ವಾರಸ್ತಂಭಗಳು, ಅದೇ ಶಿಲೆಯ ನೆಲಗಟ್ಟು, ರಚನಾವಿನ್ಯಾಸದಿಂದಾಗಿ ಕಿರಿದಾದರೂ ವಿಶಾಲತೆಯ ಭಾವನೆ ಯನ್ನು ಮೂಡಿಸುವ ಕೈಸಾಲೆ, ಅಲ್ಲಿ ಆವರಿಸಿದ ಮೌನ—ಎಂಥ ಅಶಾಂತ ಚಿತ್ತದಲ್ಲೂ ಶಾಂತಿಯನ್ನು ಸೃಜಿಸುವಂತಿತ್ತು.

ಆ ಕೈಸಾಲೆಯಲ್ಲಿ ಒಂದು ಪಾರ್ಶ್ವಕ್ಕೆ ತಿರುಗಿ, ಸಣ್ಣದಾದ ' ಕಾರಿಡಾರ್ ' ದಾಟಿ ಹೋದರೆ ಮುಂದೆ ಒಂದು ವಿಶಾಲವಾದ ಹಾಲ್, ಹಾಲ್‌ನ ಗೋಡೆಗಳ ಮಕ್ಕಳ ಚಿತ್ತವನ್ನು ಸೆಳೆಯುವ, ಕುತೂಹಲವನ್ನು ಕೆರಳಿಸುವ ಚಿತ್ರಗಳು. ಗೋಡೆಯ ಬದಿಯಲ್ಲಿ ಅಲ್ಲಲ್ಲಿ ಪುಸ್ತಗಳಿಂದ ತುಂಬಿದ ಕಪಾಟುಗಳನ್ನಿಟ್ಟು, ಕಪಾಟುಗಳ ನಡುವಿನ ಜಾಗದಲ್ಲಿ ಅಲ್ಲಲ್ಲಿ ಒಂದು ವಿಗ್ರಹ ಕೂಡಿಸಿದ್ದರು, ನಾಲ್ಕು ಮೂಲೆಗಳಲ್ಲೂ ಮಿರುಗಿಹಾಕಿ ಹೊಳೆಯುವ ಹಿತ್ತಾಳೆಯ ಕುಂಡಗಳಲ್ಲಿ 'ಪಾಂ' ಗಿಡಗಳು, ಹಾಲ್‌ನ ಗೋಡೆಯ ತಿಳುನೀಲಿಯ ಬಣ್ಣದಲ್ಲಿ ತಮ್ಮ ದಟ್ಟ ಹಸುರನ್ನು ಬೆರೆಯಿಸಿ ತಂಪಿನ ಬುಗ್ಗೆಗಳಂತಿದ್ದವು.

ನಾಲ್ಕು ಕಡೆಗಳಲ್ಲೂ ತೆರೆದ ವಾತಾಯನಗಳಿಂದ ಬಂದ ಗಾಳಿ, ಬೆಳಕು ತುಂಬಿದ ಹಾಲಿನ ಮಧ್ಯದಲ್ಲಿ ಅಲ್ಲಲ್ಲಿ ಎತ್ತರವಲ್ಲದ ಮೇಜು, ಬೆತ್ತದ ಕುರ್ಚಿಗಳನ್ನು ಇಟ್ಟಿದ್ದರು.

ಕೆಲವು ಮೇಜುಗಳ ಮೇಲೆ ಬೇರೆ ಬೇರೆ ಭಾಷೆಯಲ್ಲಿ ಪ್ರಕಟವಾದ ಮಕ್ಕಳ ಪತ್ರಿಕೆಗಳನ್ನು ಓರಣವಾಗಿ ಜೋಡಿಸಿದ್ದರು. ಅಲ್ಲಲ್ಲಿ ಕೆಲವು ಮೇಜುಗಳ ಮುಂದೆ ಬಿಳಿಯ ' ಏಪ್ರನ್ ' (Apron)ಗಳನ್ನು ಕೆಲವರು, ತಮ್ಮ ಇದುರಿಗೆ ಕುಳಿತ ಮಕ್ಕಳೊಂದಿಗೆ ಮಾತನಾಡುತ್ತಿದ್ದರು; ಕೆಲವರು ಮತ್ತೆ ಕೆಲವು ಮಕ್ಕಳಿಗೆ ಏನೋ ಚಿತ್ರಗಳನ್ನೋ, ಬೊಂಬೆಗಳನ್ನೋ

ತೋರಿಸುತ್ತಾ, ಅದಕ್ಕೆ ಮಕ್ಕಳ ಪ್ರತಿಕ್ರಿಯೆಯನ್ನು ಅರಿಯಲು ಯತ್ನಿಸುತ್ತಿದ್ದರು. ಅಲ್ಲೊಬ್ಬ ಇಲ್ಲೊಬ್ಬ ಹೆಂಗಸರೂ ಇದ್ದರು.

ಹಾಲ್‌ನಲ್ಲಿ ಸುಮಾರು ಹತ್ತಿಪ್ಪತ್ತು ಜನ ಇದ್ದರೂ, ಎಲ್ಲರೂ ಏನೋ ಮಾತಿನಲ್ಲಿ ಕೆಲಸದಲ್ಲಿ ತೊಡಗಿದ್ದರೂ, ಅವರಿಂದ ಹಾಲಿನಲ್ಲಿ ವ್ಯಾಪಿಸಿದ ನಿಶ್ಶಬ್ದತೆಗೆ ಭಂಗ ಬಂದಿರಲಿಲ್ಲ ಗದ್ದಲ ಮಾಡಲೇಬೇಕೆಂದು ಬಂದವರೂ ಮೌನವಾಗುವಂತಿತ್ತು ಹಾಲಿನ ವಾತಾವರಣ.

ಕುಸುಮಾ ಅದು ಶಿಶು ಚಿಕಿತ್ಸಾಲಯವೆಂದು ಹೇಳದೇ ಹೋಗಿದ್ದಿದ್ದರೆ, ನಾನಂತೂ ಯಾರು ಆಣೆ ಇಟ್ಟು ಹೇಳಿದರೂ ಅದೊಂದು ಚಿಕಿತ್ಸಾಲಯ, ಅಲ್ಲಿರುವ ಮಕ್ಕಳು ಚಿಕಿತ್ಸೆಗೆಂದು ಬಂದ ರೋಗಿಗಳು ಎಂದು ಖಂಡಿತ ನಂಬುತ್ತಿರಲಿಲ್ಲ ಆಕೆ ಹೇಳಿದ ಮೇಲೂ ನನಗದು ಚಿಕಿತ್ಸಾಲಯದಂತೆ ಕಾಣದೆ, ಶಾಂತಿನಿಲಯದಂತೆ, ಮಕ್ಕಳ ವಾಚನಾಲಯದಂತೇ ಕಾಣಿಸಿತು.

ತನಗೆ ನಮಸ್ಕರಿಸಿದ ಪರಿಚಿತರನ್ನು ಪ್ರತಿನಮಸ್ಕರಿಸಿ, ನನಗೆ ಕೂಡುವ ಸ್ಥಳ ತೋರಿಸಿ, ನನ್ನ ಮುಂದೆ ಒಂದೆರಡು ಮಾಸಪತ್ರಿಕೆಗಳನ್ನು ತಂದಿರಿಸಿ, ಕುಸುಮಾ, ಕೇಳಿಯೂ ಕೇಳಿಸದಷ್ಟು ಮೃದುವಾದ ಸ್ವರದಲ್ಲಿ—

'ನೀವು ಇಲ್ಲಿರಿ ರಾವ್. ನಾನು ಹೋಗಿ ಡಾಕ್ಟರು ಬಂದಿದಾರೋ, ಬಿಡುವಾಗಿದಾರೋ ಏನೋ ನೋಡಿಕೊಂಡು ಎರಡು ನಿಮಿಷದಲ್ಲಿ ಬಂದು ಬಿಡುತ್ತೇನೆ.'

—ಎಂದು ಹೇಳಿ ಹೋದಳು

ಆಕೆ ಹೇಳಿದಂತೆಯೇ ನಾನು ಆಕೆ ಹಿಂದಿರುಗಿ ಬರುವುದನ್ನೇ ಕಾಯುತ್ತಾ ಕುಳಿತೆ.

ಹಾಲಿನ ಪ್ರಶಾಂತ ವಾತಾವರಣ, ಕಡಲ ಕಡೆಯಿಂದ ಬೀಸಿ ಬರುವ ಗಾಳಿ ನನ್ನೆದೆಯ ಭಾವಗಳ ಸೂಕ್ಷ್ಮ ಏರಿಳಿತವನ್ನು ತಗ್ಗಿಸಿ, ಅತ್ತಿತ್ತ ನೋಡಬೇಕೆಂಬ ಕುತೂಹಲವನ್ನು ಕರಗಿಸಿ, ನಾನು ಹಿಂದೆಂದೂ ಅನುಭವಿಸದಂಥ ಗಾಢ ಶಾಂತಿಯನ್ನು ನನ್ನೆದೆಯಲ್ಲಿ ತುಂಬಿದವು.

ಮೆತ್ತನೆಯ ಕುರ್ಚಿಯ ಬೆನ್ನಿಗೆ ಮೈಯೊರಗಿಸಿ ಕುಳಿತೆ.

ಹಕ್ಕಿಯ ಕುಪ್ಪಳದಷ್ಟು ಮೃದುವಾದ ಶಾಂತಿ ನನ್ನ ಮೈ—ಮಿದುಳನ್ನು ಆಲಂಗಿಸಿತು.

# ೨

ಡಾಕ್ಟರು ಇದಾರೋ ಇಲ್ಲವೋ ನೋಡಿ ಬರುತ್ತೇನೆಂದು ಹೇಳಿ ಹೋದ ಕುಸುಮ ಹೇಳಿದಂತೆಯೇ ಎರಡು ನಿಮಿಷಗಳಲ್ಲೇ ಹಿಂದಿರುಗಿ ಬಂದು—

' ಡಾಕ್ಟರು ಇದಾರೆ, ಬನ್ನಿ '

—ಎಂದು ಹೇಳಿ ನನ್ನನ್ನು ಡಾಕ್ಟರ ಖಾಸಗಿ ರೂಂನ ಕಡೆ ಕರೆದು ಕೊಂಡು ಹೋದಳು.

ಡಾಕ್ಟರನ್ನು ನೋಡುವ ಮೊದಲೇ ಕುಸುಮಾ ಅವರ ಬಗ್ಗೆ ವ್ಯಕ್ತ ಪಡಿಸಿದ ಭಾವನೆಗಳನ್ನು ಕೇಳಿ ನನ್ನ ಮನಸ್ಸಿನಲ್ಲಿ ನಾನು ಏನೋ ಒಂದು ಚಿತ್ರವನ್ನು ಮೂಡಿಸಿಕೊಂಡಿದ್ದೆ.

ತಲೆಯ ಮೇಲೆ ಸಣ್ಣಗೆ ಕತ್ತರಿಸಿದ ಅರೆನರೆತು, ತೈಲಲೇಪದಿಂದ ಮಿನುಗುತ್ತಿರುವ ಕ್ರಾಪು, ಸದಾ ಚಿಂತೆಯನ್ನು ಸೂಚಿಸುವ ಅಸ್ಪಷ್ಟವಾದ ರೇಖೆಗಳನ್ನುಳ್ಳ ವಿಶಾಲವಾದ ಹಣೆ, ತೀಕ್ಷ್ಣವಾದ ನೋಟದ, ಗಂಭೀರ ಭಾವದ ಕಣ್ಣುಗಳು, ನೀಳವಾದ, ಮೊನೆಚಾದ ಮೂಗು, ಸ್ವಲ್ಪವೂ ಸಂದು ಬಿಡದಂತೆ ನೇರಿದ ತೆಳುವಾದ ತುಟಿಗಳು, ಫ್ರೆಂಚರು ' ಗೋಟ್ ' ಎಂದು ಕರೆಯುವಂತೆ, ಚೂರಿಯಾಕಾರದ ಗಡ್ಡ—

ನಿಜ—ಹಾಲಿವುಡ್ಡಿನ ಚಿತ್ರಗಳಲ್ಲಿ ನೋಡಿದ ಸೈಕಿಯಾಟ್ರಿಸ್ಟರ ಚಿತ್ರ ಅದು—

ಎಂದೂ, ಯಾವ ಮನೋವಿಜ್ಞಾನಿಯನ್ನು ನೋಡದ ನನ್ನ ಮನಸ್ಸು, ಡಾ. ಘರಪುರೆಯವರೆಂದರೆ ಅದೇ ಚಿತ್ರವನ್ನೇ ಚಿತ್ರಿಸಿ ಕೊಂಡಿತ್ತು.

ಆದರೆ ನಾನು ಕಣ್ಣಾರೆ ಕಂಡ ಘರಪುರೆಯವರ ಚಿತ್ರ ಅಲ್ಲ ಅದು.

ಅವರನ್ನು ನೋಡುತ್ತಿದ್ದ ಹಾಗೇ ನನಗೆ ಅನಿಸಿದ ಭಾವನೆ—ಎಷ್ಟು ಯುವಕ ಈತ.

ಬಾಚಿದ್ದರೂ ಯಾವಾಗಲೋ ಆ ಸಂಸ್ಕಾರವನ್ನು ಕಳೆದುಕೊಂಡು, ಪೊದೆಯಾಗಿ ಕಂದು ಬಣ್ಣದ ಗುಂಗುರು ಗುಂಗುರು ಕೂದಲು. ನಗು

ತುಂಬಿ ಚೆಲ್ಲುವ ಕಣ್ಣುಗಳು, ಒಂದು ಹಲ್ಲು ಬಹುಸ್ವಲ್ಪ ಹೊರಗೆ ಕಾಣುವ ತುಂಬುದುಟಿಗಳು, ಮೊಂಡಾಗಿ ಉಬ್ಬಿದ ಗಲ್ಲ—ಖಂಡಿತವಾಗಿಯೂ ಸುಂದರ ಎಂದು ಕರೆಸಿಕೊಳ್ಳುವಂಥ ವ್ಯಕ್ತಿಯಲ್ಲ ಡಾ. ಘರಪುರೆ

ಆದರೂ, ಆದರೂ—ಆ ವ್ಯಕ್ತಿತ್ವದಲ್ಲಿ ಏನೋ ಒಂದು ಅವ್ಯಕ್ತ ಆಕರ್ಷಣೆ, ಎಂಥದೊ ಚುಂಬಕ ಶಕ್ತಿ ಇದ್ದಂತಿತ್ತು ಮೊದಲ ಬಾರಿಗೆ ಕಂಡವರಿಗೂ 'ಇವರು ಅಪರಿಚಯಸ್ಥರಲ್ಲ, ಬಹು ದಿನಗಳ ಹಿಂದೆ ಅಗಲಿದ ಆತ್ಮೀಯರು' ಎನಿಸುವಂಥ ಒಂದು ಶಕ್ತಿ ಇತ್ತು ಡಾಕ್ಟರಲ್ಲಿ

ಅವರ ಕಾರ್ಯಾಲಯವೂ ಅಷ್ಟೆ—

ಡಾಕ್ಟರ ರೋಗಿಗಳನ್ನು ಪರೀಕ್ಷಿಸುವ 'ಆಫೀಸು' ಇದ್ದಂತಿರಲಿಲ್ಲ. ನಾನು ಎಷ್ಟೋ ಜನ ಡಾಕ್ಟರುಗಳ ಕೋಣೆಯನ್ನು ನೋಡಿದ್ದೇನೆ. ಆ ಕೋಣೆಗಳಲ್ಲಿ, ಅಲ್ಲಿಯ ವಾತಾವರಣದಲ್ಲಿ ಅದೆಂಥ ಶಕ್ತಿ ಇರುತ್ತದೋ ಏನೋ. ರೋಗಿಯಲ್ಲದವನಿಗೂ ರೋಗಿ ಎನಿಸಿ. ಏನೋ ಭಯ ಹಿಡಿದು ಕೊಂಡು, ಮೊಣಕಾಲು ಗಂಟುಮೇಣದಂತೆ ಮೆತ್ತಗಾಗಿ, ಏಕೋ—ಯಾವುದಾದರೂ ಕುರ್ಚಿ ಸಿಕ್ಕರೆ ಸಾಕು ಕುಳಿತುಕೊಂಡೇನು ಎನಿಸುತ್ತದೆ ಉಳಿದವರಿಗೆ ಹಾಗಾಗುತ್ತದೆಯೋ ಇಲ್ಲವೋ—ಆದರೆ ನನಗಂತೂ ಹಾಗನಿಸಿದ್ದುಂಟು.

ಆದರೆ ಡಾ. ಘರಪುರೆಯುವರ ಕೋಣೆಯಲ್ಲಿ ಮಾತ್ರ ನನಗೆ ಹಾಗನಿಸ ಲಿಲ್ಲ. ಭೀತಿಯನ್ನು ಮೂಡಿಸುವಂಥ ಪ್ರಭಾವ ಅಲ್ಲಿ ಕಾಣದೆ, ಅದಕ್ಕೆ ಪ್ರತಿಯಾಗಿ ಏನೋ ಭರವಸೆ, ನಂಬಿಕೆ, ಧೈರ್ಯವನ್ನು ಮೂಡಿಸಿ, ಬಂದವನಿಗೆ 'ನೀನು ರೋಗಿಯಲ್ಲ, ಮನುಷ್ಯ; ನಾನು ಡಾಕ್ಟರಲ್ಲ, ಮಿತ್ರ' ಎಂದು ಬೆನ್ನು ತಟ್ಟಿ ಹೇಳುವಂಥ ವಾತಾವರಣವಿತ್ತು.

ನಾವು ಕೋಣೆಯೊಳಗೆ ಕಾಲಿಡುತ್ತಿದ್ದ ಹಾಗೇ ನಮ್ಮನ್ನು ಸ್ವೀಕರಿ ಸಲು ತಮ್ಮ ಆಸನದಿಂದ ಎದ್ದು ನಿಂತ ಡಾ. ಘರಪುರೆಯುವರನ್ನು, ಅವರ ಕೋಣೆಯನ್ನು ನಾನು ನೋಡುತ್ತಿರುವಾಗಲೇ, ಕುಸುಮಾ—

'ಡಾಕ್ಟರ್—ಇವರು ನಮ್ಮ ನಾಡಿನ ಒಳ್ಳೇ ಲೇಖಕರು—ರಾವ್. ರಾವ್—ಇವರೇ ಡಾ. ಘರಪುರೆ.'

—ಎಂದು ನಮ್ಮಿಬ್ಬರ ಪರಿಚಯ ಮಾಡಿಸಿದಳು.

'Very happy to have met you Doctor' (ಡಾಕ್ಟರ್ ತಮ್ಮನ್ನು ಕಂಡು ಸಂತೋಷವಾಯಿತು.)

—ಎಂದು ಹೇಳಿ ನಾನು ಡಾಕ್ಟರು ಮುಂದೆ ಚಾಚಿದ ಕೈ ಹಿಡಿದು ಕುಲುಕಿದೆ.

'The pleasure is all mine. (ಸಂತೋಷವೆಲ್ಲ ನನ್ನದು) ಕುಳಿತುಕೊಳ್ಳಿ. ಟೀ ಕುಡಿಯುತ್ತೀರೊ ಅಥವಾ ಏನಾದರೂ ಕೋಲ್ಡ್ ಡ್ರಿಂಕ್ಸ್ ತರಿಸಲೊ ?'

—ಡಾಕ್ಟರು ತಾವೂ ಕುಳಿತು ಕೇಳಿದರು.

'ಟೀ, ಏನೂ ಬೇಡ ಡಾಕ್ಟರ್. ಬರುವಾಗತಾನೇ ಕುಡಿದು ಕೊಂಡು ಬಂದೆವು'

—ಕುಸುಮಾ ನನಗಿಂತ ಮುಂಚಿತವಾಗಿ ತಾನೇ ಹೇಳಿದಳು.

'ಕುಸುಮಾ—ನೀನು ಮನೆಯ ಹುಡುಗಿ, ನೆನಪಿರಲಿ ಹೊರಗಿನವಳಂತೆ ಸಭ್ಯಾಚಾರದ ಮಾತಾಡಬೇಡ, ನನ್ನೊಂದಿಗೆ 'ಹೋಸ್ಟ್' ಆಗಿ, ರಾವ್ ಬೇಡವೆಂದರೆ ತೆಗೆದುಕೊಳ್ಳಿ ಎಂದು ಹೇಳು. Come on Rao. ಹೆಂಗಸರ ಮಾತಿಗೆ ಗಂಡಸರು ಕಿವಿ ಸೋಲಬಾರದು, ನನ್ನ ಜೊತೆ ಸೇರಿಕೊಳ್ಳಿ. ಏನು ಬೇಕು ಹೇಳಿ?'

—ಡಾ ಘೊರಪುರೆ, ಕುಸುಮಾ ಕಡೆ ನೋಡಿ ಕಣ್ಣು ಮಿಟುಕಿಸಿ ನಗುತ್ತಾ ಹೇಳಿದರು.

ಅವರ ಮಾತು ಕೇಳಿ ನಾನೂ, ಕುಸುಮಾ ಇಬ್ಬರೂ ನಕ್ಕೆವು. ನಮ್ಮನ್ನೇನು ಮಂಜುಗಡ್ಡೆಯನ್ನು ಕರಗಿಸುವಂಥ ಶಕ್ತಿಯಿತ್ತು ಡಾಕ್ಟರ ನಗುವಿಗೆ.

'ಟೀಯೋ—ಕೋಲ್ಡ್ ಡ್ರಿಂಕೋ—ಏನಾದರೂ ತರಿಸಿ ಡಾಕ್ಟರ್'

—ಎಂದೆ ನಾನು.

'That is like a man! (ಅದು ಗಂಡಸಿನ ಮಾತು)'

—ಎಂದು ಡಾಕ್ಟರು, ಆಳನ್ನು ಕರೆಯುವ 'ಬೆಲ್ಲ'ನ್ನು ಒತ್ತಿ, ಆದರ ಕರೆಗೆ ಉತ್ತರವಾಗಿ ಬಂದ ಆಳಿಗೆ ಮೂರು 'ಟೀ' ತರುವಂತೆ ಹೇಳಿಕಳಿಸಿ,

ತಾವು ಒಂದು ಸಿಗರೇಟನ್ನು ಹೊತ್ತಿಸಿಕೊಂಡು, ತಮ್ಮ ಸಿಗರೇಟಿನ ಪೆಟ್ಟಿಗೆಯನ್ನು ನನ್ನ ಮುಂದೆ ದಬ್ಬಿದರು.

ಅವರ ಆ ವರ್ತನೆಯನ್ನೇ ಆಹ್ವಾನವೆಂದು ಭಾವಿಸಿ, ನಾನೂ ಒಂದು ಸಿಗರೇಟು ತೆಗೆದು ಹೊತ್ತಿಸಿದೆ.

' ಇದೇ ಬೊಂಬಾಯಿಗೆ ನಿಮ್ಮ ಮೊದಲ ಭೇಟಿಯೋ ರಾವ್ ? '

—ಸಿಗರೇಟಿನ ಹೊಗೆಯನ್ನು ಸೂರಿನತ್ತ ಊದಿ ಕೇಳಿದರು ಡಾ. ಘರಪುರೆ

' ಹೌದು '

' ಹಾಗೇ—ಎಲ್ಲಿ ಇಳಿದುಕೊಂಡಿದೀರಾ ? '

' ಇಲ್ಲೇ ಹತ್ತಿರದಲ್ಲಿ—ಹೋಟೆಲ್‌ನಲ್ಲಿ '

' ಏನು—ಹೋಟೆಲ್‌ನಲ್ಲೇ ? ಬೇರೆಲ್ಲೂ ಒಳ್ಳೆಯ ಹೋಟಲಿನಲ್ಲಿ ಸ್ಥಳ ಸಿಗಲಿಲ್ಲವೇ ? ಇದೆಂಥ ಅನ್ಯಾಯ ಕುಸುಮಾ ? ಅಷ್ಟು ದೂರದಿಂದ ಬಂದ ರಾವ್ ಆ ಹೋಟಲಿನಲ್ಲಿಳಿಯಬೇಕೇ ? ಬೊಂಬಾಯಿನಲ್ಲಿ ಒಳ್ಳೆ ಹೋಟಲುಗಳಿಗೆ ಬರಗಾಲವೇ?'

—ನಾನು ಯಾವುದೋ ಹೋಟಲಿನಲ್ಲಿ ಇಳಿದುಕೊಂಡ ತಪ್ಪಿಗೆ ಕುಸುಮಾಳನ್ನೇ ಆಪಾದಿಸುವಂತೆ ಕೇಳಿದರು ಡಾಕ್ಟರು. ಅವರ ಪ್ರಶ್ನೆಗೆ ಕುಸುಮಾ ಉತ್ತರ ಕೊಡುವುದರ ಮೊದಲು ನಾನೇ ಹೇಳಿದೆ—

' ನಾನು ಆ ಹೋಟಲಿನಲ್ಲಿ ಇಳಿದುಕೊಂಡುದರಲ್ಲಿ ಈಕೆಯ ತಪ್ಪೇನೂ ಇಲ್ಲ.'

'Don't try to be chivalrous Rao. ಈ ಹೆಂಗಸರೇ ಅಷ್ಟು, ಮಹಾ ಸ್ವಾರ್ಥಿಗಳು ಇವಳಿಗೆ ನೀವು ಇಳಿದುಕೊಳ್ಳಲು ಒಂದು ಒಳ್ಳೆ ಹೋಟಲು ಹುಡುಕುವುದಾಗಲಿಲ್ಲ, ಆದರೆ ನನ್ನ ಮುಂದೆ ತನ್ನ ಪ್ರತಿಷ್ಠೆ ಗಳಿಸಿಕೊಳ್ಳಲು ನಿಮ್ಮನ್ನು ನನ್ನ ಹತ್ತಿರ ಕರೆತರುವುದು ಮಾತ್ರ ಬೇಕಿತ್ತು. ಇಂಥ ಸ್ನೇಹಿತೆ ಕುಸುಮಾ ?'

—ಎಂದರು ಡಾಕ್ಟರು. ಆ ಮಾತನ್ನವರು ನಗುನಗುತ್ತಾ ಹೇಳಿದರೂ, ಆ ನಗುವಿನಲ್ಲೂ ನವಿರಾದ ಹಂಗಿಸುವಿಕೆಯ ಎಳೆ ಇತ್ತು. ಎಂತಲೇ ಆ ಮಾತು ಕೇಳಿ ಕುಸುಮಳ ಮುಖ ಕೆಂಪಾಯಿತು.

‘ ಕ್ಷಮಿಸಿ ಡಾಕ್ಟರ್, ತಪ್ಪು ನನ್ನದಲ್ಲ. ಇವರು ಇಲ್ಲಿಗೆ ಬರುವುದು ನನಗೆ ತಿಳಿದಿರಲಿಲ್ಲ ...’

—ಕುಸುಮಾ ಹೇಳಿದಳು. ಆಕೆ ತನ್ನ ಮಾತನ್ನು ಮುಗಿಸುವ ಮೊದಲು ನಾನೇ ಮಾತನ್ನು ಮುಂದುವರಿಸಿ ಹೇಳಿದೆ—

‘ ಅಷ್ಟೇ ಅಲ್ಲ ಡಾಕ್ಟರ್, ಈ ಸಂಜೆಯುವರೆಗೂ ಜಗತ್ತಿನಲ್ಲಿ ಇಂಥ ವರು ಒಬ್ಬರು ಇದ್ದಾರೆ ಎಂಬುದೇ ನನಗಿ ತಿಳಿದಿರಲಿಲ್ಲ. ಈ ಜೀವನದಲ್ಲಿ ಈ ಸಂಜೆಯದೇ ಮೊದಲಭೇಟಿ-ನಮ್ಮಿಬ್ಬರಿಗೂ. ಈ ದಿನವೂ ನಮ್ಮೀ ರ್ವರ ಪರಿಚಯವಾದದ್ದು, ನಾನು ನಿಮ್ಮನ್ನು ಪರಿಚಯಮಾಡಿಕೊಂಡದ್ದು ಎಲ್ಲಾ ಕುಸುಮಳ ಕರುಣೆಯ ಸವಿ.’

‘ ನಿಜವೇ ?’

—ನಮ್ಮಿಬ್ಬರ ಮಾತನ್ನು ನಂಬದಂತೆ ಕೇಳಿದರು ಡಾಕ್ಟರು.

‘ ಮತ್ತೇನು-ಸುಳ್ಳು ಹೇಳುತ್ತಿದ್ದೇನೆಯೇ? ನಮ್ಮಿಬ್ಬರ ಪರಿಚಯ ವಾದ ರೀತಿಯು ಬಹಳ ಸ್ವಾರಸ್ಯವಾಗಿದೆ.’

—ಎಂದು ನಾನು, ಆದಿನ ಸಂಜೆ ನಡೆದ ಘಟನೆಯನ್ನು ತಿಳಿಸಿದೆ.

ನಾನು ಹೇಳಿದುದೆಲ್ಲವನ್ನು ಸಮಾಧಾನವಾಗಿ ಕೇಳಿ, ಬಾಯಲ್ಲಿ ತುಂಬಿದ ಸಿಗರೇಟಿನ ಹೊಗೆಯನ್ನುಗುಳಿ ಹೇಳಿದರು ಡಾಕ್ಟರು—

‘ ಹಾಗಿದ್ದರೆ ನನಗೆ ಬಹಳ ಸಂತೋಷ. ನನಗೆ ಬಹು ಆಪ್ತಳಾದ ಹುಡುಗಿ ನಿಮ್ಮ ವಿಷಯದಲ್ಲಿ ಚೆನ್ನಾಗಿ ನಡೆದುಕೊಂಡಳು ಎಂಬುದೊಂದೇ ಕಾರಣಕ್ಕಲ್ಲ ರಾವ್, ಅದಕ್ಕಿಂತಲೂ ಬಹು ದೊಡ್ಡ ಕಾರಣಕ್ಕಾಗಿ, ನನಗೆ ಅತ್ಯಂತ ಸಂತೋಷವಾಗಿದೆ.’

—ಡಾಕ್ಟರು ಆ ಮಾತುಗಳನ್ನು ಕೇಳುವಾಗ, ಅದುವರೆಗೂ ಅವರ ನುಡಿಗಳಲ್ಲಿದ್ದ ಹಗರುತನ ಮಾಯವಾಗಿ, ಮಾತುಗಳಲ್ಲಿ ಗಾಂಭೀರ್ಯದ ಭಾರ ತುಂಬಿತ್ತು.

‘ ನನಗೆ ಪರಿಚಯವಿಲ್ಲದ ದೊಡ್ಡವರ ಪರಿಚಯವನ್ನು ನಾನಾಗಿಯೆ ಮಾಡಿಕೊಂಡದ್ದರಲ್ಲಿ ಹೆಚ್ಚಿನ ವಿಶೇಷವೇನು ಬಂತು ಡಾಕ್ಟರೇ ?’

—ಡಾಕ್ಟರ ಮಾತನ್ನು ಕೇಳಿ ಕುಸುಮಾ ಚಕಿತಳಾಗಿ ಕೇಳಿದಳು—

‘ ಹಾಗೂ ನನ್ನ ಉದ್ದೇಶವನ್ನು ‘ಅನಾಲೈಸ್’ (Analyse)

ಮಾಡಿ ನೋಡಿದರೆ—ಪ್ರಾಯಶಃ ಅದರಲ್ಲಿ ನನ್ನ ಹಿರಿತನತನಕ್ಕಿಂತ ಸ್ವಾರ್ಥವೇ ಕಾಣಬಹುದು. ನಮ್ಮ ಸೀಮೆಯಲ್ಲಿ ಇವರು ಹತ್ತಾರು ಜನಕ್ಕೆ ಪರಿಚಿತರಾದವರು, ಇಲ್ಲಿ ನೀವು ಖ್ಯಾತಿ ಪಡೆದವರು. ಇಬ್ಬರೂ ನನಗೆ ಪರಿಚಿತರು ಎಂದು ಹೇಳಿಕೊಳ್ಳುವ ಹೆಮ್ಮೆಯ ಭಾವನೆಯೋ ನನ್ನ ನಡತೆಗೆ ಪ್ರೇರೇಪಕವಾಗಿತ್ತು ಎಂದರೂ ಆ ತೀರ್ಮಾನ ಬಹುಶಃ ಸತ್ಯಕ್ಕೆ ಹೆಚ್ಚು ದೂರವಾಗುವುದಿಲ್ಲ. ಅಲ್ಲವೇ ಡಾಕ್ಟರ್.'

'ಕೇವಲ ಮನೋವಿಶ್ಲೇಷಣದ ದೃಷ್ಟಿಯಿಂದಲೇ ಹೇಳುವುದಾದರೆ- ನಿನ್ನ ಮಾತಿನಲ್ಲಿ ಹೆಚ್ಚು ಸುಳ್ಳಿಲ್ಲ ಕುಸುಂ. ಆದರೆ ನಾನದನ್ನು ಮನೋ ವಿಜ್ಞಾನಿಯಾಗಿ ಹೇಳಲಿಲ್ಲ.'

—ಡಾಕ್ಟರು ಹೇಳಿದರು.

'ಮತ್ತೆ ?'

—ನಾನೇ ಪ್ರಶ್ನೆಮಾಡಿದೆ.

'ಮನುಷ್ಯನಾಗಿ ಹೇಳಿದೆ. ಅದೂ ನಾನು ಆ ಮಾತನ್ನು ಎಷ್ಟು ತೃಪ್ತಿಯಿಂದ ಹೇಳಿದೆ ಎಂಬುದು ನಿಮಗೆ ತಿಳಿಯಲಾರದು ರಾವ್. ಈ ಬೃಹನ್ನಗರದ ಮಹಾರಣ್ಯದಲ್ಲಿ ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯ ನೊಂದಿಗೆ–ಯಾವುದೇ ಕಾರಣಕ್ಕಾದರೂ ಸರಿಯೆ–ಮನುಷ್ಯರಂತೆ ನಡೆದು ಕೊಂಡ ಎಂದರೆ, ಅದೊಂದು ಸಣ್ಣ ಪ್ರಮಾಣದ ಪವಾಡವೆಂದೇ ಹೇಳ ಬಹುದು.'

—ಡಾಕ್ಟರು ನೇರವಾಗಿ, ಇದುರಿಗೆ ಕುಳಿತ ನಮ್ಮಿಬ್ಬರಲ್ಲಿ ಯಾರ ಕಡೆಗೂ ನೋಡದೆ ಕಳಕಳಿ ತುಂಬಿದ ಧ್ವನಿಯಲ್ಲಿ ಅಷ್ಟು ಹೇಳಿ, ಇದ್ದ ಕ್ಕಿದ್ದಂತೇ ತಟಕ್ಕನೆ ತಮ್ಮ ಕಣ್ಣುಗಳನ್ನೆರಡನ್ನು ನನ್ನ ಕಡೆ ತಿರುಗಿಸಿ ಕೇಳಿದರು—

'ಪ್ರಾಮಾಣಿಕವಾಗಿ ಹೇಳಿ ರಾವ್–ಬೊಂಬಾಯನ್ನು ನೋಡಿ ನಿಮಗೆ ಏನನ್ನಿಸುತ್ತದೆ.'

ಹಾಗೆ ನೋಡಿದರೆ, ಡಾಕ್ಟರು ನನಗೆ ಹಾಕಿದುದು ತೀರಾ ಸಾಮಾನ್ಯ ವಾದ, ಸರಳವಾದ ಪ್ರಶ್ನೆ. ಹೊಸ ಊರಿಗೆ ಬಂದವನನ್ನು ಆ ಊರನ್ನು ಚೆನ್ನಾಗಿ ಬಲ್ಲ ಯಾರೂ ಕೇಳಬಹುದಾದಂಥ ಪ್ರಶ್ನೆ ಅದು. ನನ್ನ ಹತ್ತಾರು

ಪ್ರವಾಸಗಳಲ್ಲಿ ಎಷ್ಟೋ ಬಾರಿ ಬೇರೆಯುವರು ನನ್ನನ್ನು ಆ ಪ್ರಶ್ನೆ ಕೇಳಿದ, ನಾನೇ ಬೇರೆಯುವರನ್ನು ಆ ಪ್ರಶ್ನೆ ಕೇಳಿದ ನೆನಪಿದೆ. ಆ ಪ್ರಶ್ನೆಯಲ್ಲಿ ಅಸಾಧಾರಣ ಸಮಸ್ಯೆಯೇನೂ ಇಲ್ಲ. ಆದರೂ ತಟಕ್ಕನೆ ಡಾ. ಘರಪುರೆ ಯವರು ನನಗೆ ಆ ಪ್ರಶ್ನೆ ಹಾಕಿದಾಗ ನನಗೆ ಅದು ಸಾಮಾನ್ಯವೆಂದಾಗಲಿ, ಸರಳವೆಂದಾಗಲಿ ತೋರಲಿಲ್ಲ. ಅದಕ್ಕೆ ಪ್ರತಿಯಾಗಿ ಆ ಸಮಸ್ಯೆಯಲ್ಲೇನೊ ವಿಶೇಷ ಮಹತ್ವವಿದ್ದಂತೆ, ಆಳವಾಗಿ ಯೋಚಿಸಿ ಉತ್ತರ ಕೊಡಬೇಕಾದ ಪ್ರಶ್ನೆ ಎಂಬಂತೆಯೇ ತೋರಿತು.

ಎಂತಲೇ ಅವರ ಪ್ರಶ್ನೆಗೆ ಕೂಡಲೇ ಉತ್ತರ ಕೊಡದೆ, ಒಂದುಗಳಿಗೆ ಹಾಗೇ ಕುಳಿತು ಯೋಚಿಸಿದೆ—

‘ ಏನು ಉತ್ತರ ಹೇಳಲಿ ?’

ಡಾಕ್ಟರು ನನ್ನನ್ನು ಆ ಪ್ರಶ್ನೆ ಕೇಳಿದಾಗ ನನಗೆ ಹಾಗೇಕೆನಿಸಿತೊ, ಅದಕ್ಕೆ ನಾನು ತರ್ಕಸಮಂಜಸವಾದ ಉತ್ತರ ಹೇಳಲಾರೆ. ಪ್ರಾಯಶಃ ಸಂಜೆಯ ಮಬ್ಬು ಬೆಳಕೂ ಕಳೆದು, ಇನ್ನು ದೀಪ ಹಚ್ಚದ ಕೋಣೆಯಲ್ಲಿ ಕತ್ತಲೆ ನಿಧಾನವಾಗಿ ತನ್ನ ಪ್ರಭುತ್ವ ಸ್ಥಾಪಿಸುತ್ತಿತ್ತೋ ಏನೋ, ಅಥವಾ ಡಾಕ್ಟರು ಪ್ರಶ್ನಿಸಿದಾಗ ಯೋಚಿಸಲೆಂದು ತನ್ನ ದೃಷ್ಟಿಯನ್ನು ಎದುರಿಗಿದ್ದ ಮೇಜಿನ ಕಡೆ ಹರಿಸಿದಾಗ, ಗಾಜಿನ ಮೇಲುಹೊದಿಕೆಯಡಿಯಲ್ಲಿ ಕಪ್ಪಗೆ ಮಿಂಚುತ್ತಿದ್ದ ವಿಶಾಲವಾದ ಮೇಜನ್ನೇ ನೋಡಿ ಹಾಗನಿಸಿತೊ–ಏಕೊ, ಹೇಗೊ, ಅಂತೂ ಡಾಕ್ಟರು ನನಗೆ ಆ ಪ್ರಶ್ನೆ ಹಾಕುತ್ತಿದ್ದ ಹಾಗೇ, ತನ್ನ ಸುತ್ತಲೂ, ಅದುವರೆಗೂ ಕಾಣದಂತೆ ಕುಬ್ಜಾಕಾರ ತಳೆದು ಮಲಗಿದ ನೆರಳುಗಳು, ಇದ್ದಕ್ಕಿದ್ದ ಹಾಗೇ ನೀಳವಾಗಿ, ನಾಲ್ಕೂ ಕಡೆಯಿಂದ ನನ್ನ ಕಡೆಯೇ ಸರಿದಂತೆ ಭಾಸವಾಯಿತು.

ಡಾಕ್ಟರು ಇದ್ದಕ್ಕಿದ್ದಂತೆಯೇ ಕೇಳಿದ ಆ ಅತ್ಯಂತ ಸರಳವಾದ, ಆದರೆ ಏಕೊ ಬಹು ಜಟಿಲವೆಂದು ತೋರಿದ ಪ್ರಶ್ನೆಗೆ ಏನು ಉತ್ತರ ಕೊಡ ಬೇಕೆಂದು ಯೋಚಿಸುತ್ತಿದ್ದ ತನ್ನನ್ನು ಆ ಹೊತ್ತಿಗೆ ಸರಿಯಾಗಿ ಟೀ ತೆಗೆದು ಕೊಂಡು ಬಂದ ಆಳು, ಕೂಡಲೇ ಉತ್ತರ ಕೊಡುವ ಗಂಡಾಂತರದಿಂದ ಪಾರುಮಾಡಿದ.

‘ ನನ್ನ ಪ್ರಶ್ನೆಗೆ ನಿಧಾನವಾಗಿ ಉತ್ತರ ಕೊಡುವಿರಂತೆ ರಾವ್.

ಮೊದಲು ಟೀ ತೆಗೆದುಕೊಳ್ಳಿ. ನಿಮಗೆ ಗೊತ್ತಿದೆಯೊ ಇಲ್ಲವೋ–ಮರೆತು ಆರಿಸಿದ ಟೀ, ಮರೆತು ಕಾಯಿಸಿದ ಹೆಣ್ಣು–ಎರಡೂ ನಮಗೆ ಹಿತವಾಗುವುದಿಲ್ಲ.'

—ಎಂದು ನಗುತ್ತಾ ಹೇಳಿ ಆಳಿಗೆ ದೀಪ ಹಾಕುವಂತೆ ಹೇಳಿದರು ಡಾಕ್ಟರು.

ನನಗೆ ಏಕೊ ಅವರಾಡಿದ ಸ್ವಾರಸ್ಯವಾದ ಚಟೋಕ್ತಿಯನ್ನು ಕೇಳಿ ನಗಲೂ ಶಕ್ತಿ ಇರಲಿಲ್ಲ ಏನೊಂದೂ ಉತ್ತರ ಕೊಡದೆ ಸುಮ್ಮನೆ ಟೀ ಬಟ್ಟಲನ್ನು ಕೈಗೆತ್ತಿಕೊಂಡೆ.

ಆಳು ದೀಪ ಹಾಕಿದ.

೩

ಆಳು ದೀಪ ಹಾಕಿದುದರಿಂದಲೋ, ಅಥವಾ ಬಿಸಿಯಾದ ಟೀ ಹೊಟ್ಟೆಗೆ ಹೋದುದರಿಂದಲೋ ಮೈಯಲ್ಲಿ ಸ್ವಲ್ಪ ಚೈತನ್ಯ ಬಂದಂತಾಗಿ, ಮಿದುಳಿನ ನರಗಳಿಗೂ ಹಿಡಿದಿದ್ದ ಮಂಕು ತೊಲಗಿ, ಯೋಚಿಸುವ ಶಕ್ತಿ ಬಂದಂತಾಯಿತು.

ತಾವೂ ಟೀ ಕುಡಿದು ಮುಗಿಸಿದ ಡಾ. ಘರಪುರೆ, ಮತ್ತೆ ಕೇಳಿದರು—

'ಏನು ರಾವ್. ನನ್ನ ಪ್ರಶ್ನೆಗೆ ಉತ್ತರ ಕೊಡಲೇ ಇಲ್ಲವಲ್ಲ. ಬೊಂಬಾಯಿ ನೋಡಿ ನಿಮಗೇನು ಅನಿಸಿತು?'

'ಏನು ಅನಿಸುವುದೇನು ಡಾಕ್ಟರ್. ಬೊಂಬಾಯಿ ನಿಜವಾಗಿಯೂ ಮಹಾನಗರಿ. ಇಂದು ನನಗೇ ಆದ ಅನುಭವದ ಆಧಾರದ ಮೇಲೆ ಹೇಳುವುದಾದರೆ ಇದು ಮಹಾನಗರಿಯಷ್ಟೇ ಅಲ್ಲ, ಇಲ್ಲಿ ವಾಸಿಸುವವರನ್ನು ಈ ನಗರ ಉತ್ತಮರನ್ನಾಗಿ ಮಾಡುತ್ತದೆ.'

'So you too have fallen for this nut! (ನೀವೂ ಈ ವೇಶ್ಯೆಯ ಬಲೆಗೆ ಬಿದ್ದಿರಿ!)

—ನನ್ನ ಉತ್ತರ ಕೇಳುತ್ತಿದ್ದ ಹಾಗೇ ತಟಕ್ಕನೆ ಚುರುಕಾಗಿ ಕಟುವಾಗಿ ಹೇಳಿದರು ಡಾಕ್ಟರು.

ಅವರ ಮಾತನ್ನು ಕೇಳಿ ನನಗೇಕೋ ಕಕಮಕ ಹಿಡಿದ ಹಾಗಾಯಿತು. ಅವರ ಮಾತು ನನ್ನಷ್ಟೆ ಕುಸುಮಳನ್ನೂ ದಿಗ್ಭ್ರಾಂತಿಗೊಳಿಸಿದುದು ಆಕೆಯ ಮುಖದ ಮುದ್ರೆಯಿಂದ ಸ್ಪಷ್ಟವಾಗಿತ್ತು

'ನನಗೇ ಬಿಟ್ಟರೆ—ಈ ಬೊಂಬಾಯನ್ನಷ್ಟೇ ಅಲ್ಲ, ಇಂಥ ಎಲ್ಲ ದೊಡ್ಡ ದೊಡ್ಡ ನಗರಗಳನ್ನೂ ಡೈನಾಮೆಂಟ್ ಇಟ್ಟು ಉಡಾಯಿಸಿ ಬಿಡುತ್ತೇನೆ ನಿಮಗೆ ತಿಳಿಯದು ರಾವ್—ಮಾನವನಲ್ಲಿಯ ಮಾನವತೆಯನ್ನು ಹಿಂಡಿ ಹಿಪ್ಪೆ ಮಾಡಿ ಬಿಸುಡಲು ಆಧುನಿಕ ನಾಗರಿಕತೆ ನಿರ್ಮಿಸಿರುವ ರಾಕ್ಷಸಯಂತ್ರ ಈ ಮಹಾನಗರಗಳು. ಅಪ್ಟನ್ ಸಿಂಕ್ಲೇರ್‌ನ 'ಜಂಗಲ್' ಕಾದಂಬರಿಯನ್ನು ನೀವು ಓದಿರಬೇಕು. ಆತ ಚಿಕಾಗೋ ನಗರವನ್ನು 'ಅರಣ್ಯ' ಎಂದು ಕರೆದಿದಾನೆ. ಆ ಪಟ್ಟ ಚಿಕಾಗೋ ನಗರಕ್ಕಷ್ಟೇ ಅಲ್ಲ—ಜಗತ್ತಿನ ಎಲ್ಲ ನಗರಗಳಿಗೂ ಅನ್ವಯಿಸುತ್ತದೆ. ಈ ಕಾಡಿನಲ್ಲಿ ಮನುಷ್ಯ ಮನುಷ್ಯನನ್ನು ಬೇಟೆಯಾಡುತ್ತಾನೆ ಅಷ್ಟೇ ಅಲ್ಲ ರಾವ್—ಆ ಬೇಟೆಯಲ್ಲಿನ ಮೊದಲ ಬಲ ಮಾನವತೆ. ಮಾನವ ಬೇಟೆಗಾರ, ಅವನ ಬೇಟೆಯ ಮೃಗವಾದ ಮಾನವ ಪಶು—ಇಬ್ಬರಲ್ಲಿಯ ಮಾನವತೆಯೂ ನಷ್ಟವಾಗಿ ಹೋಗುತ್ತದೆ. ಈ ನಗರಗಳು ಮಾನವನ ಜೀವನದಲ್ಲಿ ಮೂಡಿಸುವ ಸಮಸ್ಯೆಗಳು ಒಂದೊಂದಲ್ಲ—ರಾವ್. ವಿಜ್ಞಾನ ಮುನ್ನಡೆಯುತ್ತಿದೆ ಎಂದು ನಾವು ಹೇಳಿಕೊಳ್ಳುತ್ತೇವಲ್ಲ ರಾವ್—ಏನು ಮುನ್ನಡೆಯುತ್ತಿದೆ ಎಂದು ತಿಳಿದುಕೊಂಡಿದೀರಿ. ವಿನಾಶದತ್ತ ಧಾವಿಸುತ್ತಿರುವ ಮಾನವತೆಯನ್ನು ಆ ವಿನಾಶದಿಂದ ಉಳಿಸುವ ಸೋಲೇ ಶತಸ್ಸಿದ್ಧವಾದ ಸ್ಪರ್ಧೆಯಲ್ಲೇ ನಾವು ಮುನ್ನಡೆಯುತ್ತಿರುವುದು. ಜ್ಞಾನ, ವಿಜ್ಞಾನಗಳೆಲ್ಲವೂ, ಆಧುನಿಕ ಜೀವನ ದಿನದಿನಕ್ಕೆ ಮೂಡಿಸುತ್ತಿರುವ ನಾನಾ ಸಮಸ್ಯೆಗಳನ್ನು ನಿವಾರಿಸಲೇ ವಿನಿಯೋಗವಾಗುತ್ತಿದೆ. ವಿಜ್ಞಾನ, ಒಂದು ಹೆಜ್ಜೆ ಮುಂದಿಟ್ಟರೆ, ಸಮಸ್ಯೆ ಅದಕ್ಕೆ ಮುಂದೆ ಹತ್ತು ಹೆಜ್ಜೆ ಹೋಗಿರುತ್ತದೆ. ರಕ್ತಬೀಜಾಸುರ ಅನ್ನುವನ ಕಥೆ ನೀವು ಕೇಳಿರಬೇಕು. ಒಬ್ಬ ಸತ್ತರೆ, ಅವನ ರಕ್ತದಿಂದಲೇ ನೂರು ಮಂದಿ ಹುಟ್ಟುತ್ತಿದ್ದರಂತೆ.

ವಿಜ್ಞಾನದ ಆಧುನಿಕ ಜೀವನದ ಸಮಸ್ಯಾ ನಿವಾರಣೆಯ ಪ್ರಯತ್ನವೂ ಇಂದು ಹಾಗೇ ಆಗಿದೆ. ವಿಜ್ಞಾನ ಒಂದು ಸಮಸ್ಯೆ ಬಗೆ ಹರಿಸಿದೆ ಎಂದರೆ ಆ ಸಮಸ್ಯೆಯಿಂದಲೇ ಮತ್ತೆ ನೂರು ತುದಿಸಮಸ್ಯೆಗಳು ಜನಿಸಿ, ಮಾನವನ ಪ್ರಯತ್ನವನ್ನು ಅಣಕಿಸುತ್ತವೆ. ಈ ಸಮಸ್ಯೆಗಳೆಲ್ಲದರ ಮೂಲಬೇರು, ಇಂದಿನ ನಾಗರೀಕತೆಯ ಕೇಂದ್ರವಾದ ನಗರ, ಇದು ಮೂಲೋತ್ಪಾಟನ ವಾಗದೆ, ಈ ಸಮಸ್ಯೆಗಳಾವೂ ಬಗೆ ಹರಿಯುವುದಿಲ್ಲವೆಂದೇ ನನಗೆ ತೋರುತ್ತದೆ.'

—ಡಾ. ಘರಪುರೆ ಬಹಳ ಆಳವಾಗಿ ವಿಚಾರ ಮಾಡಿ ತೀರ್ಮಾನಕ್ಕೆ ಬಂದವರಂತೆ ಹೇಳಿದರು.

ಆಧುನಿಕ ವಿಜ್ಞಾನಿಯೊಬ್ಬರು ನಗರ ಜೀವನದ ಬಗ್ಗೆ ಅಂಥ ನಿಷ್ಠುರ ಸಿದ್ಧಾಂತಕ್ಕೆ ಬಂದಿರುವುಧನ್ನು ನೋಡಿ ನನಗೆ ಆಶ್ಚರ್ಯವಾಯಿತು

'ವಿಜ್ಞಾನಿಯಾಗಿ ನೀವು ಈ ಮಾತಾಡುತ್ತಿದ್ದೀರಾ ಡಾಕ್ಟರ್ ?'

—ಎಂದು ಅಚ್ಚರಿಯಿಂದಲೇ ಕೇಳಿದೆ.

'ಮತ್ತೇನು—ಪ್ರಾಚೀನ ರೀತಿಯ ಅಂಥ ಉಪಾಸಕನಾಗಿ ಹೇಳಿದೆ ಅಂದುಕೊಂಡಿರಾ ರಾವ್? ವಿಜ್ಞಾನಿಯಾಗಿ, ಮನೋವಿಜ್ಞಾನಿಯಾಗಿ ಹೇಳುತ್ತಿದ್ದೇನೆ-ಈ ನಗರಗಳು ಇರುವವರೆಗೂ ಮಾನವತೆಗೆ ಉಳಿಗಾಲವಿಲ್ಲ, ಈ ನಗರಗಳಲ್ಲಿರುವವರು ಆರೋಗ್ಯ ಧೃಡಕಾಯರಾದ ಮನುಷ್ಯರು ಎಂದು ಕೊಂಡಿದೀರಾ?'

'ಅಲ್ಲವಾದರೆ ಮತ್ತೇನು?'

'ಊಹೂ—ಎಲ್ಲ ರೋಗಿಗಳು; ಹತ್ತು ದೈಹಿಕವಾದರೆ, ಉಳಿದ ತೊಂಭತ್ತು—ಮನೋರೋಗಿಗಳು. ಶತಶತಮಾನಗಳ ದಾಸ್ಯದ ಫಲ ವಾಗಿ, ದೇಶಜೀವನ, ವ್ಯಕ್ತಿಜೀವನದ ಮೇಲೆ ಮೂಡಿಸುವ ಬಗೆಬಗೆಯ ಒತ್ತಡಗಳ ಪರಿಣಾಮವಾಗಿ, ದೇಶದ ಜನರೆಲ್ಲಾ ಹಲ ಬಗೆಯ ಮನೋ ದೌರ್ಬಲ್ಯಗಳಿಗೆ ಬಲಿಯಾಗಿದ್ದಾರೆ. ಜನ ಸಾಂದ್ರತೆ ಕಡಮೆಯಾದ ಹಳ್ಳಿ ಗಳಲ್ಲಿ ಈ ಒತ್ತಡಗಳ (Pressures) ಪರಿಣಾಮ ಅಷ್ಟಾಗಿ ಕಾಣುವು ದಿಲ್ಲ. ಆದರೆ ಜನ ಕಿಕ್ಕಿರಿದ ಪಟ್ಟಣಗಳಲ್ಲಿ ಮಾತ್ರ ಅದು ಮತ್ತಷ್ಟು ಹೆಚ್ಚಾಗಿ, ಮತ್ತಷ್ಟು ತೀವ್ರವಾಗಿ ಕಾಣಿಸಿಕೊಳುತ್ತದೆ. ಆದುದರಿಂದಲೇ

ಗಾಂಧೀಜಿಯವರ ನಗರಗಳ ವಿಕೇಂದ್ರೀಕರಣವಾಗಬೇಕು ಎಂಬ ವಾದಕ್ಕೆ ವಿಜ್ಞಾನಿಗಳೂ ಒಪ್ಪಿದುದು.'

'ನಿಮ್ಮ ವಾದವನ್ನು ನಾನು ಅಲ್ಲವೆಂದು ಅಲ್ಲಗಳೆಯಲಾರೆ ಡಾಕ್ಟರ್, ಎಷ್ಟಾದರೂ ನೀವು ತಜ್ಞರು. ಯಾವುದು ಹೇಗೆಂಬುದು ನಿಮಗೆ ಗೊತ್ತು. ನೀವೇ ಹೇಳಿದ ಹಾಗೆ ಈ ಜಾಡ್ಯದಮೂಲ ದಾಸ್ಯವಾಗಿದ್ದರೆ, ಆ ಜಾಡ್ಯಕ್ಕೆ ಸ್ವಾತಂತ್ರ್ಯದ ಮಹೌಷಧಿ ಪ್ರಯೋಗ ಮಾಡಿದ್ದೇವಲ್ಲಾ ಎರಡು ದಿನ ತಡವಾಗಬಹುದು—ಆದರೆ ರೋಗನಿವಾರಣೆಯಾಗುವುದು ನಿಶ್ಚಯ ವಲ್ಲವೇ ?'

—ನಾನು ಮರುಪ್ರಶ್ನೆ ಮಾಡಿದೆ.

'ದಾಸ್ಯದ ಜಾಡ್ಯಕ್ಕೆ ಸ್ವಾತಂತ್ರ್ಯ ಔಷಧಿ ನಿಜ ರಾವ್. ಆದರ್ರೆ ರೋಗ ಗುಣವಾಗಲು ಚಿಕಿತ್ಸೆಗಿಂತ ಮೊದಲು ಸರಿಯಾದ ರೋಗಪರೀಕ್ಷೆ (Diagnosis) ನಡೆಸಬೇಕು ಇಲ್ಲವಾದಲ್ಲಿ ಚಿಕಿತ್ಸೆಯೂ ವಿಫಲ ವಾಗುತ್ತದೆ'

—ಡಾಕ್ಟರು ಹೇಳಿದರು.

'ಅಂದರೆ ಈಗ ಡೈಯಾಗ್ನೋಸಿಸ್ ಸರಿಯಾಗಿಲ್ಲವೆಂದೇ ನಿಮ ಭಾವನೆಯೇ ?'

'ನಿಜ'

'ಅಂದರೆ . '

'ಸ್ವಾತಂತ್ರ್ಯಕ್ಕೆ ಮೊದಲು ಎಲ್ಲದಕ್ಕೂ ದಾಸ್ಯವೇ ಕಾರಣವೆನ್ನು ತ್ತಿದ್ದ ಹಾಗೆ, ಸ್ವಾತಂತ್ರ್ಯ ಬಂದ ಬಳಿಕ ಎಲ್ಲದಕ್ಕೂ ಆರ್ಥಿಕ ಅಸಮತೆಯೇ ಕಾರಣ ಎನ್ನುವ ಭಾವನೆ ನಮ್ಮಮುಂದಾಳುಗಳಿಗೆ ಬಂದಿದೆ ರಾವ್.— ಒಂದುಗಳಿಗೆ ತಡೆಯಿರಿ—ನೀವೇನು ಆಡಬಯಸುತ್ತೀರೆಂದು ನಾನು ಬಲ್ಲೆ—'

—ಅವರ ಮಾತಿನ ನಡುವೆ ಮಾತಲಾಡಲೆತ್ನಿಸಿದ ನನ್ನನ್ನೂ ತಡೆದು ಹೇಳಿದರು ಡಾಕ್ಟರ್ ಘರಪುರೆ—

'ಮಾನವನ ಸಮಾಜಜೀವನಕ್ಕೆ ಹತ್ತಿದ ಪ್ರಬಲ ಜಾಡ್ಯಗಳಲ್ಲಿ ಆರ್ಥಿಕ ಅಸಮತೆಯೂ ಬಂತೆಂಬುದನ್ನು ಮರೆಯುವಷ್ಟು ಅಜ್ಞ ನಾನಲ್ಲ. ಆ ಜಾಡ್ಯ ತೀರಬೇಕಾದರೂ, ಇಂದು ಪ್ರತಿಯೊಬ್ಬನಲ್ಲೂ ಮಾಡಿರುವ

ಪರಸ್ಪರ ಸ್ಪರ್ಧೆಯ ಭಾವನೆ ತೊಲಗಿ, ಕೂಡಿ ಬಾಳಬೇಕು, ಕೂಡಿ ಬದುಕ ಬೇಕು ಎಂಬ ಭಾವನೆ ಬರಬೇಕು. ಇಂದು ಧರ್ಮ, ಭಾಷೆ, ದೇಶ, ಆರ್ಥಿಕ ಪರಿಸ್ಥಿತಿ ಎಲ್ಲವೂ ಒಬ್ಬನಲ್ಲಿ ಇನ್ನೊಬ್ಬನ ಬಗ್ಗೆ ಸ್ಪರ್ಧೆ ಎಂಬ ಭಾವನೆಯನ್ನೇ ಮೂಡಿಸಿರುವಾಗ, ಈ ಹುಚ್ಚು ಸ್ಪರ್ಧೆಯಲ್ಲಿ 'ನಾನು ಮಾನವ, ನನ್ನ ಬಳಿಯಲ್ಲಿರುವವರೂ ಮಾನವ' ಎಂಬ ಭಾವನೆ ಎಲ್ಲಿ ಉಳಿಯುತ್ತದೆ ಹೇಳಿ. ? ತನ್ನ ನೆರೆಯಾತ ತನ್ನ ಬದುಕಿಗೆ ವೈರಿ ಎಂಬ ಮನೋದೌರ್ಬಲ್ಯಕಿಂತ ಅಪಾಯಕಾರಿಯಾದ ಜಾಡ್ಯ ಮತ್ತೊಂದಿಲ್ಲ ರಾವ್. ಸಿಡಿಮದ್ದುಗಳಲ್ಲಿ ಟಿ. ಎನ್. ಟಿ. ಎಷ್ಟು ಅಪಾಯಕಾರಿಯೋ ಮಾನವನ ದೌರ್ಬಲ್ಯಗಳಲ್ಲಿ ಈ ಭಾವನೆಯೂ ಅಷ್ಟೇ ಅಪಾಯಕಾರಿ ಯಾದದ್ದು'

'ಅದು ನಿಜ ಡಾಕ್ಟರ್ ಆದರೆ ನಾವು ಆ ದೌರ್ಬಲ್ಯವನ್ನು ಗೆಲ್ಲಲು ಯತ್ನಿಸುತ್ತಿಲ್ಲ ಎಂದೇ ನಿಮ್ಮ ಅಭಿಪ್ರಾಯವೇ ?'

'ಗೆಲ್ಲಲು ಯತ್ನಿಸುತ್ತಿಲ್ಲ ಅಷ್ಟೇ ಅಲ್ಲ, ಅದೇ ಶಕ್ತಿ ಎಂದು ನಂಬಿ ನಡೆಯುತ್ತಿದ್ದೇವೆ ಅದಕ್ಕಿಂತಲೂ ಶೋಚನೀಯವಾದುದು–ನಮ್ಮ ಇಂದಿನ ಈ ಮನೋಭಾವನೆಯನ್ನೇ ಮುಂದಿನ ತಲೆಮಾರಿನಲ್ಲೂ ಮೂಡಿಸಲು ನಾವು ಯತ್ನಿಸುತ್ತೇವೆ. ನಗರಗಳು ಬರಲಿರುವ ಜನಾಂಗದಲ್ಲಿ ಆ ಬಗೆಯ ಭಾವನೆಯನ್ನು ಶಾಶ್ವತಗಳಿಸುವ ವಿಶ್ವವಿದ್ಯಾಲಯಗಳಾಗಿವೆ'

'ಇದು ಬಹಳ ಭಯಂಕರ ತೀರ್ಮಾನ ಡಾಕ್ಟರ್'

—ಅದುವರೆಗೂ ನಮ್ಮಿಬ್ಬರ ಮಾತನ್ನು ಕೇಳುತ್ತಾ ಸುಮ್ಮನೆ ಕುಳಿತಿದ್ದ ಕುಸುಮಾ ಹೇಳಿದಳು.

'ಭಯಂಕರ ತೀರ್ಮಾನವಿರಬಹುದ.' ಆದರೆ ತಪ್ಪು ತೀರ್ಮಾನ ವಲ್ಲ. ಮೊದಲಿನಿಂದಲೂ ನನ್ನಲ್ಲಿ ಇದೇ ಅನುಮಾನವಿತ್ತು ರಾವ್. ಈಗ ಎರಡು ದಿನಗಳ ಕೆಳಗೆ ಅದು ಖಚಿತವಾಯಿತು'

'ಹೇಗೆ ಡಾಕ್ಟರ್ ?'

—ನಾನು, ಕುಸುಮ ಇಬ್ಬರೂ ಒಟ್ಟಿಗೆ ಕೇಳಿದೆವು.

'ಹೇಗೆ ಎಂದು ನಾನು ಹೇಳಿದರೆ ನೀವು ನಂಬುವುದು ಕಷ್ಟ. ನಿಮ ಗೀಗ ಇಲ್ಲೇ ಕಳೆಯಲು ವೇಳೆಯಿದೆಯೇ ರಾವ್ ? ಇದ್ದರೆ ಹೇಳಿ–ನಿಮಗೇ

ಆ ವಿಷಯದ ನಿದರ್ಶನವನ್ನು ಕಣ್ಣಾರೆ ತೋರಿಸುತ್ತೇನೆ; ಕಿವಿಯಾರ ಕೇಳಿಸುತ್ತೇನೆ'

'ನನ್ನ ಕಾಲಕ್ಕಂತೂ ಬೇರೇನೂ ಕೆಲಸವಿಲ್ಲ. ಆದರೆ ನಿಮಗೆ—ಡಾಕ್ಟರ್—'

'ನನಗೂ ಅಂಥ ತಲೆ ಹೋಗುವ ಕೆಲಸವಿಲ್ಲ. ನಿನಗೆ ಕುಸುಮಾ?'

'ಬರುವುದು ತಡವಾಗುತ್ತದೆ ಎಂದು ವಾರ್ಡನ್‌ಗೆ ಫೋನ್ ಮಾಡ್ತ್ತೇನೆ.'

'ಸರಿ ಹಾಗಾದರೆ ಫೋನ್ ಮಾಡಿ, ಡಾ. ಬೆಹ್ರಾಂಜಿಯವರಿದ್ದರೆ, ಮಧುಪಾರಕ್, ಇನ್ನು ಮನೆಗೆ ಹೋಗದಿದ್ದರೆ ಒಂದು ಗಳಿಗೆ ಕರೆದು ಕೊಂಡು ಬನ್ನಿ ಎಂದು ತಿಳಿಸು.'

—ಎಂದು ಕುಸುಮಳಿಗೆ ತಿಳಿಸಿ ಡಾ. ಘರಪುರೆ, ತಾವು ಒಂದು ಸಿಗರೇಟು ಹೊತ್ತಿಸಿಕೊಂಡು ಸಿಗರೇಟಿನ ಪೆಟ್ಟಿಗೆಯನ್ನು ನನ್ನತ್ತ ಸರಿಸಿದರು.

'ಥ್ಯಾಂಕ್ಸ್'

—ಎಂದು ಹೇಳಿ, ನಾನೂ ಒಂದು ಸಿಗರೇಟು ಹೊತ್ತಿಸಿಕೊಂಡು ಕುಳಿತೆ.

ಕೋಣೆಯಲ್ಲಿ ಆವರಿಸಿದ ಮೌನ, ನರಗಳನ್ನು ಬಿಗಿಯುತ್ತಿತ್ತು.

# ಮಧುಪಾರಕ್

*

# ೧

ಮಧುಪಾಠಕ್ !

ಎಷ್ಟು ಮುದ್ದಾದ ಹೆಸರು.

ಆದರೆ ಆ ಹೆಸರಿನ ಮೂಲಕ, ಹೆಂಗಸೋ, ಗಂಡಸೋ, ಹುಡುಗನೊ ವೃದ್ಧನೊ–ಡಾಕ್ಟರ ಮಾತಿನಿಂದ ಯಾವುದೂ ತಿಳಿಯದೆ ಯಾರೋ ಏನೊ ಎಂಬ ಕುತೂಹಲದಿಂದ ಕುದಿಯುತ್ತಾ, ಆ ಹೆಸರಿನ ವ್ಯಕ್ತಿ ಬರುವುದನ್ನೇ ಕಾಯುತ್ತಾ, ಆ ಕುತೂಹಲದಿಂದ ಬಿಗಿದ ನರಗಳ ಬಿಗಿತವನ್ನು ತಗ್ಗಿಸಲು ಬೇಗ ಬೇಗ ಸಿಗರೇಟು ಎಳೆಯುತ್ತಾ ಕುಳಿತಿದ್ದೆ ನಾನು.

ನನ್ನಲ್ಲಿ ಉರಿಯಾಗಿದ್ದ ಕುತೂಹಲ ಡಾಕ್ಟರು ಘರಪುರೆಯವರಿಗೂ ಅರಿವಾಗಿರಬೇಕು ಆದರೆ ಅವರು ನನ್ನ ಕುತೂಹಲವನ್ನು ತಣಿಸಲು ಯಾವ ಪ್ರಯತ್ನವನ್ನು ಮಾಡಲಿಲ್ಲ. ನನ್ನಲ್ಲಿ ಕುತೂಹಲ ಕೆರಳಿದಂತೆ ಅವರ ಮುಖವನ್ನು ಏನೋ ಚಿಂತೆಯ ಕಪ್ಪು ಮೋಡ ಆವರಿಸಿತ್ತು. ಆದರೂ ನನ್ನತ್ತ ನೋಡದೆ, ಸದ್ದಾಗದಂತೆ ಸಣ್ಣಗೆ, 'ಫ್ಯಾನ್' ಸುತ್ತುತ್ತಿದ್ದ ಛಾವಣಿಯನ್ನೇ ದಿಟ್ಟಿಸುತ್ತಾ, ಸಿಗರೇಟು ಸೇದುತ್ತಿದ್ದರು.

ತನ್ನ ಹಾಸ್ಟೆಲ್‌ಗೆ 'ಫೋನ್' ಮಾಡಿ, ಹಾಗೇ ಡಾಕ್ಟರ್ ಬೆಹ್ರಾಂಜಿಯವರನ್ನು ಕರೆದು ಬರಲು ಹೋದ ಕುಸುಮಾ ಮೂರು ನಾಲ್ಕು ನಿಮಿಷಗಳ ಕಾಲದಲ್ಲೇ ಹಿಂದಿರುಗಿ ಬಂದು—

' ಡಾಕ್ಟರ್ ಬೆಹ್ರಾಂಜಿ ಈಗ ಬರುತ್ತಾರೆ '

—ಎಂದು ತಿಳಿಸಿ ಕುಳಿತುಕೊಂಡಳು.

ನನ್ನ ಕಣ್ಣು ಡಾಕ್ಟರ್ ಬೆಹ್ರಾಂಜಿ ಬರಲಿದ್ದ ಬಾಗಿಲಿನಲ್ಲೇ ಕೀಲಿಸಿತ್ತು.

ಎರಡು ಮೂರು ನಿಮಿಷಗಳಲ್ಲೇ ಡಾಕ್ಟರ್ ಕೋಣೆಯ ಬಾಗಿಲನ್ನು ಮುಚ್ಚಿದ್ದ 'ಸ್ಪ್ರಿಂಗ್'ನ ಅರೆಬಾಗಿಲು ತೆರೆದು ಡಾಕ್ಟರ್ ಬೆಹ್ರಾಂಜಿ ಒಳಗೆ ಬಂದರು. ಅವರ ಜೊತೆಯಲ್ಲೇ ಮಧುಪಾಠಕ್,

ನನ್ನ ದೃಷ್ಟಿ ಡಾಕ್ಟರ್ ಬೆಹ್ರಾಂಜಿಯವರ ಕಡೆಗಿರದೆ ಅವರ ಕೈಹಿಡಿದು ಒಳಗೆ ಬಂದ ಮಧುವಾಡಕ್ ಕಡೆಗಿತ್ತು.

ಮಧುವಾಡಕ್ ಎಂಬ ಹೆಸರು ಹೆಂಗಸಿನ ಹೆಸರಿನಂತೆ ಕಂಡರೂ, ಆ ಹೆಸರಿನ ಮಾಲಿಕ ಹೆಂಗಸಲ್ಲ, ಗಂಡಸು. ಗಂಡಸು—ಅಂದರೆ ಮುಂದೆ ಕೆಲವು ವರ್ಷದ ಬಳಿಕ 'ಗಂಡಸು' ಎಂಬ ಹೆಸರು ಪಡೆಯಲು ಅರ್ಹನಾಗುವ ಹತ್ತು—ಹನ್ನೆರಡು ವರ್ಷದ ಬಾಲಕ.

ಆ ಹುಡುಗ ಹೆಸರು ಎಷ್ಟು ಸುಂದರವಾಗಿತ್ತೋ, ಆ ಹುಡುಗನೂ ಹೆಸರಿಗೆ ತಕ್ಕ ಹಾಗೆಯೇ ಇದ್ದ

ಗೋಧಿಯ ಬಣ್ಣದ ದುಂಡು ಮುಖದಲ್ಲಿ ಅಗಲವಾದ ನೀಲಿಯ ಕಣ್ಣುಗಳು, ತಿದ್ದಿ ಮಾಡಿದಂಥ ಮೂಗು, ಅಗಲವಾದ ಹಣೆಯ ಮೇಲೆ ಅಲ್ಲಲ್ಲಿ ಇಳಿಬಿದ್ದ ತಲೆಗೂದಲು, ನಸುಕೆಂಪಾದ ತುಟಿ, ತುಂಬಿದ ಗಲ್ಲ.

ಮುಖದ ಹಾಗೇ, ಮೂರೂವರೆ—ಮೂರೂಮುಕ್ಕಾಲು ಅಡಿ ಎತ್ತರದ ಮೈಯೂ ತುಂಬಿಕೊಂಡಿತ್ತು.

ಆದರೆ ಆ ಹುಡುಗ ಧರಿಸಿದ ಬಟ್ಟೆ, ಮುಖದ ಮೇಲಿನ ಏನೋ ಒಂದು ಬಗೆಯ ಮಂಕು, ಅವನು ಬಡವರ ಮನೆಯ ಹುಡುಗನೆಂಬುದನ್ನು ತಾವೇ ಹೇಳುತ್ತಿದ್ದುವು.

ಬಡವರ ಮನೆಯ ಹುಡುಗನಿರಬಹುದು—ಆದರೆ ಅವನು ರೋಗಿ ಎಂದು ಮಾತ್ರ ಯಾರೂ ಹೇಳುವುದು ಸಾಧ್ಯವಿರಲಿಲ್ಲ. ಅಷ್ಟೇ ಅಲ್ಲ ಅವನನ್ನು ರೋಗಿ ಎಂದು ಕರೆಯುವವರ ಬುದ್ಧಿಗೇ ಏನೋ ರೋಗ ಹಿಡಿದುಕೊಂಡಿರಬೇಕು ಎಂದು ಹೇಳುವಂತಿತ್ತು ಆ ಹುಡುಗನ ಕಣ್ಣ ಹೊಳಪು.

'ನಿಮ್ಮ ರೋಗಿ ಏನನ್ನುತ್ತಾನೆ ಡಾಕ್ಟರ್?'

ಡಾಕ್ಟರ್ ಘರಪುರೆ, ಡಾಕ್ಟರ್ ಬೆಹ್ರಾಂಜಿಯನ್ನು ಪ್ರಶ್ನಿಸಿದರು.

'ಹೆಚ್ಚೇನೂ ಬದಲಾವಣೆ ಕಂಡು ಬಂದಿಲ್ಲ. ಅಂತೂ ಈ ಹುಡುಗ ಸರಿಹೋಗುವುದಕ್ಕೆ ಬಹಳ ದಿನ ಬೇಕಾಗಬಹುದು. ವಿಷ ಬಹು ಆಳವಾಗಿ ಮಿದುಳಿನಲ್ಲಿಳಿದಿದೆ'

—ಡಾಕ್ಟರ್ ಬೆಹ್ರಾಂಜಿ ಉತ್ತರವಿತ್ತರು.

'ನಿಮಗೆ ಗುಜರಾತಿ ಭಾಷೆ ಏನಾದರೂ ಅರ್ಥವಾಗುತ್ತದೆಯೇ ರಾವ್ ?'

—ಡಾಕ್ಟರ್ ಘರಪುರೆ ನನ್ನತ್ತ ತಿರುಗಿ ಪ್ರಶ್ನಿಸಿದರು.

'ಊಹೂ. ನನಗೆ ಅದರ ಗಂಧವೇ ಇಲ್ಲ.'

'ಕುಸುಮಾ—ನಿನಗೆ ಅರ್ಥವಾಗುತ್ತದೆಯೇ?'

'ಏನೋ ಅಷ್ಟಿಷ್ಟು ಹರಕು ಮುರಕಾಗಿ ತಿಳಿಯುತ್ತದೆ.'

—ಕುಸುಮಾ ಹೇಳಿದಳು.

'ಅಷ್ಟು ತಿಳಿದರೂ ಸಾಕು. ನನ್ನ ಪ್ರಶ್ನೆ ಅದಕ್ಕೆ ಹುಡುಗನ ಉತ್ತರವನ್ನು ರಾವ್‌ಗೆ ತಿಳಿಹೇಳು

—ಎಂದು ಕುಸುಮಾಗೆ ಹೇಳಿ ಡಾ. ಘರಪುರೆ ತಮ್ಮ ಬಳಿ ನಿಂತ ಮಧುಪಾರಕ್‌ನನ್ನು ಮತ್ತಷ್ಟು ಹತ್ತಿರ ಕರೆದುಕೊಂಡು, ಆ ಹುಡುಗನ ತಲೆ ಬೆನ್ನನ್ನು ಪ್ರೀತಿಯಿಂದ ನೇವರಿಸಿ ಕೇಳಿದರು—

'ನಿನ್ನ ಹೆಸರೇನು ಮಗು'

'ಮಧುಪಾರಕ್'

'ನಿಮ್ಮ ತಂದೆಯ ಹೆಸರೇನು?'

'ಕೃಷ್ಣಪಾರಕ್'

'ನೀವಿರುವುದೆಲ್ಲಿ?'

'ಅಂಧೇರಿಯಲ್ಲಿ.'

'ನೀವು ಯಾವ ಜನ?'

'ಗುಜರಾತಿ'

—ಮಧುಪಾರಕ್ ಆ ಮಾತನಾಡುತ್ತಿದ್ದ ಹಾಗೇ ಏಕೋ ಅವನ ಕಣ್ಣುಗಳು ಮತ್ತಷ್ಟು ಹೊಳಪಾದವು.

'ಶಾಭಾಸ್! ನೀನು ಗುಜರಾತಿ! ಈ ಬೊಂಬಾಯಿ ಯಾರದು?'

—ಹುಡುಗನ ಉತ್ತರವನ್ನು ಮೆಚ್ಚಿಕೊಂಡಂತೆ ಅವನ ಬೆನ್ನು ತಟ್ಟಿ ಕೇಳಿದರು ಡಾಕ್ಟರ್ ಘರಪುರೆ.

'ನಮ್ಮದು, ಗುಜರಾತಿಗಳದು.'

—ಯಾವುದೋ ಸವಾಲಿಗೆ ಸೆಟೆದು ಉತ್ತರ ಕೊಡುವಂತೆ ಉತ್ತರ

ಕೊಟ್ಟ ಮಧುಪಾಠಕ್. ಅದುವರೆಗೂ ಅವನ ಕಣ್ಣಿನಲ್ಲಿದ್ದ ಕಾಂತಿ ಈಗ ಕೆಂಡದಂತಾಗಿತ್ತು.

'ಸರಿ. ನಿಮ್ಮ ಬೊಂಬಾಯಿನಲ್ಲಿ ನನಗೆ ಇರಲಿಕ್ಕೆ ಜಾಗ ಕೊಡುತ್ತೀಯಾ ?'

—'ಮಧುಪಾಠಕ್ ಬೊಂಬಾಯಿನ ಅಭಿಷಕ್ತ ಸಾಮ್ರಾಟ್. ತಾವು ಬೊಂಬಾಯಿನಲ್ಲಿರಲು ಅವನ ಅನುಮತಿ ಪಡೆಯಬೇಕು' ಎಂಬರೀತಿಯಲ್ಲಿ ಪ್ರಶ್ನೆ ಕೇಳಿದರು ಡಾಕ್ಟರ್ ಘರಪುರೆ.

'ಇರಿ'

'ಡಾ. ಬೆಹ್ರಾಂಜಿ....?'

'ಇರಲಿ.'

'ಇವರು.... ...'

—ಕುಸುಮಾ ಕಡೆ ಕೈತೋರಿ ಕೇಳಿದರು.

'ಇದ್ದುಕೊಳ್ಳಲಿ.'

—ಇದ್ದರೆಷ್ಟು ಹೋದರೆಷ್ಟು ಎಂಬ ತಾತ್ಸಾರದಿಂದ ಹೇಳಿದ ಮಧುಪಾಠಕ್. ಆ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ, ಅವನ ಕಣ್ಣಲ್ಲಿ ಕಲಕಿಸುತ್ತಿದ್ದ ಕೆಂಡದ ಕಾಂತಿಯೂ ಕಡಮೆಯಾಯಿತು.

'ನೀನು ಬಹಳ ಉದಾರಿ. ತುಂಬಾ ಒಳ್ಳೆಯವನು. ನಾವು ಯಾರು ಇರುವುದಕ್ಕೂ ಬೇಡ ಎನ್ನುವುದಿಲ್ಲ. ಹೋಗಲಿ—ಇನ್ನೊಬ್ಬರಿಗೆ ಇಲ್ಲಿರಲು ಸ್ಥಳ ಕೊಡುತ್ತೀಯಾ ?'

—ಡಾಕ್ಟರ್ ಘರಪುರೆ ಕೇಳಿದರು.

ಆದರೆ ಹಿಂದಿನ ಪ್ರಶ್ನೆಗಳಂತೆ ಈ ಪ್ರಶ್ನೆಗೆ ಪಾಠಕ್ ಕೂಡಲೇ ಉತ್ತರ ಕೊಡಲಿಲ್ಲ. ಎರಡು ಮೂರು ಬಾರಿ ಅತ್ತಿತ್ತ ತಿರುಗಿ ನೋಡಿದ. ಅವನ ಕಣ್ಣಿನಲ್ಲಿ ಏನೋ ಜಾಗರೂಕತೆಯ ಬೆಳಕು ಮಿಂಚಿತು. ಬಲೆಯನು ಕಂಡ ಪ್ರಾಣಿಯಂತೆ ಡಾಕ್ಟರ ಮುಖವನ್ನು ಮಿಕಮಿಕ ನೋಡಿ—

'ಯಾರಿಗೆ ?'

—ಎಂದು ಕೇಳಿದ.

'ನನ್ನ ಸಿಂಧಿ ಮಿತ್ರನಿಗೆ.'

—ಬಹು ಮೃದುವಾಗಿ ಕೇಳಿದರು ಡಾಕ್ಟರ್ ಘರಪುರೆ.

ಡಾಕ್ಟರ್ ಆ ಮಾತು ಹೇಳುತ್ತಿದ್ದ ಹಾಗೇ ಮಧುಪಾರಕ್‌ನಲ್ಲಿ ಏನೋ ಒಂದು ವಿಚಿತ್ರ ಪರಿವರ್ತನೆಯಾಯಿತು. ಅವನ ಕಣ್ಣುಗಳು ದಿಗ್ಗನೆ ಉರಿಹೊತ್ತಿದಂತೆ ಉರಿಯಲಾರಂಭಿಸಿದುವು. ಆ ಮುಖದಲ್ಲಿದ್ದ ಬಾಲಿತನ ಮಾಯವಾಗಿ, ಕಲ್ಲಿನಲ್ಲಿ ಒರಟಾಗಿ ಕಡೆದ ಕಠೋರತೆಯ ವಿಗ್ರಹದಂತಾಯಿತು ಆ ಮುಖ. ಅಪರಿಚಿತನಾದ ನಾನೇ ಡಾಕ್ಟರು ಹೇಳಿದ ಸಿಂಧಿಯೇನೋ ಎಂಬಂತೆ ತನ್ನ ಉರಿಗಣ್ಣುಗಳನ್ನು ತನ್ನತ್ತ ಹೊರಳಿಸಿ ನೋಡಿದ. ಆ ಕಣ್ಣ ನೋಟದ ಕ್ರೂರತೆಯನ್ನು ಕಂಡು ನನಗೂ ಗಾಬರಿಯಾಗಿ ತಟಕ್ಕನೆ ಆ ಹುಡುಗನ ಹತ್ತಿರವಿದ್ದರೆ ಅಪಾಯ ಎನಿಸಿತು. ಮಲೆನಾಡಿನ ಕಾಡುಗಳಲ್ಲಿ ಅಡ್ಡಾಡುವಾಗ ನಾನು ಒಮ್ಮೆ ಕಾಳಿಂಗಸರ್ಪವನ್ನು ಕಂಡಿದ್ದೆ. ನಾವು ಅದರ ತಂಟೆಗೂ ಹೋಗಲಿಲ್ಲ. ಅದರ ಸನಿಹಕ್ಕೂ ಹೋಗಿಲಿಲ್ಲ. ಆದರೂ ನಮ್ಮ ಹೆಜ್ಜೆಸದ್ದು ಕೇಳುತ್ತಿದ್ದಹಾಗೇ ಕೊಲ್ಲಲು ಸಿದ್ಧವಾಗಿ, ಹೆಡೆಯೆತ್ತಿನಿಂತ ರೌದ್ರಾಕಾರವನ್ನು ಕಂಡು ನನ್ನ ಮೈ ಗಡಗಡನಡುಗಿತ್ತು. ಏಕೋ—ಏಕೋ—ಡಾಕ್ಟರು 'ನನ್ನ ಸಿಂಧಿ ಮಿತ್ರನಿಗೆ' ಎಂದಾಗ ಮಧುಪಾರಕ್‌ನ ಮುಖದಲ್ಲಾದ ಪರಿವರ್ತನೆಯನ್ನು ಕಂಡು ಆ ಕಾಳಿಂಗಸರ್ಪವನ್ನು ಕಂಡಂತಾಗಿ ಸಿಗರೇಟು ಹಿಡಿದ ನನ್ನ ಕೈ ಬೆವರಿತು.

ಡಾಕ್ಟರಿಗೂ ಮಧುಪಾರಕ್ ನನ್ನ ಕಡೆ ನೋಡಿದುದರ ಅಂತರಾರ್ಥ ಅರಿವಾಯಿತೆಂದು ಕಾಣುತ್ತದೆ. ಎಂತಲೇ ಅವನ ಬೆನ್ನನ್ನು ಮೃದುವಾಗಿ ನೇವರಿಸಿ,—

'ಅವರು ಸಿಂಧಿಗಳಲ್ಲ ಮಧು, ಮೈಸೂರಿನವರು'

—ಎಂದು ಹೇಳಿದರು, 'ಶತ್ರುವಲ್ಲ ಮಿತ್ರ' ಎಂಬಂತೆ.

ಡಾಕ್ಟರು ಆ ಮಾತು ಹೇಳಿದ ಬಳಿಕ ತೀವ್ರವಾಗಿದ್ದ ಮಧುಪಾರಕ್‌ನ ಉಸಿರೆಳತ ಕೊಂಚ ನಿಧಾನವಾಯಿತು. ಹಾಗೇ ತನ್ನ ಕಣ್ಣುಗಳನ್ನು ನನ್ನ ಕಡೆಯಿಂದ ತನ್ನನ್ನು ಮಾತಾಡಿಸುತ್ತಿದ್ದ ಡಾಕ್ಟರ ಕಡೆ ತಿರುಗಿಸಿದ.

'ಹಾಗಾದರೆ....ಹಾಗಾದರೆ—ನನ್ನ ಸಿಂಧಿಮಿತ್ರನಿಗೆ ಬೊಂಬಾಯಲ್ಲಿರಲು ಜಾಗ ಕೊಡುವುದಿಲ್ಲವೇ ಮಧು ?'

' ಊಹೂ. '

—ಒಂದು ಏಟಿಗೆ ಎರಡು ತುಂಡು ಮಾಡುವನಂತೆ ಉತ್ತರವಿತ್ತ ಮಧುಪಾಠಕ್ .

' ಏಕೆ ? '

' ಅವರು ಕಳ್ಳರು, ಸುಳ್ಳರು, ಕೊಲೆಗಾರರು. ಅವರು ಕಾಲಿಟ್ಟ ಮನೆಗೆ ಬೆಂಕಿ ಹಚ್ಚುವ ಭಂಡರು. '

—ಬಹು ಕರ್ಕಶವಾಗಿ ಹೇಳಿದ ಮಧುಪಾಠಕ್.

' ಅಷ್ಟು ಕೆಟ್ಟವರೇ ಅವರು '

' ಹೂ. '

' ಹಾಗಾದರೆ ನೀನು ಅವರು ಬೊಂಬಾಯಿಗೆ ಬರಲು ಬಿಡುವುದಿಲ್ಲ–?'

' ಊಹೂ. '

' ಒಂದು ವೇಳೆ.... ...ಒಂದುವೇಳೆ....... ಅವರಾಗಿಯೇ.... ಇಲ್ಲಿಗೆ ಬಂದರೆ ...'

—ತಡೆದು ತಡೆದು ಕೇಳಿದರು ಡಾಕ್ಟರು ಘರಪುರೆ.

' ಬಂದರೆ ..ಬಂದರೆ . . '

—ಆ ಮಾತು ಹೇಳ ಹೇಳುತ್ತಲೇ ಮತ್ತೆ ಮಧುಪಾಠಕ್‌ನ ಕಣ್ಣು ಗಳಲ್ಲಿ ಕಾಳಿಂಗ ಸರ್ಪ ಹೆಡೆಯೆತ್ತಿತ್ತು. ಮುಖ ಉಗ್ರವಾಯಿತು ಮುಷ್ಟಿ ಗಳು ತಾವಾಗಿಯೇ ಬಿಗಿದವು.

' ಕೊಂದುಬಿಡುತ್ತೇನೆ ..ಗಂಟಲು ಹಿಂಡಿ ರಕ್ತ ಕುಡಿದುಬಿಡುತ್ತೇನೆ ....ಅವರ ಮನೆಗೆ ಬೆಂಕಿ ಹಚ್ಚಿಬಿಡುತ್ತೇನೆ ಇಲ್ಲಿ ಕಾಲಿಡಲಿ ಆ—'

—ಬಹು ಅಶ್ಲೀಲವಾದ, ಕುಸುಮಾ ಅನುವಾದಿಸಲಾಗದಷ್ಟು ಹೊಲಸಾದ ಬೈಗಳನ್ನು ಉಪಯೋಗಿಸಿ ಹೇಳಿದ ಮಧುಪಾಠಕ್.

ಆ ಮಾತು ಆಡ ಆಡುತ್ತಾ, ಅವನ ಎತ್ತರ ಹಾವು ಇಮ್ಮಡಿಯಾ ದಂತಾಗಿ, ಉದ್ರೇಕದಲ್ಲಿ ಮಾತುಗಳೂ ಸಲೀಸಾಗಿ ಹೊರಟಂತಾಗಿ, ತುಟಿ ಯಂಚಿನಲ್ಲಿ ಉಗುಳು ಬರುಗಾಗಿ ಕಾಣಿಸಿಕೊಂಡಿತು. ಕಣ್ಣುಗಳಲ್ಲಿದ್ದ ಮಾನವೀಯತೆಯೆಲ್ಲಾ ಮಾಯವಾಗಿ ಅವು ದ್ವೇಷಾಗ್ನಿಯ ಬುಗ್ಗೆಗಳಂತೆ ಕಂಡವು.

ಆಗ ನನಗೇನೂ ಸಂಶಯ ಉಳಿಯಲಿಲ್ಲ–ನಿಜ–ಈ ಹುಡುಗ ರೋಗಿಯಷ್ಟೇ ಅಲ್ಲ, ಅಪಾಯಕಾರಿಯಾದ ಉನ್ಮತ್ತ !

ಆ ಭಾವನೆ ಮೂಡುತ್ತಿದ್ದ ಹಾಗೇ ನನ್ನ ಹೃದಯದಲ್ಲಿ ಎಲ್ಲಿಂದಲೋ ಕುಳಿರುಗಾಳಿ ಬೀಸಿದಂತಾಗಿ, ನರನರಕ್ಕೂ ಕೊರೆದ ಹಿಮಸ್ಪರ್ಶವಾದಂತಾಗಿ ಮೈ ನಡುಗಿತು.

'ನಿಜ, ನಿಜ....ಅವರಿಗೆ ಹಾಗೇ ಮಾಡಬೇಕು.'

—ಎಂದು ಹೇಳಿ, ಡಾಕ್ಟರ್ ಘೆರಪುರೆ ಅವನ ಬೆನ್ನನ್ನು ನೇವರಿಸಿ, ಆ ಹುಡುಗನ ಕಣ್ಣುಗಳಲ್ಲಿ ಹೊತ್ತಿದ್ದ ದ್ವೇಷಾಗ್ನಿಗೆ ಜಲಸೇಚನೆ ಮಾಡಿದರು.

'ಹಾಗಾದರೆ ನೀವು ನನ್ನ ಮಿತ್ರರು.'

--ಎಂದ ಮಧುಪಾರಕ್.

'ನಿಜ–ನಾನು ನಿನ್ನ ಮಿತ್ರ'

—ಎಂದರು ಡಾಕ್ಟರ್ ಘೆರಪುರೆ.

ಹಿಂದಿನಿಂದ ಒತ್ತಿ ಬರುವ ನೀರು ಕಡಮೆಯಾದಾಗ, ಏರಿದ ಕೆರೆಯ ನೀರು ಇಳಿಯುವಂತೆ, ಕ್ರಮೇಣ ಮಧುಪಾರಕನ ಕಣ್ಣಿನಲ್ಲಿದ್ದ ಹಿಂಸೆ, ದ್ವೇಷದ ಉಗ್ರತೆ ಕಡಮೆಯಾಯಿತು.

ಮತ್ತೆ ಮಧುಪಾರಕ್—ಹೆಸರಿನಷ್ಟೇ ಸುಂದರವಾದ ಹುಡುಗ!

ಈ ಹುಡುಗನೇನೇ, ಒಂದೇ ಒಂದು ಗಳಿಗೆಯ ಮುಂಚೆ ಕೆರಳಿದ ಕಾಳಿಂಗ ಸರ್ಪದಂತೆ ಕಂಡುದು? ಏಕೊ ನನ್ನ ಕಣ್ಣುಗಳನ್ನೇ ನನಗೆ ನಂಬುವುದಾಗಲಿಲ್ಲ. ನಾಟಕದಲ್ಲಿ ಟ್ರಾನ್ಸ್‌ಫರ್ ಸೀನ್‌ನ ಪವಾಡವನ್ನು ಕಂಡ ಮುಗ್ಧ ಬಾಲಕನಂತಾಗಿದ್ದೆ ನಾನು.

'ನಿಮ್ಮ ಕೆಲಸದಲ್ಲಿ ನಿಮಗೆ ತೊಂದರೆ ಕೊಟ್ಟಂತಾಯಿತು ಕ್ಷಮಿಸಿ ಡಾಕ್ಟರ್. ಇವರು ನಮ್ಮ ಮೈಸೂರಿನ ಲೇಖಕ ಮಿತ್ರರು—ರಾವ್, ಕುಸುಮಾ ನನಗೆ ಇವರ ಪರಿಚಯ ಮಾಡಿಸಲೆಂದು ಕರೆತಂದಳು ನಾನು ಅವರಿಗೆ ನಮ್ಮ ಈ 'ಶಿಶುದೈತ್ಯ' (Infant devil) ನ ಪರಿಚಯ ಮಾಡಿಸೋಣ ಎಂದು ಹೇಳಿಕಳಿಸಿದೆ. ಕರೆದುಕೊಂಡುಹೋಗಿ.'

—ಎಂದು ಡಾಕ್ಟರು ಬೆಹ್ರಾಂಜಿಗೆ ನನ್ನ ಪರಿಚಯ ಮಾಡಿಸಿ ಇಂಗ್ಲೀಷಿನಲ್ಲಿ ಹೇಳಿದರು.

‘ Happy to have met you. (ನಿಮ್ಮ ಪರಿಚಯವಾಗಿ ಸಂತೋಷವಾಯಿತು.’)

—ಎಂದು ಹೇಳಿ ಡಾಕ್ಟರು ಬೆಹ್ರಾಂಜಿ ನನ್ನ ಕೈ ಕುಲುಕಿ—

‘ ಬಾ ಮಧು ಹೋಗೋಣ’ ನಿನ್ನ ಸ್ನೇಹಿತರಿಗೆ ನಮುಸ್ಕಾರ ಹೇಳು’

—ಎಂದು ಮಧುವಾರಕ್‌ಗೆ ಗುಜರಾತಿಯಲ್ಲಿ ಹೇಳಿದರು

‘ ನಮಸ್ತೆ ’

—ಎಂದೆ ನಾನು

ಮಧುವಾರಕ್ ಉಳಿದವರಗೂ ನಮುಸ್ಕರಿಸಿ ಡಾಕ್ಟರ್ ಬೆಹ್ರಾಂಜಿಯವರೊಡನೆ ಹೊರಟುಹೋದ

ಹೋಗುತ್ತಿದ್ದ ಹುಡುಗನ ಬೆನ್ನನ್ನೇ ನೋಡಿ ನಾನು ನಿಟ್ಟುಸಿರಿಟ್ಟೆ.

ಡಾಕ್ಟರು ಘರಪುರೆಯುವರೂ ಏಕೊ ಬಹು ಆಯಾಸವಾದವರಂತೆ ಮೇಜಿನ ಮೇಲೆ ತೋಳು ಚಾಚಿ, ತೋಳಿನ ಮೇಲೆ ಮುಖ ಒರಗಿಸಿದರು.

ಒಂದು ಗಳಿಗೆ ಯಾರಿಗೂ ಏನೂ ಮಾತನಾಡಲು ಮನಸ್ಸಿರಲಿಲ್ಲ. ಒಂದು ಗಳಿಗೆಯ ಹಿಂದೆ ಬಂದು ಬೆದರಿಸಿ ಹೋದ ಭೂತ, ಮಾತನಾಡಿದರೆ ಮತ್ತೆಲ್ಲಿ ಹಿಂದಿರುಗಿ ಬಂದೀತೋ ಎಂಬಂಥ ವಾತಾವರಣ ಕೋಣೆಯಲ್ಲಿ ಹಬ್ಬಿತ್ತು.

ಒಬ್ಬರನ್ನೊಬ್ಬರು ನೋಡುತ್ತಾ ಹಾಗೇ ಕುಳಿತಿದ್ದೆವು

ಒಂದು ಗಳಿಗೆ ಹಾಗೇ ತಮ್ಮ ಮೈಯೊಳಗಿನ ಶಕ್ತಿ ಎಲ್ಲವೂ ಉಡುಗಿ ಹೋದಂತೆ ಜಡವಾಗಿ ಕುಳಿತಿದ್ದ ಡಾಕ್ಟರ್ ಘರಪುರೆ, ದೊಡ್ಡ ನಿಟ್ಟುಸಿರಿಟ್ಟು, ಎದೆಯ ಮೇಲಿದ್ದ ಭಾರವನ್ನು ಹಗುರಾಗಿರಿಸಿಕೊಂಡು, ಅಂಗೈಗಳಿಂದ ಮುಖವನ್ನು ಉಜ್ಜಿಕೊಂಡು, ತಟಕ್ಕನೆ ಎದ್ದುನಿಂತು—

‘ ಏಳಿ ರಾವ್ ಹೋಗೋಣ. ಇನ್ನು ಇಲ್ಲಿ ಕುಳಿತಿದ್ದರೆ ಉಸಿರೇ ಕಟ್ಟಿಹೋಗುತ್ತದೆ. ’

—ಎಂದರು.

ಕೋಣೆಯಲ್ಲಿನ ವಾತಾವರಣ ನನಗೂ ಏಕೊ ಅಲ್ಲಿ ಕುಳಿತಿರಲಾಗ

ದಷ್ಟು ಬಿಸಿಯಾದಂತಿತ್ತು.

'ನಿಜ. ಹೋಗೋಣ.'

—ಎಂದೆ ನಾನು.

ಡಾಕ್ಟರು ಎದ್ದು, ಮಾತನಾಡದೆ ಹೊರಗೆ ನಡೆದರು. ನಾವಿಬ್ಬರೂ ಅವರನ್ನು ಹಿಂಬಾಲಿಸಿದೆವು. ಏಕೋ ಏನೊ ಯಾರಿಗೂ ಹೆಚ್ಚು ಮಾತ ನಾಡಲು, ಕಡೆಗೆ ಒಬ್ಬರೊಂದಿಗೆ ಒಬ್ಬರು ಮಾತನಾಡುವುದೂ ಇಷ್ಟವಿಲ್ಲ ದಂತಿತ್ತು.

ಮೂವರೂ ಹೊರಗೆ ಬಂದ ಮೇಲೆ, ಡಾಕ್ಟರು ನಮಗೆ—

'ಇಲ್ಲಿರಿ. ಕಾರು ತೆಗೆದುಕೊಂಡು ಬರುತ್ತೇನೆ'

—ಎಂದು ನಮ್ಮಿಬ್ಬರನ್ನು ಪೋರ್ಟಿಕೊ ಬಳಿ ನಿಲ್ಲಿಸಿ, ತಮ್ಮ ಕಾರು ತರಲು ಹೋದರು.

ಡಾಕ್ಟರು ತಮ್ಮ ಕಾರು ತರುವುದನ್ನೇ ಕಾಯುತ್ತಾ ನಾವಿಬ್ಬರು ನಿಂತಿರುವಾಗ, ಕುಸುಮಾ, ಅತ್ತ ಕಡೆಯೇ ಬಂದ, ಮಧ್ಯವಯಸ್ಸಿನ ಗುಜರಾತಿ ಹೆಣ್ಣು ಮಗಳೊಬ್ಬಳನ್ನು ಕಂಡು—

'ಗುಡ್ ಈವಿನಿಂಗ್ ವಾಸಂತೀ ಬೆಹನ್'

—ಎಂದು ಕೈಯಾಡಿಸಿದಳು

ಆ ಹೆಣ್ಣು ಮಗಳು ಕುಸುಮಾಗೆ 'ಗುಡ್ ಈವಿನಿಂಗ್' ಎಂದು ನಮಸ್ಕರಿಸಿ, ಆಕೆಯ ಬಳಿಸಾರಿ, ಕುಸುಮಳ ಬಳಿನಿಂತಿದ್ದ ಹೊಸಬನಾದ ನನ್ನ ಕಡೆ ಒಂದು ಬಾರಿ ನೋಡಿ—

'ಕೆಲಸ ಮುಗಿಸಿಕೊಂಡು ಹಾಸ್ಟೆಲಿಗೆ ಹೊರಟರೇನು? ಡಾಕ್ಟರು ಇದಾರೆಯೇ?'

—ಎಂದು ಕುಸುಮಳನ್ನು ಕೇಳಿದಳು.

'ಕೆಲಸವೇನೋ ಮುಗಿದ ಹಾಗೇ ಆಯಿತು—ಇವೊತ್ತಿಗೆ. ಡಾಕ್ಟರೂ ಎಲ್ಲಿಯಾದರೂ ಹಾಗೇ ಸುತ್ತಾಡಿಬರೋಣವೆಂದು ಕಾರು ತರಲು ಹೋಗಿದಾರೆ. ನೀವು ಇನ್ನೊಂದು ಗಳಿಗೆ ತಡವಾಗಿ ಬಂದಿದ್ದರೆ ಡಾಕ್ಟರು ಸಿಕ್ಕುತ್ತಿರಲಿಲ್ಲ. ಅದೇನಿಷ್ಟು ತಡ ಇವೊತ್ತು?'

—ಕುಸುಮಾ ಆ ಗುಜರಾತಿ ಹೆಂಗಸನ್ನು ಕೇಳಿದಳು.

'ಯಾವುದೋ 'ಕೇಸ್ ಹಿಸ್ಟರಿ' ತೆಗೆದುಕೊಂಡು ಬರುವುದಕ್ಕೆ ಡಾಕ್ಟರು ಅಂಧೇರಿಯವರೆಗೂ ಓಡಿಸಿದ್ದರು. ಆದ್ದರಿಂದ ತಡವಾಯಿತು ನಾನು ಬರುವವರೆಗೂ ಕಾದಿರುತ್ತೇನೆ ಎಂದಿದ್ದರು ಡಾಕ್ಟರು. ಇಷ್ಟರಲ್ಲೇ ಅವರಿಗೆ ಈ 'ಎಂಗೇಜ್‌ಮೆಂಟ್' ಮರತೇ ಹೋಯಿತೇನೋ.'

—ಎಂದು ವಾಸಂತೀಬೆಹನ್ ಡಾಕ್ಟರ ಮೇಲೆ ದೂರು ಹೊರಿಸುತ್ತಿರುವಾಗಲೇ, ಕಾರಿನೊಂದಿಗೆ ಅಲ್ಲಿಗೆ ಬಂದ ಡಾಕ್ಟರು ಆಕೆಯನ್ನು ನೋಡಿ—

'ಹಲೋ ವಾಸಂತೀ—ಈಗ ಬಂದೆಯಾ ?'

—ಎಂದು ಕೇಳಿದರು.

'ಗುಡ್ ಈವಿನಿಂಗ್ ಡಾಕ್ಟರ್. ಇನ್ನೊಂದು ಗಳಿಗೆ ನಾನು ತಡವಾಗಿ ಬಂದಿದ್ದರೆ, ನೀವು ಸಿಕ್ಕುತ್ತಲೇ ಇರಲಿಲ್ಲವಂತೆ ಕುಸುಮಾ ಹೇಳಿದಳು. ಅಂತೂ ಈಚೀಚೆಗೆ ಚೆನ್ನಾಗಿ ಎಂಗೇಜ್‌ಮೆಂಟ್ ಕೀಪಪ್ ಮಾಡೋದು ಕಲೀತಾ ಇದೀರಾ ಡಾಕ್ಟರ್.

—ನಗುನಗುತ್ತಲೇ ವಾಸಂತೀ ಬಹೆನ್ ಡಾಕ್ಟರ ಮೇಲೆ ದೂರು ಹೊರಿಸಿದಳು.

'ಎಂಗೇಜ್‌ಮೆಂಟ್ ಮರತೇ ಅಂತಲ್ಲ ಹೊಸ ಸ್ನೇಹಿತರೊಬ್ಬರು ಬಂದರು. ಅವರನ್ನು ಎಲ್ಲಿಯಾದರೂ ಒಂದುಗಳಿಗೆ ಆಡ್ಡಾಡಿಸಿಕೊಂಡು, ಟೀ ಕುಡಿಸಿಕೊಂಡು ಬರೋಣವೆಂದು ಹೊರಟೆ ಅಷ್ಟೆ. ಕುಸುಮಾ—ವಾಸಂತಿಕೆ ನಿಮ್ಮ ಮಿತ್ರರ ಪರಿಚಯ ಮಾಡಿಸಲಿಲ್ಲವೆ ?'

—ಎಂದು ಕುಸುಮಾಳನ್ನು ಕೇಳಿದರು.

'ಮಾಡಿಸಬೇಕು ಎಂತ ಇರುವುದರೊಳಗಾಗಿ ನೀವೇ ಇಲ್ಲಿಗೆ ಬಂದಿರಿ'

'ಸುಳ್ಳೇಕೆ ಹೇಳುತ್ತಿ. ಪರಿಚಯ ಮಾಡಿಸಿದರೆ ವಾಸಂತೀ ನಿನ್ನ ಸ್ನೇಹಿತರನ್ನು ಎಲ್ಲಿ ಹಾರಿಸಿಕೊಂಡು ಹೋಗುತ್ತಾಳೋ ಅಂತ ಗಾಬರಿಯಾಯಿತೇನೋ—ಹೆಂಗಸರ ಸ್ವಾರ್ಥ ಬುದ್ಧಿ ನನಗೆ ಗೊತ್ತಿಲ್ಲವೇ ?'

—ಎಂದು ಕುಸುಮಳತ್ತ ನಗೆಯಾಡಿ—

'ರಾವ್'

—ಎಂದು ನನ್ನನ್ನು ಕರೆದು—

'ಮೀಟ್ ಮಿಸ್ ವಾಸಂತೀ ಪಟೇಲ್. ನಮ್ಮಲ್ಲಿ ಕೆಲಸ ಮಾಡುತ್ತಿರುವ ಸೋಷಿಯಲ್ ವರ್ಕರ್ಸ್' ಪೈಕಿ ಈಕೆಯೂ ಒಬ್ಬರು. ವಾಸಂತೀ—ಇವರು ರಾವ್. ಮೈಸೂರಿನ ಲೇಖಕ ಮಿತ್ರರು'

—ಎಂದು ನಮ್ಮಿಬ್ಬರಿಗೂ ಪರಿಚಯ ಮಾಡಿಸಿ—

'ಕ್ಲಿನಿಕ್‌ನಲ್ಲಿ ಈಗ ನಿನಗೆ ಬೇರೆ ಏನಾದರೂ ಕೆಲಸವಿದೆಯೇ?'

—ಎಂದು ವಾಸಂತೀಬಹೆನ್‌ಳನ್ನು ಕೇಳಿದರು.

'ಊಹೂ ಬೇರೇನೂ ಕೆಲಸವಿಲ್ಲ, ನೀವು ಹೇಳಿದ 'ಕೇಸ್ ಹಿಸ್ಟರಿ' ತಂದಿದ್ದೆ, ನೀವು ಎಲ್ಲಿಗಾದರೂ ಹೊರಟಿದ್ದರೆ ಹೋಗಿ 'ಫೈಲ್'ನ ನಿಮ್ಮ ಮೇಜಿನ ಮೇಲಿರಿಸಿ ಹೋಗುತ್ತೇನೆ. ನಾಳೆ ನೋಡಬಹುದು.'

'ಕೇಸ್ ಹಿಸ್ಟರಿ—ಅಂದರೆ—'

—ಅಂದು ಏನೋ ಜ್ಞಾಪಿಸಿಕೊಂಡು—

'ಹಾಗಂದರೆ ಈಗ ನೀನು ಅಂಧೇರಿಯಿಂದ ಬರುತ್ತಿದ್ದೀಯೇನು?'

'ಹೂ'

'ಆ 'ಶಿಶುದೈತ್ಯ'ನ ಇತಿಹಾಸವೆಲ್ಲಾ ಸಿಕ್ಕಿತೆ?'

'ಹೂ'

'ತುಂಬಾ ಒಳ್ಳೆಯದಾಯಿತು ನಮ್ಮ ಮೈಸೂರಿನ ಮಿತ್ರರಿಗೆ ಈಗ ತಾನೇ ಅವನ ಪರಿಚಯ ಮಾಡಿಸಿದೆ, ಆ ವೇಳೆಗೆ ನೀನು ಕೇಸ್ ಹಿಸ್ಟರಿ ತಂದದ್ದೂ ಒಳ್ಳೆಯದೇ ಆಯಿತು. ಅವನ ಚರಿತ್ರೆಯನ್ನೆಲ್ಲಾ ನೀನೇ ರಾವ್‌ಗೆ ಹೇಳಿಬಹುದು. ಬಾ'

—ಎಂದು ಆಕೆಯನ್ನು ನಮ್ಮೊಡನೆ ಬರಲು ಕರೆದರು.

'ಅಂದರೆ—ನಮ್ಮ ಶ್ರಮವನ್ನೆಲ್ಲಾ ಫಲ ಪಡೆಯಲು ಇನ್ನೊಬ್ಬರಿಗೆ ಅರ್ಪಿಸಿಬಿಡು ಅನ್ನುತ್ತೀರಾ ಡಾಕ್ಟರ್?'

—ವಾಸಂತೀ ಬಹೆನ್ ನಗುತ್ತಾ ಕೇಳಿದಳು.

'ಏಕೆ?'

—ವಾಸಂತಿಬಹೆನ್ ಆಡಿದ ಮಾತಿನ ಅರ್ಥವೇ ತಿಳಿಯದೆ ಕೇಳಿದೆ ನಾನು.

'ಮತ್ತೆ. ನೀವು ಕಥೆಗಾರರು ಎಂದು ಡಾಕ್ಟರು ಹೇಳಿದರಲ್ಲ, ನಾನು ಹೇಳಿದ ಕೇಸ್ ಹಿಸ್ಟರಿ ಕೇಳಿ ನೀವು ಕಥೆ ಬರೆದರೆ, ಕಷ್ಟ ನನಗೆ, ಲಾಭ ನಿಮಗೆ ಆಗಲಿಲ್ಲವೇ ? '

—ವಾಸಂತಿಬಹೆನ್ ಕೇಳಿದಳು.

' ಹಾಗಂದರೆ—ನಾಳಿನಿಂದ ನೀನು ಜೇನುತುಪ್ಪ ಬಳಸುವುದನ್ನು ಬಿಟ್ಟುಬಿಡು.'

—ಆಕೆಯ ಪ್ರಶ್ನೆಗೆ ನಾನು ಉತ್ತರ ಕೊಡುವ ಮೊದಲು ಡಾಕ್ಟರೇ ಹೇಳಿದರು.

' ಏಕೆ ? '

—ನಡೆಯುತ್ತಿದ್ದ ಮಾತಿಗೆ ಸಂಬಂಧವಿಲ್ಲದಂತೆ ಡಾಕ್ಟರು ಆಡಿದ ಮಾತನ್ನು ಕೇಳಿ ವಾಸಂತಿಬಹೆನ್ ಕೇಳಿದಳು.

' ಮತ್ತೆ—ರಾವ್ ನಿನಗೀಗ ಏನು ಮೋಸ ಮಾಡಬಹುದು ಎಂದು ನೀನು ಹೆದರುತ್ತಿದ್ದೀಯೋ, ನೀನು ಜೇನುಹುಳುವಿಗೆ ಮಾಡುತ್ತಿರುವುದೂ ಅದೇ ಬಗೆಯ ಮೋಸವನ್ನೇ, ಅಲ್ಲವೇ ? '

—ಡಾಕ್ಟರು ನಗುತ್ತಾ ಕೇಳಿದರು.

' ಅಂತೂ ಹೀಗೇ ಏನಾದರೊಂದು ಅಡ್ಡಮಾತಾಡಿ ಬಾಯಿ ಮುಚ್ಚಿಸುವುದರಲ್ಲಿ ನೀವು ನಿಪುಣರು ಡಾಕ್ಟರ್. ಸರಿ—ಹಾಗಾದರೆ. ಈಗೆಲ್ಲಿ ಹೋಗುವುದು ಡಾಕ್ಟರ್ ? '

' ಅದನ್ನಿನ್ನೂ ನಾವು ನಿರ್ಧರಿಸಿಲ್ಲ.'

' ಅಂದರೆ—ನನ್ನ ಹೊಟ್ಟೆ ನಿರ್ಧರಿಸಿದೆ. ಸುತ್ತಿ ಸುತ್ತಿ ನನ್ನ ಬಡ ಹೊಟ್ಟೆ ಸೊರಗಿ ಹೋಗಿದೆ. ಅವನ್ನು ಮತ್ತಷ್ಟು ಬಳಲಿಸಿ, ಮೊದಲೇ ಶೋಷಿತರಾದವರನ್ನು ಮತ್ತಷ್ಟು ಶೋಷಿಸುವ ದುರಭ್ಯಾಸ ನನಗಿಲ್ಲ. ಹೊಟ್ಟೆಗೆ ಬೀಳದಿದ್ದರೆ ಕಥೆ ಹೊರಗೆ ಬರುವುದಿಲ್ಲ ಎನ್ನುತ್ತದೆ ಆದ್ದರಿಂದ ಮೊದಲು ಯಾವುದಾದರೂ ಹೋಟಲು ದಾರಿ ತೋರಿಸಿ—ಆ ಮೇಲೆ ಎಲ್ಲಿ ಬೇಕಾದರೂ ಸುತ್ತಿಸಿ '

—ಎಂದಳು ವಾಸಂತಿಬಹೆನ್ ಕಾರಿನಲ್ಲಿ ಕೂತು.

' ಎಲ್ಲಿಗೆ ಹೋಗುವುದು ಎಂದು ನಿರ್ಧರವಾಯಿತಲ್ಲ, ಬನ್ನಿ ರಾವ್,

ಕುಸುಮಾ ನೀನೂ ರಥಾರೋಹಣ ಮಾಡು.'

—ಎಂದರು ಡಾಕ್ಟರ್

ಅವರ ಮಾತಿನಂತೆ ನಾವು ಮೂವರೂ ಡಾಕ್ಟರ್ ಕಾರಿನಲ್ಲಿ ಕುಳಿತೆವು. ಡಾಕ್ಟರು ತಮ್ಮ ಕಾರನ್ನು 'ಬಾಲೋದ್ವಾರ'ಕ್ಕೆ ಸಮೀಪವಾಗಿ, ಕಡಲುದಂಡೆಯಲ್ಲಿದ್ದ 'ಮಫತ್‌ಲಾಲ್ ಸ್ವಿಮಿಂಗ್ ಕ್ಲಬ್'ನ ಉಪಹಾರ ಗೃಹದ ಬಳಿ ನಡೆಸಿದರು.

'ಹೌದು—ಡಾಕ್ಟರ್. ನೀವು ಎಂದಿನಿಂದ ಈ ಕ್ಲಬ್ಬಿನ ಸದಸ್ಯರಾದಿರಿ ?'

—ಎಂದು ಕೇಳಿದಳು ವಾಸಂತೀಬಹೆನ್.

'ನೀವು ನನಗೆ ಕ್ಲಬ್ಬಿನ ಸದಸ್ಯನಾಗುವಷ್ಟು ಬಿಡುವೆಲ್ಲಿ ಕೊಡುತ್ತೀರ ?'

'ಆದರೆ ಇಲ್ಲಿ ಸದಸ್ಯರಿಗೆ ಮಾತ್ರವೇ ಪ್ರವೇಶವಲ್ಲವೇ ?'

'ನಿಜ. ನಾನು ಸದಸ್ಯನಲ್ಲ ಎನ್ನುವುದು ನನಗೆ ಗೊತ್ತು. ಆದರೆ ಅದು ಬಾಗಿಲು ಕಾಯುವವನಿಗೆ ತಿಳಿಯದಂತೆ ಹೋದರಾಯಿತಲ್ಲ. ಅಷ್ಟು ಕಷ್ಟಕ್ಕೆ ಬಂದರೆ ನನ್ನ ತಂದೆಯವರ ಹೆಸರಿದ್ದೇ ಇದೆ–ದುರುಪಯೋಗಪಡಿಸಲು. ಕಳ್ಳರು ಸಿಕ್ಕಿ ಬೀಳುವುದು ಪೋಲೀಸರ ಪತ್ತೆಹಚ್ಚುವ ಶಕ್ತಿಗಿಂತಲೂ ಹೆಚ್ಚಾಗಿ, ತಮ್ಮ ಅಳುಕಿನಿಂದ. ನೀವು ಅಂಥ ಅಳುಕು ತೋರಿಸಿಕೊಳ್ಳಬೇಡಿ Follow the leader'

—ಎಂದು ನಗುತ್ತಾ ಡಾಕ್ಟರು ಮುಂದೆ ನಡೆದರು.

ನಾವೂ ನಗುತ್ತಲೇ ಅವರನ್ನು ಹಿಂಬಾಲಿಸಿದೆವು

ತಿಂಡಿ ಏನು ತರಿಸಬೇಕು, ಯಾರು ತರಿಸಬೇಕು ಎಂಬ ವಿಷಯದಲ್ಲಿ ಅಷ್ಟು ಹೊತ್ತು ನಗೆ ಚರ್ಚೆಯಾಗಿ, ಅದನ್ನು ಮುಗಿಸಲು ನಾನು ಹೇಳಿದೆ.

'ಅದಕ್ಕಾಗಿ ಜಗಳ ಬೇಡ. ಇದೂ ಒಂದು ರೀತಿ ಲಾಟರಿಯಾಗಲಿ. ಸರ್ವರ್ ಯಾರ ಮುಂದೆ ಬಿಲ್ಲು ತಂದಿಟ್ಟರೆ ಅವರು ಕೊಡುವುದು'

—ಎಂದೆ.

'ಆಗಬಹುದು. ಒಳ್ಳೆ ಪರಿಹಾರೋಪಾಯವೇ ? ಹಾಗಾದರೇನು ತರಿಸುವುದು—ಅದನ್ನು ನೀವೇ ಹೇಳಿ'

—ಡಾಕ್ಟರ್ ನನಗೆ ಹೇಳಿದರು.

'ಇಲ್ಲಿ ಏನು ವಿಶೇಷವೋ ನನಗೆ ತಿಳಿಯದು.'

'ಇಲ್ಲಿ ಬೆಲೆಯೊಂದೇ ವಿಶೇಷ—'

—ಎಂದು ನಕ್ಕು ಡಾಕ್ಟರು, ಆ ವೇಳೆಗೆ 'ಸರ್ವರ್' ತಂದು ಕೊಟ್ಟ 'ಉಪಹಾರ ಪಟ್ಟಿ' (Menu-card) ನೋಡಿ, ತಾವೇ ಆರಿಸಿ, ತಿಂಡಿ ತರಲು ಸರ್ವರಿಗೆ ಹೇಳಿ ಕಳಿಸಿದರು

ಸರ್ವರ್ ತಂದಿತ್ತ ತಿಂಡಿ, ಟೀ ಮುಗಿಸಿದ ಬಳಿಕ ಡಾಕ್ಟರು, ವಾಸಂತೀಬಹೆನ್ ಕಡೆ ತಿರುಗಿ—

'ನಿನ್ನ ಹೊಟ್ಟೆಯ ಆರಾಟ ಮುಗಿದಿದ್ದರೆ, ನೀನು ಸಂಗ್ರಹಿಸಿದ 'ಕೇಸ್ ಹಿಸ್ಟರಿ' ಏನೆಂದು ರಾವ್‌ಗೆ ಹೇಳು'

—ಎಂದರು

ಡಾಕ್ಟರು ಆ ಮಾತು ಹೇಳುತ್ತಿದ್ದ ಹಾಗೇ, ಅದುವರೆಗೂ ವಾತಾವರಣದಲ್ಲಿದ್ದ ನಗೆ ಎಲ್ಲೋ ಅಡಗಿ ಹೋದಂತಾಗಿ, ನನ್ನ ಕಣ್ಣೆದುರು ದ್ವೇಷಸರ್ಪ ಹೆಡೆಯಾಡಿಸುತ್ತಿದ್ದ ಮಧುಪಾಠಕ್‌ನ ಮುಖ ಸುಳಿಯಿತು.

'ಸುಂದರವಾದ ಸಂಜೆಗೆ ಎಂಥ ಮುಕ್ತಾಯ'

—ಎಂದಳು ವಾಸಂತಿಬಹೆನ್, ತಾನೂ ಅದುವರೆಗಿನ ನಗೆಯನ್ನು ಮರೆತು.

ವಾಸಂತೀಬಹೆನ್ ನಿಟ್ಟುಸಿರಿನೊಡನೆ ಅಷ್ಟು ಹೇಳಿ, ಮೇಜಿನ ಮೇಲಿಟ್ಟಿದ್ದ ತನ್ನ ಕೈ ಚೀಲವನ್ನು ತೆರೆದು, ಅದರೊಳಗಿನ ಫೈಲನ್ನು ತೆಗೆದು ನನ್ನ ಮುಂದೆ ಇಟ್ಟು—

'ಓದಿ ನೋಡಿ ರಾವ್. ಎಲ್ಲ ವಿಷಯವೂ ಇದರಲ್ಲಿದೆ'

—ಎಂದಳು.

'ಓದುವುದು ಬೇಡ ವಾಸಂತಿ. ಬಾಯಲ್ಲೇ ಹೇಳಿಬಿಡು. ನಾವೂ ಕೇಳಿದ ಹಾಗಾಗುತ್ತೆ. ಅವರು ಓದುತ್ತಿದ್ದರೆ, ನಾವು ಸುಮ್ಮನೆ ಕುಳಿತಿದ್ದೇನು ಮಾಡುವುದು.'

—ಕುಸುಮಾ ಹೇಳಿದಳು.

‘ ಅದೂ ಸರಿಯೆ—ಬಾಯಿ ಮಾತಲ್ಲಾದರೆ ಕಥೆಗೆ ಮತ್ತಷ್ಟು ಬಣ್ಣ ಬರುತ್ತದೆ.’

—ಡಾಕ್ಟರೂ ಕುಸುಮಳ ಮಾತಿಗೇ ದನಿಗೂಡಿಸಿದರು.

‘ ಹಿಂದಿಯಲ್ಲಿ ಹೇಳಿದರೆ ನನಗೆ ತಿಳಿಯುತ್ತದೆ. ಹೇಳಿ.’

—ಎಂದು ನಾನೂ ಸಮ್ಮತಿಸಿದೆ.

‘ ಅಂತೂ—ಹೇಗಾದರೂ ಮಾಡಿ ನಾನು ತಿಂದ ತಿಂಡಿ ಕರಗಿಸದಿದ್ದರೆ ನಿಮಗಾರಿಗೂ ಸಮಾಧಾನವಿಲ್ಲ ’

—ಎಂದು ಪೀಠಿಕೆ ಹಾಕಿಕೊಂಡು ವಾಸಂತಿ ಬಹೆನ್ ಮಾತಿಗಾರಂಭಿಸಿದಳು.

# ರಿಟಾ ವಾಧ್ವಾನಿ

# ೧

'ತಿಂದ ತಿಂಡಿ ಕರಗಿಸುವುದಕ್ಕೆ ಕಥೆ ಹೇಳುತ್ತೇನೆ.'

—ಎಂಬ ಆರಂಭವಾಕ್ಯದೊಂದಿಗೆ ವಾಸಂತೀ ಬಹೆನ್ ತಾನು ಹೇಳಲಿದ್ದ ವಿಷಯವನ್ನು ಆರಂಭಿಸಿದಳು ಆಕೆಯ ಮೊದಲಿನ ಮಾತಿನಲ್ಲಿ ನಗೆಯ ತುಳುಕು ಇದ್ದರೂ, ವಿಷಯವನ್ನು ಆರಂಭಿಸುತ್ತಿದ್ದ ಹಾಗೇ, ಅದುವರೆಗೂ ಆಕೆಯ ಮುಖದ ಮೇಲಿದ್ದ ನಗೆ ಮಾತಿನ ಗೆಲುವು ಮಾಯವಾಗಿ ಮುಖದ ಮೇಲೆ ವಿಷಾದಪೂರ್ಣ ಗಾಂಭೀರ್ಯ ಮೂಡಿ, ಆಕೆಯ ನೀಲಿ ನಯನಗಳು, ಕಪ್ಪುಮೋಡವನ್ನು ಪ್ರತಿಬಿಂಬಿಸಿದ ನೀರಿನಂತಾದವು.

ಒಂದೆರಡು ಗಳಿಗೆ, ಹೇಳಲಿರುವ ವಿಷಯವನ್ನು ಹೇಗೆ, ಎಲ್ಲಿಂದ ಆರಂಭಿಸುವುದೆಂದು ಯೋಚಿಸುತ್ತಾ ಕುಳಿತಿದ್ದ ವಾಸಂತೀ ಬಹೆನ್, ಅಷ್ಟು ಹೊತ್ತಿನ ಬಳಿಕ ಭಾರವಾದ ಧ್ವನಿಯಲ್ಲಿ ಹೇಳಿದಳು—

'ಇದು ತುಂಬಾ ಜಟಿಲವಾದ ಸಮಸ್ಯೆ ಮಿ. ರಾವ್; ಬಹು ಸಿಕ್ಕು ಸಿಕ್ಕಾದ ಪ್ರಶ್ನೆ. ಎಲ್ಲೆಲ್ಲಿಗೋ ಅಲೆದಾಡಿ, ಕಡೆಗೆ ಎಲ್ಲಿಗೋ ಹೋಗಿ ನಿಲ್ಲುವಂಥದು, ಮೂಲ ಶೋಧನೆಗೆ ಹೊರಟರೆ, ದೇಶೋವಿಶಾಲವಾದ ಬೃಹತ್—ಸಮಸ್ಯೆಯಾಗಿ ನಿಲ್ಲುತ್ತದೆ ನಮ್ಮ ಮಧುಪಾರಕ್ ಸಮಸ್ಯೆ.'

ಆಕೆ ಮಧುಪಾರಕ್‌ನ ಹೆಸರು ಹೇಳುವಾಗ 'ನಮ್ಮ ಮಧುಪಾರಕ್' ಎಂದದ್ದು, ಆ ಮಾತನ್ನಾಡಿದ ರೀತಿಯನ್ನು ಕೇಳಿ ನನಗೇಕೋ ಮಧುಪಾರಕ್ ಆಕೆಯ ಹತ್ತಿರದ ಸಂಬಂಧಿಕರ ಹುಡುಗನೇನೋ ಎನಿಸಿತು. ಎಂತಲೇ ಆ ಕುತೂಹಲವನ್ನು ತಡೆಗಟ್ಟಲಾರದೆ—

'ಅಂದರೆ ಮಧುಪಾರಕ್ ನಿಮ್ಮ ಸಂಬಂಧಿಕರ ಹುಡುಗನೊ?'

—ಎಂದು ಕೇಳಿದೆ.

'ಸಂಬಂಧ ಎಂದರೆ ಬಂಧುಬಳಗಕ್ಕೆ ಸೇರಿದವನು ಎಂಬ ದೃಷ್ಟಿಯಿಂದ ಅಲ್ಲ; ಆದರೆ ಅವನೂ ಗುಜರಾತಿ ಹುಡುಗ. ಅಷ್ಟೇ ಅಲ್ಲ ರಾವ್—ನಿಜ ಹೇಳಬೇಕೆಂದರೆ, ಒಂದು ರೀತಿಯಲ್ಲಿ ಮಧು ನಮ್ಮೆಲ್ಲರ

ಹೃದಯದಲ್ಲಿ ಹುದುಗಿರುವ ಸುಪ್ತ ಹಾಲಾಹಲದ ಜೀವಂತ ರೂಪ. ನಾವು ವಿದ್ಯಾವಂತರು, ನಾಗರಿಕರು, ಸುಸಂಸ್ಕೃತರು ಎಂದುಕೊಳ್ಳುವವರು, ಹೊಟ್ಟೆಯೊಳಗಿಟ್ಟುಕೊಂಡೂ ವ್ಯಕ್ತ ಪಡಿಸಲು ಸಂಕೋಚ ಪಡುವ ಕಹಿ ಭಾವನೆಗಳ, ಘನೀಭೂತ ಸಂಜೀವ ಮೂರ್ತಿ, ಅಲ್ಲವೇ ಡಾಕ್ಟರ್ ? ಈ ಮಾತು ಅನಿಸಿದಾಗ, ನನಗೊಂದು ಮಾತು ನೆನವಾಗುತ್ತದೆ—'

—ವಾಸಂತೀ ಬಹೆನ್ ಡಾಕ್ಟರತ್ತ ತಿರುಗಿ ಹೇಳಿದಳು.

' ಏನು ಮಾತು ? '

—ಡಾಕ್ಟರ್ ಚಕಿತರಾಗಿ ಕೇಳಿದರು.

' ಏಸುಕ್ರಿಸ್ತ, ಪತಿತಳಾದ ಮೇರಿ ಮ್ಯಾಗ್ಡಲೀನಳನ್ನು ಕಲ್ಲಿನಿಂದ ಹೊಡೆಯಲು ಬಂದ ಜನಕ್ಕೆ 'ನಿಮ್ಮಲ್ಲಿ ಯಾರು ತಪ್ಪು ಮಾಡಿಲ್ಲವೋ, ಅವರು, ಮೊದಲು ಆಕೆಯನ್ನು ಕಲ್ಲಿನಿಂದ ಹೊಡೆಯಿರಿ' ಎಂದು ಹೇಳಿದ ನಂತೆ. ಆಗ ಸ್ವಯಂ ತಪ್ಪು ಮಾಡಿ ದೋಷಿಗಳಾಗಿದ್ದ ಆ ಜನ, ತಮ್ಮ ಅಜ್ಞಾನಕ್ಕೆ ತಾವೇ ನಾಚಿ, ಹಿಂದಕ್ಕೆ ಹೋದರಂತೆ. ಮಧುಫಾಠಕ್‌ನ ವಿಷಯವೂ ಹಾಗೇ ಅನಿಸುತ್ತದೆ ನನಗೆ—ಅವನು ದೋಷಿ ಎನ್ನುವಾಗ. ಅವನಲ್ಲಿ ನಮಗೆ ದೋಷವೆಂದು ಕಾಣಿಸುವುದು, ಪ್ರತ್ಯಕ್ಷವಾಗಿ ಅಲ್ಲದಿದ್ದರೂ, ಸುಪ್ತವಾಗಿ ನಮ್ಮಲ್ಲೂ ಇಲ್ಲದೆ ಇಲ್ಲ—ಅಲ್ಲವೇ ಡಾಕ್ಟರ್ ? ಅವನು ಸಿಕ್ಕಿಬಿದ್ದ ಕಳ್ಳ; ನಾವು ಸಿಗಬೀಳದ ಕಳ್ಳರು.'

—ತನ್ನನ್ನೆ ತಾನು ಆರೋಪಿಸಿಕೊಳ್ಳುವ, ಕಟುವಾದ ಧ್ವನಿಯಲ್ಲಿ ಹೇಳಿದಳು ವಾಸಂತೀ ಬಹೆನ್.

' ಸತ್ಯನಿಷ್ಠುರವಾದ ಆತ್ಮಪರೀಕ್ಷೆಯ ಕಸೂತಿಯ ಮೇಲೆ ಒರೆಗಿಟ್ಟು ನೋಡಿದಾಗ–ನಿನ್ನ ಮಾತೇನೂ ಸುಳ್ಳಲ್ಲ ವಾಸಂತೀ—We are the creators of Madhu Phatak ! (ನಾವೇ ಮಧುಫಾಠಕ್‌ನ ಸೃಷ್ಟಿಕರ್ತರು.) '

—ವಾಸಂತೀ ಬಹೆನ್ ತನ್ನ ಮೇಲೇ ಹೊತ್ತುಕೊಂಡ ತಪ್ಪಿನಲ್ಲಿ ತಾವೂ ಪಾಲುಗಾರರೇ ಎಂಬ ಧ್ವನಿಯಲ್ಲಿ ಹೇಳಿದರು ಡಾಕ್ಟರ್.

ಮಧುಫಾಠಕ್‌ನ ವಿಷಯ ಅಷ್ಟಿಷ್ಟು ತಿಳಿದ ಕುಸುಮಾಗೆ ಅವರ

ಎಲ್ಲೋ ಸುತ್ತುವ ಮಾತಿನ ಜಾಡು ಕಂಡಿತೇನೋ ಆಗಲಿ, ನನಗಂತೂ ಅದರ ಮಾತಿನ ಸಂದರ್ಭ ಅರ್ಥವೇ ಆಗಲಿಲ್ಲ. ಎಂತಲೇ ಅವರ ಮಾತಿನ ನಡುವೆ ಬಾಯಿ ಹಾಕದೆ, ಮಾತನಾಡುವವರ ಮುಖವನ್ನೇ ನೋಡುತ್ತಾ ಕುಳಿತಿದ್ದೆ ವಾಸಂತೀ ಬಹೆನ್‌ಳ ಮಾತಿಗೆ ಉತ್ತರ ಕೊಟ್ಟು, ಡಾ ಘರ ಪುರೆಯುವರೂ, ಸಿಗರೇಟು ಹೊತ್ತಿಸಿ, ಆರಿದ ಬೆಂಕಿಕಡ್ಡಿಯ ಕೊನೆಯಿಂದ ಹಲ್ಲಿನ ಸಂದಿಗಳನ್ನು ಚುಚ್ಚುತ್ತಾ, ಅಷ್ಟು ಹೊತ್ತೂ ಸುಮ್ಮನೆ ಕುಳಿತಿದ್ದರು—ಉಳಿದವರೇ, ಯಾರಾದರೂ ಮಾತಾಡಲಿ ಎಂಬಂತೆ. ಆದರೆ ಯಾರೂ ಮಾತಾಡದಿರಲು, ಆ ಮೌನ ಅಸಹ್ಯವಾದಂತೆ, ಬಳಿಕ, ತಾವೇ ಆ ಮೌನವನ್ನು ಮುರಿದು ಹೇಳಿದರು—

'ನಾವಾಡುವ ಮಾತು ನಿಮಗೇನೋ ಒಂದು ಒಗಟಿನಂತೆ ಕಾಣುತ್ತದೆ —ಅಲ್ಲವೇ ರಾವ್ '

'ನಿಜ '

'ಆದರೆ ಇದರಲ್ಲಿ ಒಗಟೇನೂ ಇಲ್ಲ. ತೋರಿಕೆಗೆ ವೈಯಕ್ತಿಕವಾಗಿ ಕಾಣುವ ಎಲ್ಲ ಸಮಸ್ಯೆಗಳೂ, ಅವುಗಳ ಅಂತರಾಳವನ್ನು ಬೆದಕಿ ನೋಡಿದಾಗ, ಹೀಗೇ ಬೃಹತ್ತಾಗಿ—ರಾಷ್ಟ್ರೀಯ ಸಮಸ್ಯೆಗಳಾಗಿರುವುದು ಗೋಚರಿಸುತ್ತದೆ. ಆಧುನಿಕ ಜಗತ್ತಿನಲ್ಲಿ, ಅಲ್ಪ, ವೈಯಕ್ತಿಕ ಎನ್ನುವಂಥ ಸಮಸ್ಯೆಗಳೇ ಇಲ್ಲ, ಎಲ್ಲವೂ ಹನಿಯಲ್ಲಿ ಹುದುಗಿದ ಕಡಲುಗಳೇ.'

'ಹಾಗಂದರೇನು ಡಾಕ್ಟರ್ ? '

'ವಿಜ್ಞಾನದ ವಿಶ್ಲೇಷಣಾ ಪರೀಕ್ಷೆಯಿಂದ ಹನಿಯನ್ನು ಪರೀಕ್ಷಿಸಿದಾಗ, ಅದು ಯಾವ ಮಹಾಸಾಗರದ ಹನಿಯೋ, ಆ ಸಾಗರದ ಸಮಸ್ತ ಗುಣದೋಷಗಳೂ ಅರ್ಥವಾಗುವಂತೆ, ನಮಗೆ ವೈಯಕ್ತಿಯವೆಂದು ಕಾಣುವ ಸಮಸ್ಯೆಯನ್ನು ಮನೋವಿಜ್ಞಾನದ ಕ್ಷ—ಕಿರಣದಿಂದ ಪರೀಕ್ಷಿಸಿದಾಗ, ಆ ವ್ಯಕ್ತಿಯ ರಾಷ್ಟ್ರವೇ ಪರಿಚಯವಾಗುತ್ತದೆ ರಾವ್. ಈ ಮಾತಿಗೆ exeptions (ಅಪವಾದ) ಇಲ್ಲವೆಂದಲ್ಲ. ಆದರೂ ಇದು ಸಾಮಾನ್ಯ ನಿಯಮ, ನಮ್ಮ ಮಧುಪಾರಕ್ ಎಂದು ಸೃಷ್ಟಿಯಾದ ಗೊತ್ತೆ ? '

'ಎಂದು ? '

'ನಮ್ಮ ದೇಶ ಸ್ವತಂತ್ರವಾದಂದು.'

‘ ಅಂದರೆ—೧೯೪೫ ನೇ ಆಗಸ್ಟ್ ೧೫ ರಂದು ಹುಟ್ಟಿದವನೇ ಈ ಹುಡುಗ ! ಅದು ಹೇಗೆ ಸಾಧ್ಯ ಡಾಕ್ಟರ್ ? ’

‘ ಅಂದರೆ—? ’

—ನನ್ನ ಮಾತು ಅರ್ಥವಾಗದಂತೆ ಕೇಳಿದರು ಡಾಕ್ಟರ್.

‘ ಈಗ ೧೯೫೭ ನಿಮ್ಮ ಮಾತಿನ ಪ್ರಕಾರ ಈಗ ಅವನಿಗೆ ಹತ್ತು–ಹನ್ನೊಂದು ವರ್ಷ ವಯಸ್ಸಾಗಿರಬೇಕು. ಆದರೆ ನೋಡಿದರೆ—ಇನ್ನೂ ಹೆಚ್ಚು ವಯಸ್ಸಾದವನ ಹಾಗೆ ಕಾಣುತ್ತಾನೆ....’

ನನ್ನ ಮಾತು ಕೇಳಿ ಡಾ. ಘರಪುರೆ, ವಾಸಂತೀಬಹೆನ್ ಇಬ್ಬರೂ ನಕ್ಕರು. ನನಗೆ ಅವರ ಮಾತಿನಷ್ಟೇ ನಗೆಯೂ ಸಮಸ್ಯೆಯಾಗಿತ್ತು. ಎಂತಲೇ ಅವರ ನಗೆಯನ್ನು ಕೇಳಿ ನಾನೂ ಪೆಚ್ಚಾಗಿ ಹೇಳಿದೆ—

‘ ನನ್ನ ವಯಸ್ಸಿನ ಲೆಕ್ಕಾಚಾರದಲ್ಲಿ ತಪ್ಪಿರಬಹುದು ಡಾಕ್ಟರ್... ’

‘ ಊಹೂ—ಅದಕ್ಕಲ್ಲ ನಾವು ನಕ್ಕದ್ದು. ’

—ಡಾ. ಘರಪುರೆ ಹೇಳಿದರು.

‘ ಮತ್ತೆ ? ’

‘ ನಾವೀಗ ಮಧುಪಾರ್ಕ್‌ನ ದೈಹಿಕ ವಯೋಮಾನದ ವಿಷಯದಲ್ಲಿ ಹೇಳುತ್ತಿದ್ದದ್ದು—ಅವನೊಳಗೆ ಬೆಳೆದಿರುವ ಈ ದೈತ್ಯಮನೋಪ್ರವೃತ್ತಿಯ ಮನಸ್ಸಿನ ಲೆಕ್ಕಾಚಾರ ಹೇಳುತ್ತಿದ್ದದ್ದು. ದೈಹಿಕವಾಗಿ ಅವನ ವಯಸ್ಸು ನೀವು ಅಂದಾಜು ಮಾಡಿದಷ್ಟೇ ಇರಬಹುದು ; ಅಥವಾ ಅಷ್ಟಿಷ್ಟು ಹೆಚ್ಚು ಕಡಮೆ ಇದ್ದರೂ ಇರಬಹುದು. ಆ ಹುಡುಗ ಎಂದು ಹುಟ್ಟಿದನೋ ನಿಖರವಾಗಿ ನಮಗೆ ತಿಳಿಯದು ; ನಮಗದು ಬೇಕೂ ಇಲ್ಲ. ಆದರೆ ಅವನೊಳಗಿನ ದೈತ್ಯ ಜನಿಸಿದ್ದು ಮಾತ್ರ—ಖಡಾಖಂಡಿತವಾಗಿ ೧೯೪೫ನೇ ಆಗಸ್ಟ್ ೧೫ ರಂದೇ. ’

—ಡಾಕ್ಟರು ಘರಪುರೆ ಹೇಳಿದರು.

‘ ಇನ್ನು ಕರಾರುವಾಕಾಗಿ ಹೇಳಬೇಕೆಂದರೆ ‘ದ್ವಿರಾಷ್ಟ್ರ ತತ್ವ’ಕ್ಕೆ ನಮ್ಮ ನಾಯಕರು ಸಹಿ ಹಾಕಿದಂದೇ ಎಂದು ಹೇಳಬಹುದಲ್ಲವೇ ಡಾಕ್ಟರ್. ’

—ಅದುವರೆಗೂ ಸುಮ್ಮನಿದ್ದ ಕುಸುಮಾ ಕೇಳಿದಳು.

‘ ಹೂ, ಹೂ, ಹಾಗೆ ಹೇಳಿದರೂ ತಪ್ಪೇನೂ ಅಲ್ಲ. ’

‘ ನೀವು ಹೇಗೆ ಹೇಳಿದರೂ ನಿಮ್ಮ ಮಾತೇನೆಂಬುದೇ ನನಗೆ ಅರ್ಥವಾಗುತ್ತಿಲ್ಲ ಡಾಕ್ಟರ್ ’

—ಎಂದೆ ನಾನು.

‘ ಸಹಜವೇ, ವಾಸಂತೀ–ನಾನು ರಾವ್‌ಗೆ ನನ್ನ ಮಾತಿನ ಅರ್ಥ ಏನೆಂದು ವಿವರಿಸುತ್ತೇನೆ. ಬಳಿಕ ನೀನು ಆ ಹಿನ್ನಲೆಯ ಮೇಲೆ, ನಿನ್ನ ಕಥೆಯನ್ನು ಹೇಳಬಹುದು.’

—ಎಂದರು ಡಾಕ್ಟರ್ ಘೆರಪುರೆ.

‘ ನಿಜ, ನಿಜ, ಆಗ ಅದು ಮತ್ತಷ್ಟು ಪರಿಣಾಮಕಾರಿಯಾಗುತ್ತದೆ ’

—ಎಂದಳು ವಾಸಂತೀಬಹೆನ್.

‘ ಅದು ಹೇಗಾಗುತ್ತದೊ ಏನೊ. ಅಂತೂ ನಿಮ್ಮ ಮಾತಿನಲ್ಲಿ ನನಗೆ ಕಣ್ಣುಮುಚ್ಚಾಲೆಯಾಟ ಆಡಿಸದೆ, ಎಲ್ಲವೂ ಅರ್ಥವಾಗುವ ಹಾಗೆ ಹೇಳಿ.’

—ಎಂದೆ ನಾನು.

‘ O K, ’

—ಎಂದು ಡಾಕ್ಟರು ಮತ್ತೊಂದು ಸಿಗರೇಟು ಹೊತ್ತಿಸಿ ಹೇಳಲಾರಂಭಿಸಿದರು.

*

## ೨

‘ ನಮ್ಮ ದೇಶ ಶತ ಶತಮಾನಗಳ ಗುಲಾಮಗಿರಿಯನ್ನು ನೀಗಿ, ಸ್ವತಂತ್ರವಾದಂದು ನಮ್ಮ ಶಿಶುದೈತ್ಯನ ಜನನವಾಯಿತೆಂದು ನಾನು ಹೇಳಿದುದನ್ನು ಕೇಳಿ ನಿಮಗೆ ಆಶ್ಚರ್ಯವಾಯಿತಲ್ಲವೇ? ಆ ಮಾತಿನ ಅರ್ಥ ಇದು—

‘ ಆ ಆಗಸ್ಟ್ ೧೫ರ ಮಧ್ಯ ರಾತ್ರಿ ದೆಹಲಿ, ರಾಜ್ಯ ಭವನದಿಂದ ದೇಶದ ಸ್ವಾತಂತ್ರ್ಯ ಘೋಷಣೆಯಾದ ಹೊತ್ತಿನಲ್ಲಿ—ಭಾರತ ಸ್ವತಂತ್ರ

ವಾಯಿತಷ್ಟೇ ಅಲ್ಲ, ಅಂದಿನವರೆಗೆ ಅಖಂಡವಾಗಿದ್ದ ನಮ್ಮ ದೇಶ ಇಬ್ಭಾಗವಾಗಿ ಸಿಡಿದೊಡೆದು, ಜಮುನಾ ನದಿಯ ದಂಡೆಯ ಮೇಲೆ ಭಾರತ ಹುಟ್ಟಿದಂತೇ, ಸಿಂಧೂ ನದಿಯ ತೀರದಲ್ಲಿ ಪಾಕೀಸ್ತಾನ ಹುಟ್ಟಿತು ಆದರೆ ಪಾಕೀಸ್ತಾನ ಹಿಂದೂಸ್ತಾನದಂತೆ ಶಾಂತಿ ಘೋಷಣೆಯೊಂದಿಗೆ ಜನಿಸಲಿಲ್ಲ, ಮತದ್ವೇಷದ ರಕ್ತವರ್ಷದಲ್ಲಿ ಜನಿಸಿತು

'ಮನುಷ್ಯ ತಾನು ಮನುಷ್ಯನೆಂಬುದನ್ನು ಮರೆತು, ಮತದ್ವೇಷವನ್ನು ಸಾಧಿಸುವ ಸಾಧಕ ಯಂತ್ರದಂತೆ ನಡೆದುಕೊಂಡ ಆ ಕಾಲದಲ್ಲಿ ನಡೆಸಿದ ಭೀಭತ್ಸ ಹತ್ಯಾಕಾಂಡವನ್ನು ನಾನು ಈಗ ಮತ್ತೊಮ್ಮೆ ವಿವರಿಸಬೇಕಾಗಿಲ್ಲ ಮಿ. ರಾವ್. ಜಗತ್ತಿಗೆ ಜಗತ್ತೇ, ಕಂಡು ಕೇಳಿ, ಮರೆಯಲೆತ್ನಿಸಿಯೂ ಮರೆಯಲಾಗದ ದಾರುಣ ಕಥೆ ಅದು.

'ಆ ಕಾಲಕ್ಕೆ ತಮ್ಮ ಮನೆಮಾರುಗಳನ್ನು ಅಗ್ನಿಗೆ ಆಹುತಿ ಕೊಟ್ಟು, ತಮ್ಮ ತಂದೆ ತಾಯಿ, ಹೆಂಡತಿ ಮಕ್ಕಳು, ಅಣ್ಣ–ತಂಗಿಯರನ್ನು ಕಟುಕರ ಚೂರಿಗಿ ಬಲಿಕೊಟ್ಟು ಬರಿಗೈ–ಬರಿ ಹೃದಯಗಳಿಂದ, ಪೂರ್ವ–ಪಶ್ಚಿಮ ಪಾಕಿಸ್ತಾನಗಳಿಂದ ಹಿಂದೂಸ್ಥಾನಕ್ಕೆ ಓಡಿಬಂದ ಲಕ್ಷಾಂತರ ಜನ ನಿರಾಶ್ರಿತರ ಪೈಕಿ ರಿಟಾಪಾಧ್ವಾನಿಯೂ ಒಬ್ಬಳು.

'ರಿಟಾಪಾಧ್ವಾನಿಯ ತಂದೆ ಚೊಯಿತ್‌ರಾಂಪಾಧ್ವಾನಿ ಕರಾಚಿಯಲ್ಲಿ ದೊಡ್ಡ ಹತ್ತಿ ವ್ಯಾಪಾರಿಗಳಾಗಿದ್ದರು. ಮನುಷ್ಯನ ಸುಖೋಪಭೋಗಕ್ಕೆ ಬೇಕಾಗುವುದೆಲ್ಲವೂ ಅವರಿಗಿತ್ತು—ದೊಡ್ಡ ಮನೆ, ಕಾರು, ಆಳುಕಾಳು, ದೊಡ್ಡ ವ್ಯವಹಾರ, ಮನೆತುಂಬ ಮಕ್ಕಳು ಮರಿ. ಅಂಥ ಮನೆಯಲ್ಲಿ ಶ್ರೀಮಂತಿಗೆಯ ಸುಪ್ಪತ್ತಿಗೆಯಲ್ಲಿ ಬೆಳೆದ ಹುಡುಗಿ ರಿಟಾ. ಆ ಮನೆಯಲ್ಲಿದ್ದ ಉಳಿದವರಂತೆಯೇ ರಿಟಾಗೂ ಭವಿಷ್ಯದ ಬಗ್ಗೆ ನೂರು ಸವಿಗನಸುಗಳಿದ್ದವೇ ಹೊರತು ಯಾವ ಚಿಂತೆಯೂ ಇರಲಿಲ್ಲ. ಆಕೆ ಯಾವುದಕ್ಕೂ ಚಿಂತೆ ಮಾಡದಂತೆಯೇ ಬೆಳೆಸಿದ್ದರು, ಅವಳ ತಂದೆ. ಮುಂದೆ ಅವಳ ಜೀವನ ಹೇಗೆ ಎನ್ನುವುದೆಲ್ಲವನ್ನೂ ಆಕೆಯ ತಂದೆ ಆಗಲೇ ವ್ಯವಸ್ಥೆ ಮಾಡಿದ್ದರು. ಇನ್ನೊಂದು ವರ್ಷ ಯಾವ ಗದ್ದಲವೂ ಇಲ್ಲದಿದ್ದಲ್ಲಿ, ರಿಟಾ ವ್ಯಾಸಂಗ ಮುಗಿದು, ಅವಳ ವಿವಾಹವೂ ಆಗಿ, ಅವಳ ಬಾಳು ನಿಶ್ಚಿತ ಮಾರ್ಗವನ್ನು ಹಿಡಿಯುತ್ತಿತ್ತು. ಆದರೆ ವಿಧಿ ಅವಳಿಗೆ ಅಷ್ಟು ಅವಕಾಶ

ಕೊಡಲಿಲ್ಲ. ಆಕೆಯ ಬಾಳಿನಲ್ಲಿ ಇದ್ದಕ್ಕಿದ್ದ ಹಾಗೇ ದುರಂತದ ಸಿಡಿಲು ಸಿಡಿಯಿತು.

'ದೇಶ ಇಬ್ಭಾಗವಾಗಿ, ಪಂಜಾಬಿನ ಪಶ್ಚಿಮಾರ್ಧದ ಆಚೆಯ ಭಾಗ ಪಾಕಿಸ್ತಾನವಾಗುವುದೆಂಬ ಸುಳಿವು ತಿಳಿಯುತ್ತಿದ್ದ ಹಾಗೇ ಅಲ್ಲಿಯ ಹಿಂದೂ ಜನ, ಮುಂದೆ ಏನಾಗಬಹುದೆಂದು ಊಹಿಸಿ, ಹಿಂದೂಸ್ಥಾನದ ನಗರಗಳ ಕಡೆ ಸರಿಯಲಾರಂಭಿಸಿದ್ದರು. ಆ ಭಾಗದ ಮುಸಲ್ಮಾನರಿಗೆ ತಮ್ಮ ಮೇಲೆ ಆಕ್ರೋಶವಿದ್ದ ವಿಷಯ ಅವರಿಗೆ ತಿಳಿಯದ ಸಂಗತಿ ಏನೂ ಆಗಿರಲಿಲ್ಲ ಆಕ್ರೋಶಕ್ಕೆ ಮತದ್ವೇಷವೊಂದೇ ಕಾರಣವಾಗಿರಲಿಲ್ಲ ಮಿ. ರಾವ್. ಆ ದೇಶದ ಆರ್ಥಿಕ ರಚನೆಯೂ ಕಾರಣವಾಗಿತ್ತು. ಆ ಸೀಮೆಯ ಬಹು ಸಂಖ್ಯಾತರಾದ ಮುಸಲ್ಮಾನ್ ಜನ ಬಡವರು, ಕೂಲಿಗಾರರು, ರೈತರು, ಅವರ ಆರ್ಥಿಕ ಪರಿಸ್ಥಿತಿಯ ಜೀವ ಜೀವಾಳ, ಅಲ್ಲಿಯ ವ್ಯಾಪಾರ, ವಾಣಿಜ್ಯ, ಕೈಗಾರಿಕೆಯ ಬಹು ಭಾಗ, ಅಲ್ಪ ಸಂಖ್ಯಾತರಾದ ಸಿಂಧಿ ಹಿಂದೂಗಳ ಹಿಡಿಯಲ್ಲಿತ್ತು. ಈ ಆರ್ಥಿಕ ಶೋಷಣೆಯಿಂದ ಹೊಗೆಯಾಡುತ್ತಿದ್ದ ಆಕ್ರೋಶ, ಸಿಡಿಲಾಗಿ ಸಿಡಿಯಲು, ಮತದ್ವೇಷ ದಾರಿ ಮಾಡಿಕೊಟ್ಟಿತು.

'ಈ ಸಿಡಿಲನ್ನು ನಿರೀಕ್ಷಿಸಿದವರು ಮೊದಲೇ ಆದಷ್ಟು ಆಸ್ತಿ ಪಾಸ್ತಿಗಳ ಭದ್ರತೆ ಮಾಡಿಕೊಂಡು ಅಲ್ಲಿಂದ ತಳಕಿತ್ತರು ಆದರೆ ಚೋಯಿತ್ ರಾಂಪಾಧ್ವಾನಿಯವರಿಗೆ ಮಾತ್ರ ಅಂಥ ಭಯವೇನೂ ಇರಲಿಲ್ಲ. ಅವರ ಶ್ರೀಮಂತಿಕೆಯ ಬಹುಭಾಗ ಶೋಷಣೆಯಿಂದ ಬರದೆ ವ್ಯವಹಾರ ಜಾಣ್ಮೆಯಿಂದ ಬಂದಿತ್ತು. ಹಾಗೆ ಗಳಿಸಿದ ಹಣದಲ್ಲೂ ಅವರು ಸಾಕಷ್ಟನ್ನು ದಾನಧರ್ಮಗಳಿಗೆ-ಅದರಲ್ಲೂ ಆ ಜಾತಿ ಈ ಜಾತಿ ಎಂದು ನೋಡದೆ–ವಿನಿಯೋಗಿಸಿದ್ದರು. ಅವರ ಅಂಗಡಿಯಲ್ಲಿ ದುಡಿಯುವ ಮುಸಲ್ಮಾನರ ಪಾಲಿಗೂ ಅವರು 'ದಾದಾ' ಆಗಿದ್ದರು. ಹಾಗಿರುವಾಗ ಸಿಂಧ್ ಪಾಕಿಸ್ತಾನವಾದ ಮಾತ್ರಕ್ಕೇ ತಮಗೇನೂ ಕೆಡುಕಾಗದೆಂದೇ ಭಾವಿಸಿದ್ದರು. ಆದರೆ ಪ್ರಕ್ಷುಬ್ಧ ಜ್ವಾಲಾಮುಖಿಯ ಹೃದಯದಿಂದ ಆಸ್ಫೋಟನವಾಗಿ ಹರಿದು ಬರುವ ಲಾವರಸದ ತಪ್ತ ಲೊಹೋದಕ ಪ್ರವಾಹ, ಇದು ಹುಲ್ಲೆಸಳು, ಇದು ಹೂವು ಎಂದು ನೋಡುತ್ತದೆಯೇ ? ದಾರಿಯಲ್ಲಿ ಸಿಕ್ಕುದೆಲ್ಲ

ವನ್ನು ಸುಟ್ಟು ಕರಿಕು ಮಾಡಿ ಹರಿಯುವ ಹಾಗೆ, ಮತದ್ವೇಷದ ನಂಜು ಬೆಂಕಿಯಿಂದ ಪುಷ್ಟರಾದ ಮುಸಲ್ಮಾನರ ಆಕ್ರೋಶ, ಇದ್ದ ಬದ್ದ ಹಿಂದುಗಳನ್ನೆಲ್ಲಾ ಹುರಿದು ಮುಕ್ಕಿತು ಅವರ ಪೈಶಾಚಿಕ ದಾಹಕ್ಕೆ ಚೊಯಿತ್‌ರಾಂರೂ ಬಲಿಯಾಗದೆ ಉಳಿಯಲಿಲ್ಲ. ಅವರ ಮನೆಯೂ ಉರಿದು ಬೂದಿಯಾಯಿತು ಬೂದಿಯಾಯಿತು–ನಿಜ, ಅಕ್ಷರಶಹ ಬೂದಿಯಾಯಿತು. ಏನೂ ಉಳಿಯಲಿಲ್ಲ. ಮನೆಯೂ ಉಳಿಯಲಿಲ್ಲ; ಮನೆಯಲ್ಲಿದ್ದವರ ಮಾನವೂ ಉಳಿಯಲಿಲ್ಲ.'

—ಡಾ. ಘರಪುರೆ ಬಹು ಬಳಲಿದವರಂತೆ ಎಳೆದೆಳೆದು ಹೇಳಿ ನಿಟ್ಟುಸಿರಿಟ್ಟರು. ಆ ವಿಷಯ ಹೇಳುವಾಗ ಅವರ ಹೃದಯಕ್ಕೆ ಬಹು ಹಿಂಸೆಯಾಗಿರಬೇಕೆಂದು, ಆ ಬಳಲಿದ ನಿಟ್ಟುಸಿರೇ ಸಾರಿ ಸಾರಿ ಹೇಳಿತು

ಪಾಕೀಸ್ತಾನದ ಉದಯಕಾಲದಲ್ಲಿ ನಡೆದ ಘನ ಘೋರ ಭೀಭತ್ಸ ಹತ್ಯಾಕಾಂಡದ ಸಹಸ್ರ ಕಥೆಗಳನ್ನು ಪತ್ರಿಕೆಗಳಲ್ಲಿ ಓದಿದ್ದ ನನಗೆ, ಡಾಕ್ಟರ ಮಾತು ಕೇಳಿ ಮತ್ತೆ ಅವೆಲ್ಲವೂ ನೆನಪಾಗಿ, ಮೈ ನಡುಗಿ 'ಮುಂದೇನಾಯಿತು' ಎಂದು ಕೇಳಲೂ ಬಾಯಿ ಬರಲಿಲ್ಲ.

ಹಾಗೆ ನಾವಿಬ್ಬರೂ ಬಾಯಿ ಕಟ್ಟಿದಂತೆ ಕುಳಿತಿದ್ದಾಗ, ಡಾಕ್ಟರು ಹೇಳುತ್ತಿದ್ದುದನ್ನು ಸುಮ್ಮನೆ ಕುಳಿತು ಕೇಳುತ್ತಿದ್ದ ಕುಸುಮಾ ನಡುವೆ ಬಾಯಿ ಹಾಕಿ—

'ನಿಮಗೆ ಗೊತ್ತಿದೆಯೊ ಇಲ್ಲವೋ ಡಾಕ್ಟರ್ ರಿಟಾಳ ಬಾಳ ದುರಂತಕ್ಕೆ ನೀವು ಹೇಳಿದ ಸಾಮಾನ್ಯ ಕಾರಣಗಳೇ ಅಲ್ಲದೆ, ವೈಯುಕ್ತಿಕವಾದ ಮತ್ತೊಂದು ಕಾರಣವೂ ಇತ್ತಂತೆ'

—ಎಂದಳು.

'ಅದೇನು ?'

—ಡಾಕ್ಟರ್ ಕೇಳಿದರು

'ಆ ವಿಷಯವನ್ನು ನಿಮ್ಮ ಮುಂದೆ ರಿಟಾ ಹೇಳಿದಾಳೊ ಬಿಟ್ಟಿದಾಳೊ ನನಗೆ ತಿಳಿಯದು ಆದರೆ ಭಗ್ನಪ್ರಣಯವೂ, ಆಕೆಯ ಬಾಳ ದುರಂತಕ್ಕೆ ತನ್ನ ಪಾಲಿನ ಹಾಲಾಹಲ ಬೆರೆಸಿತಂತೆ.'

'ಹಾಗೇ!'

—ಚಕಿತರಾಗಿ ಹೇಳಿದರು ಡಾಕ್ಟರು—

‘ನನಗದು ತಿಳಿದಿರಲಿಲ್ಲ. ಎಷ್ಟು ಕಲಿತವಳಾದರೂ ಹೆಣ್ಣು ಹೆಣ್ಣೆ. ಅದಕ್ಕೆಂತಲೇ ಈ ವಿಷಯ ನನ್ನ ಮುಂದೆ ಹೇಳಲು ನಾಚಿರಬೇಕು. ಅದೇನು ವಿಷಯ ಕುಸುಮಾ ?’

‘ನಮ್ಮ ರಿಟಾನ ನೀವು ನೋಡಿಲ್ಲ ರಾವ್, ತುಂಬ ಚೆಲುವೆ ಈಗ, ಪಡಬಾರದುದನ್ನೆಲ್ಲಾ ಪಟ್ಟು ಒಂದು ಮೋಡ ಮುಸುಕಿದ ಚಂದ್ರನ ಹಾಗಾಗಿದಾಳೆ ಆದರೆ, ಈಗಲೂ ಅಷ್ಟು ರೂಪವತಿಯರನ್ನು ನಾನು ಬಹು ಮಂದಿಯನ್ನು ನೋಡಿಲ್ಲ ಸಿಂಧಿ ಹುಡುಗಿಯರೇ ನೋಡಲಿಕ್ಕೆ ಸುಂದರಿಯರು ರಿಟಾ ಅವರಲ್ಲೂ ಆರಿಸಿದ ಆಣಿಮುತ್ತು. ಈಗಲೇ ಹೀಗೆ. ಇನ್ನು ಸಕಲ ಸುಖ ಸೌಭಾಗ್ಯಗಳೂ ಇದ್ದ ಕಾಲದಲ್ಲಿ ಹೇಗಿದ್ದಳೊ.’ ಅಂತೂ ಅವಳಿಗೆ ಅವಳ ರೂಪವೇ ವೈರಿಯಾಯಿತು.

—ಎಂದು ಒಂದು ಗಳಿಗೆ ಸುಮ್ಮನಿದ್ದು ಬಳಿಕ ಕುಸುಮಾ ತಾನು ಹೇಳುತ್ತಿದ್ದ ವಿಷಯವನ್ನು ಮುಂದುವರಿಸಿದ್ದಳು

‘ರಿಟಾಳ ಕಥೆ ಹೇಳುವಾಗ ನನಗೆ ಒಂದು ಮಾತು ನೆನಪಿಗೆ ಬರುತ್ತದೆ ರಾವ್ ಬಿ ಎ. ದಲ್ಲಿ ಓದುತ್ತಿರುವಾಗ ನಮಗೆ ‘ಯಶೋಧರ ಚರಿತೆ’ ಅನ್ನುವ ಕನ್ನಡ ಪಠ್ಯಪುಸ್ತಕ ಅಭ್ಯಾಸಕ್ಕೆ ಇಟ್ಟಿದ್ದರು ಆ ಹಳೆಯ ಕಾಲದ ಕವಿ, ತನ್ನ ಕಾವ್ಯದಲ್ಲಿ ಒಂದು ಮಾತು ಹೇಳಿದ್ದಾನೆ. ‘ಮನಸಿಜನ ಮಾಯೆ ವಿಧಿ ವಿಳಸನದನೆನಂಬಿಂಡೆಯೆ ಕೊಂದು ಕೂಗದೆ ನರರಂ’ ಎಂದು. ಅದು ನಿಮಗೂ ನೆನಪಿರಬೇಕು ರಿಟಾಳ ಕಥೆಯೂ ಆ ಕವಿವಾಣಿಗೆ ಉದಾಹರಣೆಯೆ—

‘ರಿಟಾಳ ತಂದೆಯ ಅಂಗಡಿಯಲ್ಲಿ ಅಬ್ದುಲ್ ಸಮದ್ ಎನ್ನುವ ನೌಕರ ಒಬ್ಬನಿದ್ದನಂತೆ. ಆ ಅಬ್ದುಲ್ ಸಮದ್‌ನ ತಂದೆಯೂ, ಚೋಯಿತ್‌ರಾಂರ ಬಳಿ ಚಾಕರನಾಗಿದ್ದನಂತೆ ಆತ ತೀರಿಕೊಳ್ಳುವಾಗ ದಿಕ್ಕುದಾಯಿಯಿಲ್ಲದ ತನ್ನ ತಬ್ಬಲಿ ಮಗನನ್ನು ಚೊಯಿತ್‌ರಾಂರ ಕೈಗೊಪ್ಪಿಸಿ ‘ಈ ತಬ್ಬಲಿಯನ್ನು ನೀವೇ ತಂದೆ ತಾಯಿ ಆಗಿ ಕಾಪಾಡಬೇಕು’ ಎಂದು ಹೇಳಿ ಸತ್ತನಂತೆ ಆ ಮಾತಿನಂತೆ ಚೋಯಿತ್‌ರಾಂ ಈ ಹುಡುಗನನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು, ಆಳಿನ ಮಗನಂತೆ ಕಾಣದೆ,

ಹೊಟ್ಟೆಯಲ್ಲಿ ಹುಟ್ಟಿದ ಮಗ ಎಂಬಷ್ಟು ವಿಶ್ವಾಸದಿಂದ ಬೆಳೆಸಿದನಂತೆ. ತನ್ನ ಸ್ವಂತ ತಂದೆ ಬದುಕಿದ್ದಿದ್ದರೆ ಅಬ್ದುಲ್‌ಸಮುದ್‌ನ ಅದೃಷ್ಟ ಹೇಗಾಗುತ್ತಿತ್ತೋ, ಅವನೂ ಎಲ್ಲೋ ಯಾರ ಬಳಿಯಲ್ಲಿಯೋ ಆಳಾಗಬೇಕಾಗಿತ್ತೋ ಯಾರು ಬಲ್ಲರು. ಆದರೆ ಚೋಯಿತ್‌ರಾಂರ ಕೈಗೆ ಬಂದು ಇವನ ಭಾಗ್ಯ ಏರಿತು. ಅವರು ಈ ಹುಡುಗನನ್ನು ಮನೆಗೆಲಸಕ್ಕೆ ಹಾಕದೆ, ಶಾಲೆಗೆ ಸೇರಿಸಿ' ವಿದ್ಯೆ ಕಲಿಸಿ, ಕೊನೆಗೆ ತಮ್ಮ ಅಂಗಡಿಯಲ್ಲೇ ಒಂದು ಒಳ್ಳೆಯ ಕೆಲಸ ಕೊಟ್ಟರು

'ಚಿಕ್ಕಂದಿನಿಂದಲೂ ಚೋಯಿತ್‌ರಾಂರ ಮನೆಯಲ್ಲೇ ಬೆಳೆದ ಸಮುದ್‌ಗೆ ಮನೆಯಲ್ಲಿ ಬೇಕಾದ ಹಾಗೆ ಓಡಾಡುವ, ಎಲ್ಲರೊಂದಿಗೂ ಸಲಿಗೆಯಾಗಿ ಮಾತನಾಡುವ ಅವಕಾಶವಿತ್ತು ವಯಸ್ಸಿನಲ್ಲಿ ಸಮುದ್ ರಿಟಾಗಿಂತ ಒಂದೆರಡು ವರ್ಷ ದೊಡ್ಡವನಂತೆ ಸಮುದ್ ಪರಜಾತಿಯವನು ಪ್ರಾಯಸ್ಥ. ಆದರೂ ಅವನು ಮನೆಯ ಮಗನಂತೇ ಇದ್ದುದರಿಂದ ರಿಟಾ ಅವನೊಂದಿಗೆ ಯಾವ ಸಂಕೋಚವೂ ಇಲ್ಲದೆ ಮಾತನಾಡುತ್ತಿದ್ದಳಂತೆ. ಆದರೆ ರಿಟಾ ಪ್ರಾಯಕ್ಕೆ ಬಂದಾಗ, ಸಮುದ್ ರಿಟಾಳ ನಿಸ್ಸಂಕೋಚ ನಡತೆಗೆ, ತಾನೇ ಬೇರೇನೊ ಕಾರಣ ಊಹಿಸಿ, ಅವಳನ್ನು ಕಾಮುದ ಕಣ್ಣಿನಿಂದ ನೋಡತೊಡಗಿದ

'ಮೊದಲಷ್ಟು ದಿನ ಅವನಿಗೆ ತನ್ನ ಹೃದಯದ ಭಾವನೆಯನ್ನು ಯಾರ ಮುಂದೂ ವ್ಯಕ್ತಪಡಿಸಲು ಧೈರ್ಯವಿರಲಿಲ್ಲ ಆದರೆ ದಿನದಿನಕ್ಕೂ ಕೆರಳಿ ಪ್ರಬಲಿಸುವ ಕಾಮುವನ್ನು ಎಷ್ಟು ದಿನ ತಾನೇ ಮುಚ್ಚಿಡಲು ಸಾಧ್ಯ. ದಿನದಿನಕ್ಕೆ ಮಾತಿನ ರೀತಿಯಲ್ಲಿ, ನೋಟದಲ್ಲಿ ಅವನ ಹೃದಯದ ಭಾವನೆ ವ್ಯಕ್ತವಾಗತೊಡಗಿತು. ಕೊನೆಗೆ ಒಂದು ದಿನ, ರಿಟಾ ಒಂಟಿಯಾಗಿದ್ದಾಗ ಆ ಹೊತ್ತು ಸಾಧಿಸಿ ಸಮುದ್ ರಿಟಾಗೆ ತನ್ನ ಹೃದಯದ ಬಯಕೆಯನ್ನು ತಿಳಿಸಿದನಂತೆ

'ಮೊದಲ ದಿನ ಸಮುದ್ ಆ ಮಾತಾಡಿದಾಗ, ರಿಟಾ, ಅವನು ತಮಾಷೆ ಮಾಡುತ್ತಿದ್ದಾನೆಂದೇ ತಿಳಿದು ನಕ್ಕುಬಿಟ್ಟಳಂತೆ–ಆದರೆ ಅವನು ತಮಾಷೆ ಮಾಡುತ್ತಿಲ್ಲವೆನ್ನುವುದು ಬಹುಬೇಗ ಅವಳಿಗೂ ಮನವರಿಕೆಯಾಯಿತು. ಕಡೆಗೊಂದುದಿನ ಅವನಿಗೆ ಸ್ಪಷ್ಟವಾಗಿ ಹೇಳಿದಳು; 'ಈ

ಕೆಟ್ಟ ಯೋಚನೆಯನ್ನು ಬಿಟ್ಟುಬಿಡು. ಇದು ಎಂದೂ ಆಗಹೋಗದ ಮಾತು. ಇನ್ನೊಮ್ಮೆ ಈ ಮಾತಾಡಿದರೆ ನೀನು ಈ ಮನೆಬಿಟ್ಟು ಹೋಗಬೇಕಾಗುತ್ತದೆ' ಎಂದು. ಮನೆ ಬಿಟ್ಟು ಹೋಗಬೇಕಾಗಬಹುದೇನೋ ಎಂಬ ಭಯದಿಂದ ಸಮದ್ ಬಾಯಿಮುಚ್ಚಿಕೊಂಡರೂ, ಅವನ ಮನಸ್ಸಿನೊಳಗಿನ ಆಸೆ ಮಾತ್ರ ಬಿಡಲಿಲ್ಲ. ಹೇಗಾದರೂ ಮಾಡಿ ಈ ಬಯಕೆಯನ್ನು ತೀರಿಸಿಕೊಳ್ಳಬೇಕೆಂದು ಹೊತ್ತುಕಾಯುತ್ತಾ ಹೊಂಚುಹಾಕುತ್ತಿದ್ದ. ನೇರವಾದ ದಾರಿಯಲ್ಲಿ ಗುರಿ ಸಾಧಿಸಲಾಗದ ಅವನ ಬಯಕೆ, ಅಡ್ಡದಾರಿಯನ್ನು ಹುಡುಕುತ್ತಿತ್ತು

'ತಾನು ರಿಟಾಳನ್ನು ಮದುವೆಯಾಗಲು ತನ್ನ ಸಾಮಾಜಿಕ ಅಂತಸ್ತೇ ಅಲ್ಲದೆ, ಜಾತಿಯೂ ಅಡ್ಡವೆಂದು ಅರಿತ ಸಮದ್‌ನಲ್ಲಿ ಜಾತಿದ್ವೇಷದ ವಿಷಬಳ್ಳಿ ಕುಡಿಯೊಡೆದು, ಅವನ ಮನಸ್ಸು ಮುಸ್ಲಿಂ ಲೀಗಿನ ಹಿಂದೂ ವಿದ್ವೇಷದ ಮಾತಿಗೆ ಸೋತಿತು. ದಿನದಿನಕ್ಕೆ ಹೆಚ್ಚು ಹೆಚ್ಚಾಗಿ ಆ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದ

'ಪಾಕಿಸ್ತಾನದ ನಿರ್ಮಾಣದ ಮೊದಲೇ, ಅಲ್ಲಿದ್ದ ಹಿಂದೂಗಳನ್ನೆಲ್ಲ ಮುಗಿಸಬೇಕೆಂಬ ರಹಸ್ಯ ಕಾರ್ಯಕ್ರಮವೊಂದನ್ನು ಲೀಗು ಯೋಚಿಸಿತು. ಆ ಸಾಮೂಹಿಕ ಹತ್ಯಾಕಾಂಡದ ಯೋಜನೆಯಲ್ಲಿ ಸಮದ್ ತನ್ನ ಬಯಕೆಯನ್ನು ತೀರಿಸುವ ದಾರಿಯನ್ನು ಕಂಡ

'ಲೀಗು ತನ್ನ ಕಾರ್ಯಕ್ರಮವನ್ನು ಎಷ್ಟೇ ರಹಸ್ಯವಾಗಿಡಬೇಕೆಂದು ಬಯಸಿದರೂ, ಅದು ಶುದ್ಧ ರಹಸ್ಯವಾಗಿಯೇ ಉಳಿಯದೆ ಕಿವಿ ಕಿವಿಯಿಂದಲೇ ದಾಟಿಕೊಂಡು ಬಂದು, ಕೊನೆಗೆ ಚೋಯಿತ್‌ರಾಂರ ಕಿವಿಯನ್ನು ಸೇರಿತು. ಈ ಸುದ್ದಿಯನ್ನು ಕೇಳಿಯೂ ಚೋಯಿತ್‌ರಾಂರು ನಂಬಲಿಲ್ಲ. ತಾವು ಯಾರಿಗೂ ಕೆಡಕು ಮಾಡಿರಲಿಲ್ಲ. ಎಂತಲೇ ತಮಗೆ ಯಾರೂ ಕೆಡಕುಮಾಡಲಾರರೆಂದೇ ನಂಬಿದ್ದರು ಆ ನಂಬಿಕೆಯೇ ಅವರಿಗೆ ಮುಳುಗು ನೀರು ತಂದಿತು. ಲೀಗಿನ ವಿಧ್ವಂಸಕ ಕಾರ್ಯಕ್ರಮದ ಪತ್ತೆಹತ್ತಿದ ಎಷ್ಟೋ ಮಂದಿ, ಅವಕಾಶವಿದ್ದಾಗಲೇ ಆದಷ್ಟು ಆಸ್ತಿಪಾಸ್ತಿಯನ್ನು ಸಾಗಿಸಿಕೊಂಡು ಕರಾಚಿಯನ್ನು ಬಿಟ್ಟರು ಅದೇ ದಾರಿಯನ್ನೇ ಚೋಯಿತ್‌ರಾಂರಿಗೂ ಹೇಳಿದರು. ಅದಕ್ಕೆ ಅವರು 'ಕೆಣಕದೆ, ಹಾವಿ

ನಂಥ ವಿಷಜಂತು ಸಹ ಕಡಿಯುವುದಿಲ್ಲ. ಹಾಗಿರುವಾಗ ಇನ್ನೂ ವಿನಾ ಕಾರಣ, ಬುದ್ಧಿ, ಹೃದಯ, ಆತ್ಮ ಇರುವ ಮನುಷ್ಯ ಅಂಥ ಪಾಶವೀಕೃತ್ಯ ಮಾಡಿಯಾನೆ? ಅಥವಾ ಒಂದಿಬ್ಬರು ಪುಂಡರು ಹಾಗೆ ಮಾಡಬೇಕೆಂದು ಕೊಂಡರೂ ಸುತ್ತಲವರು ಬಿಟ್ಟಾರೇ ? ಸರ್ಕಾರ ಸುಮ್ಮನಿದ್ದೀತೇ? ಇದು ವೃಥಾ ಬೆದರುಗುಳಿತನ' ಎಂದು ನಕ್ಕು ಸುಮ್ಮನಿದ್ದುಬಿಟ್ಟರು.

'ಅವರಿಗೆ ತಮ್ಮ ಒಳ್ಳೆಯ ತನದಲ್ಲಿ ಮನುಷ್ಯನ ಮನುಷ್ಯತ್ವದಲ್ಲಿ ಎಷ್ಟುಮಟ್ಟಿನ ನಂಬಿಕೆ ಇದ್ದಿತೆಂದರೆ, ಕಡೆ ಕಡೆಗೆ ಅವರ ಹೆಂಡತಿ ಮಕ್ಕಳೇ ಇಲ್ಲಿರುವುದು ಕ್ಷೇಮವಲ್ಲ. ಕೊನೆಯ ಪಕ್ಷ ಹಳೆಯ ಸರಕಾರ ಹೋಗಿ, ಹೊಸ ಸರಕಾರ ಬಂದು ನೆಲೆಯಾಗಿ ನಿಲ್ಲುವವರೆಗಾದರೂ ಬೊಂಬಾಯಿಗೋ ಕಲ್ಕತ್ತಾಕ್ಕೋ ಹೋಗಿರೋಣ. ಆಮೇಲೆ ಹೇಗೆಂದರೆ ಹಾಗೆ ಮಾಡಬಹುದು' ಎಂದು ಹೇಳಿದರೂ ಕೇಳಲಿಲ್ಲ, 'ಛೆ, ಛೆ, ಎಲ್ಲಿಯಾದರೂ ಉಂಟೆ? ಜನಬಲ, ಧನಬಲ ಇರುವ ನಮ್ಮಂಥವರೇ ಹೀಗೆ ಹೆದರಿ ಹೋದರೆ ಉಳಿದವರ ಪಾಡೇನು? ಜನಕ್ಕೆಷ್ಟು ಕಷ್ಟ, ಅಲ್ಲದೆ ದೇಶಕ್ಕೆ ಎಷ್ಟು ಕೆಟ್ಟ ಹೆಸರು ಅದು ಆಗದ ಮಾತು' ಎಂದೇ ಹೆಂಡತಿ ಮಕ್ಕಳಿಗೆ ಉತ್ತರ ಕೊಟ್ಟು ಅವರ ಬಾಯಿ ಮುಚ್ಚಿಸಿಬಿಟ್ಟರು.

'ಕೊನೆಗೆ ಆ ರುದ್ರದಿನ—ಜಗತ್ತಿನ ಇತಿಹಾಸದಲ್ಲೇ ಅತ್ಯಂತ ಘೋರದಿನ—ಬಂತು. ಆ ದಿನವೇ ರಕ್ತನಖ, ರಕ್ತಮುಖಿಯಾದ ಕೊಲೆಮಾರಿ, ತನ್ನ ಉರಿನಾಲಗೆಯನ್ನು ಚಾಚಿ ಪಾಕೀಸ್ತಾನದಲ್ಲಿ ಪ್ರವೇಶ ಮಾಡಿದಳು. ಊರೂರೂ ಕೇರಿ ಕೇರಿಗಳನ್ನು ನುಂಗಿಬಂದ ಜಾತಿದ್ವೇಷದ ಕರಾಳ ರಕ್ಕಸಿ, ಕರಾಚಿಯಲ್ಲೂ ತನ್ನ ಕೊಲೆಗೈಯನ್ನು ಚಾಚಿದಳು. 'ದೀನ್, ದೀನ್' 'ಅಲ್ಲಾಹೂ ಅಕ್ಬರ್' 'ಪಾಕೀಸ್ತಾನ್ ಜಿಂದಾಬಾದ್' 'ಕಾಫಿರ್‌ಲೋಗ್ ಮುರ್ದಾಬಾದ್' ಎಂಬ ಕೂಗು ನೆಲ ಮುಗಿಲನ್ನು ನಡುಗಿಸಿತು. ಆ ಕೂಗಿನಷ್ಟೇ ಎತ್ತರಕ್ಕೇರಿತು. ಜಾತಿವಿದ್ವೇಷದ ಬೆಂಕಿಗೆ ತುತ್ತಾದ ಮನೆಮಠಗಳ ಜ್ವಾಲೆ, ಆದರಲ್ಲಿದ್ದವರ ಆಕ್ರಂದನಧ್ವನಿ. ಕಂಡಕಂಡಲ್ಲಿ ಹಿಂದೂಗಳ ರುಂಡಗಳು ಬೀದಿಯಲ್ಲಿ ಹೊರಳಿದವು. ನಾಯಿ ಹದ್ದುಗಳಿರಲಿ, ಭೂಮಿಗೂ ಅಷ್ಟು ನೆತ್ತರನ್ನು ಒಂದೇ ಬಾರಿ ಕುಡಿಯುವುದು ಅಸಾಧ್ಯವಾಗಿ ಕಕ್ಕಿತು. ಮಾನಭ್ರಷ್ಟಳಾಗದ

ಹಿಂದೂ ಹೆಣ್ಣು—ಅವಳು ಹುಡುಗಿಯೊ ಯೌವನಸ್ಥೆಯೋ, ವೃದ್ಧೆಯೊ—ಒಬ್ಬಳೂ ಉಳಿಯಲಿಲ್ಲ. ತಾಯಿಯ ಇದಿರು ಮಕ್ಕಳನ್ನು ಕಡಿದರು; ಗಂಡನನ್ನು ಕಂಬಕ್ಕೆ ಬಿಗಿದು, ಹತ್ತಾರು ಜನ ಅವನ ಕಣ್ಣೆದುರಿನಲ್ಲೇ ಅವನ ಹೆಂಡತಿಯ ಮೇಲೆ ಅತ್ಯಾಚಾರ ನಡೆಸಿದರು, ಮನೆಯವರ ಇದುರಿನಲ್ಲೇ ಅವರದೆನ್ನುವುದೆಲ್ಲಕ್ಕೂ ಬೆಂಕಿ ಹೊತ್ತಿಸಿ, ಕೊನೆಗೆ ಅವರನ್ನೂ ಕತ್ತರಿಸಿ, ಆ ಬೆಂಕಿಗೆ ಚೆಲ್ಲಿದರು. ಕೊಲೆಗಡುಕನ ಕತ್ತಿಗಾಗಲಿ, ಅತ್ಯಾಚಾರಿಯ ಭೋಗತೃಷೆಗಾಗಲಿ ಬಿಡುವೇ ಇರಲಿಲ್ಲ, ಎಲ್ಲೆಡೆಯಲ್ಲೂ ಅವುಗಳ ಪಿಶಾಚವರ್ಧನವೇ ನಡೆಯುತ್ತಿತ್ತು. ಯುಗಯುಗಾಂತರಗಳಿಂದ ಮಾನವನ ಹೃದಯದಲ್ಲಿ ಬಂಧಿತವಾಗಿದ್ದ ಪಿಶಾಚ ಭಾವನೆಗಳೆಲ್ಲಕ್ಕೂ ಅಂದು ಬಿಡುಗಡೆಯಾಗಿತ್ತು ಅಂದು ಕಣ್ಣುಮರೆಯಾಗಿದ್ದುದೊಂದೇ—ಮಾನವತೆ—

'ಮಾನವನ ದಾನವತೆಯ ನಗ್ನನರ್ತನದ ಇದಿರು ಚೋಯಿತ್‌ರಾಂರ ಮನುಷ್ಯತ್ವದಲ್ಲಿನ ನಂಬಿಕೆಯೂ ಭಗ್ನವಾಗಿ ಹೋಯಿತು. ಮುರಿದು ಹೊಯ್ದಾಡುತ್ತಿದ್ದ ಅವರ ವಿಶ್ವಾಸಕ್ಕೆ ಬಿದ್ದ ಕೊನೆಯ ಪೆಟ್ಟು—ಮಾರಕಾಘಾತ—ಸಮುದ್‌ನಿಂದ ಆದುದು. ತಾವು ಮಗನಂತೆ ಸಾಕಿದ ಸಮುರ್‌ನೇ ಹತ್ತಾರು ಜನ ಪಿಶಾಚಗಳಂತೆ ಹಲ್ಕೊರೆದು ವಿಕಟಾಟ್ಟಹಾಸ ಮಾಡುತ್ತಿದ್ದ ಸಂಗಡಿಗರೊಂದಿಗೆ ಬಂದು, ಚೋಯಿತ್‌ರಾಂರನ್ನು ಅವರ ಮನೆಯ ಬೀದಿ ಬಾಗಿಲ ಬಳಿಯ ಕಂಭಕ್ಕೆ ಬಿಗಿದು, ಅವರ ಕಣ್ಣೆದುರಿಗೆ ಅವರ ಗಂಡುಮಕ್ಕಳನ್ನೂ ಕಡಿದು, ರಿಟಾಳನ್ನೂ, ಅವಳ ತಾಯಿಯನ್ನೂ ತನ್ನ ಸಂಗಡಿಗರೊಂದಿಗೆ ಕೆಡೆಸಿ, ಆ ಮನೆಗೆ ಬೆಂಕಿ ಹಚ್ಚಿ, ಅದೆಲ್ಲವನ್ನೂ ನೋಡಲೆಂದು ಚೋಯಿತ್‌ರಾಂರನ್ನು ಉಳಿಸಿ ಹೋದಾಗ ಚೋಯಿತ್‌ರಾಂರಿಗೆ ಮಾನವತೆಯಲ್ಲಿದ್ದ ನಂಬಿಕೆ ಸತ್ತುಹೋಯಿತು. 'ಕಾಡಿನಲ್ಲಿ ಅಲೆಯುವ ಹುಲಿಯನ್ನು ನಂಬು, ಹುತ್ತದಲ್ಲಿ ಹರಿಯುವ ಹಾವನ್ನು ನಂಬು, ಆದರೆ ನಿನ್ನ ಜೊತೆಯಲ್ಲೇ ವಾಸಿಸುವ ಮನುಷ್ಯನನ್ನು ಮಾತ್ರ ನಂಬಬೇಡ. ಅವನು ಅದೆಲ್ಲಕ್ಕಿಂತಲೂ 'ಭಯಂಕರನಾದ ಪ್ರಾಣಿ' ಎಂದು ಅರ್ಧಮರ್ಧ ಪ್ರಜ್ಞಾವಸ್ಥೆಯಲ್ಲಿದ್ದ ಹೆಂಡತಿ ಮಕ್ಕಳಿಗೆ ಚೀರಿ ಚೀರಿ ಹೇಳಿ ಸತ್ತುಹೋದರು.

'ಹತ್ತಾರು ಜನರ ಅಮಾನುಷ ಅತ್ಯಾಚಾರಕ್ಕೊಳಗಾಗಿ ನೆತ್ತರು ಗರೆಯುತ್ತಾ ಸತ್ತಂತೆ ಉರುಳಿದ ರಿಟಾಗೆ ಎಚ್ಚರವಾದಾಗ, ಅವಳ ಅಂದಿನ ವರೆಗಿನ ಬದುಕೆಲ್ಲವೂ ಭಸ್ಮವಾಗಿತ್ತು. ಅವಳ ತಂದೆ, ತಾಯಿ, ಅಣ್ಣ, ತಮ್ಮ, ಮನೆಮಾರು ಎಲ್ಲವೂ ಬರಿ ಬೂದಿಯ ರಾಸಿಗಳಾಗಿದ್ದವು. ಹಾಗೇ ತೆವಳಿಕೊಂಡು, ಯಾರ ಕಣ್ಣಿಗೂ ಬೀಳದಂತೆ, ಮೂರು ದಿನ ಮನೆಯ ಮುಂದಿನ ಚರಂಡಿಯಲ್ಲಿ ಬಚ್ಚಿಟ್ಟುಕೊಂಡಿದ್ದು, ಹೇಗೆ ಹೇಗೋ ತಪ್ಪಿಸಿಕೊಂಡು—ಅದೆಲ್ಲವೂ ಒಂದು ದೊಡ್ಡ ಕಥೆಯೇ—ಕಡೆಗೆ ಈ ಬೊಂಬಾಯಿಗೆ ಬಂದು ಬಿದ್ದಳು—ರಿಟಾ, ಇಲ್ಲಾದರೂ ಉಸಿರಾಡಲು ಅವಕಾಶ ದೊರೆತೀತೇನೋ ಎಂದು.'

—ಕುಸುಮಾ ನಿಟ್ಟುಸಿರಿಟ್ಟು ಕಥೆ ಮುಗಿಸಿ ಹೇಳಿದಳು.

'ಇದು ರಿಟಾನ ಬಾಳಿನ ದುರಂತದ ಒಳ ಕಥೆ'

ಆಕೆ ಯಾವುದನ್ನೂ ವಿವರಿಸಿ ಹೇಳದಿದ್ದರೂ ಹೇಳಿದುದಷ್ಟೇ ನನ್ನ ಮೈಯಲ್ಲಿ ಕಂಪನವನ್ನು ಮೂಡಿಸಿತ್ತು. ಎಂಥ ಘೋರ ದುರಂತವೇ ಆಗಿರಲಿ, ಅದನ್ನು ಪತ್ರಿಕೆಗಳಲ್ಲಿ ಓದುವುದಕ್ಕೂ, ಹತ್ತಿರವಿದ್ದು ಅನುಭವಿಸಿ ದವರ ಬಾಯಿಂದ ಕೇಳುವುದಕ್ಕೂ ಎಷ್ಟು ಅಂತರ ಎಂದು ನನಗೆ ಮನ ವರಿಕೆಯಾದುದು ಅಂದೇ. ಎಷ್ಟು ಬಣ್ಣಿಸಿ, ಬಣ್ಣಿಸಿ ಹೇಳಿದರೂ ಬರವಣಿಗೆ ಬರವಣಿಗೆಯೇ, ಅನುಭವ ಮಾತಿನ ಕಾವೇ ಬೇರೆ

ಕುಸುಮಾ ರಿಟಾ ಬಾಳಿನ ದುರಂತವನ್ನು ಕಾವ್ಯದ ಭಾಷೆಯಲ್ಲಿ ಬಣ್ಣಕೊಟ್ಟು ವರ್ಣಿಸಿರಲಿಲ್ಲ ಆಕೆ ಕಥೆ ಹೇಳಿದುದರಲ್ಲಿ ಉಪಮಾನ ಉಪಮೇಯಗಳ ಬೆರಗಿರಲಿಲ್ಲ, ಅಲಂಕಾರಗಳ ಮಿರುಗಿರಲಿಲ್ಲ; ಅಲ್ಪವನ್ನು ಕಸೂತಿಗೆಲಸದ ನಿಧಾನನಡೆಯೂ ಇರಲಿಲ್ಲ. ಅದಕ್ಕೆ ಪ್ರತಿಯಾಗಿ, ಮಾನವ ಜೀವನದ ಮಹಾ ಘೋರ ದುರಂತವೊಂದನ್ನು ಇದ್ದಷ್ಟನ್ನೂ ಹೇಳಲು ನಾಚಿ, ನಡೆದಷ್ಟನ್ನು ವಿವರಿಸಲು ಅಂಜಿ ಆದಷ್ಟು ಅವಸರವಾಗಿ, ಆದಷ್ಟು ನೀರಸವಾಗಿ ಹೇಳಲು ಯತ್ನಿಸಿದ್ದಳು. ಆದರೂ ಅದನ್ನು ಕೇಳಿ ನನ್ನ ಮೇಲಾದ ಪರಿಣಾಮ ಇಷ್ಟೆಂದು ಹೇಳಲಾರೆ. ಆಕೆ ನಾಲ್ಕೇ ಮಾತಿನಲ್ಲಿ ಮುಗಿಸಿದ ಚೋಯಿತ್‌ರಾಂರ ಕೊನೆಯ ದಿನದ ಕರಾಳದೃಶ್ಯ ನನ್ನ ಕಣ್ಣೆದುರು ಎಲ್ಲ ವಿವರಗಳನ್ನೂ ತಾಳಿ ಜೀವಂತವಾಗಿ ನಿಂತಿತ್ತು.

ಕರಾಚಿಯ ಯಾವುದೋ ಬೀದಿಯಲ್ಲಿನ ಭವ್ಯವಾದ, ಆದರ ಬಣ್ಣ ಬಣ್ಣದ ಜ್ವಾಲೆಗಳನ್ನುಗುಳುತ್ತಾ, ಕರಿಹೊಗೆಯನ್ನು ಕಕ್ಕುತ್ತಾ ವಿಕಾರ ವಾಗಿ ನಿಂತ ಮನೆ, ಜಗಲಿಯ ಮೇಲೆ ಕತ್ತರಿಸಿ ಚೆಲ್ಲಿದ, ಇನ್ನೂ ಬಿಸಿರಕ್ತ ಕಾರುತ್ತಾ, ಹೊಯ್ದಾಡುತ್ತಿರುವ ಹೆಣಗಳು, ಅವುಗಳ ಇದಿರು ಕಂಭಕ್ಕೆ ಬಂಧಿತರಾಗಿ, ಅಸಹಾಯರಾಗಿ, ಎಲ್ಲವನ್ನು—ಕೊನೆಗೆ ದೈವ—ಮಾನವ ಇಬ್ಬರಲ್ಲಿಯ ನಂಬಿಕೆಯನ್ನು ಕಳೆದುಕೊಂಡು ನಿಂತ ವೃದ್ಧ ಚೋಯಿತ್‌ರಾಂ, ಅವರ ಕಣ್ಣೆದುರಿನಲ್ಲೇ ಅವರ ಮಡದಿ ಮಗಳ ಮೇಲೆ, ಅವರು ಸ್ವಂತ ಮಗನೆಂದು ನಂಬಿದವನೇ ನಡೆಸಿದ ಅತ್ಯಾಚಾರ, ಕಾಡಾನೆಗಳ ತುಳಿತಕ್ಕೆ ಸಿಕ್ಕ ಹೂಬಳ್ಳಿಗಳಂತೆ ನೆಲಕ್ಕೆರಗಿದ ಆ ಇಬ್ಬರು ಹೆಂಗಸರು—

ಒಂದೊಂದು ವಿವರವೂ ನನ್ನ ಕಣ್ಣೆದಿರು ಚಿತ್ರವಾಗಿ ಮೂಡಿ ನನ್ನ ಪರಿಸ್ಥಿತಿ 'ಪವಾಡದರ್ಶನದಂತೆ' ಉಂಟಾಗಿತ್ತು

ನನ್ನ ಕಿವಿಗಳಲ್ಲಿ ಚೋಯಿತ್‌ರಾಂರ ಕೊನೆಯ ಕೂಗು.

'ಕಾಡಿನಲ್ಲಿ ಅಲೆಯುವ ಹುಲಿಯನ್ನು ನಂಬು; ಹುತ್ತದಲ್ಲಿ ಹರಿಯುವ ಹಾವನ್ನು ನಂಬು; ಆದರೆ ನಿನ್ನ ಜೊತೆಯಲ್ಲೇ ವಾಸಿಸುವ ಮನುಷ್ಯನನ್ನು ಮಾತ್ರ ನಂಬಬೇಡ ಅವನು ಅದೆಲ್ಲಕ್ಕಿಂತಲೂ ಭಯಂಕರನಾದ ಪ್ರಾಣಿ' —ಎಂಭ ಮಾತುಗಳು ಮತ್ತೆ ಮತ್ತೆ ಮಾರ್ಮೊಳಗಿ ನನ್ನ ನರನಾಡಿಗಳಲ್ಲಿ ಹರಿವ ರಕ್ತವನ್ನು ಹೆಪ್ಪುಗಟ್ಟಿಸಿತ್ತು.

# ಚಂದೂ ಕಮಲಾನಿ

೧

'ಅಬ್ಬಾ! ಎಂಥ ಘೋರವಾದ, ಆದರೆ ಎಷ್ಟು ವಾಸ್ತವಿಕವಾದ ಸಂದೇಶ ಅದು!'

—ಜೋಯಿತ್‌ರಾಂ ತಮ್ಮ ಮಗಳಿಗೆ ಹೇಳಿದ ಕೊನೆಯ ಸಂದೇಶವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಹೇಳಿದೆ ನಾನು.

ನಾನು ನನ್ನ ಮಾತಿನ ಹಿನ್ನಲೆ ಏನೆಂಬುದನ್ನೂ ವಿವರಿಸದೆಯೇ, ಉದ್ವೇಗಪ್ರಕೋಪದಿಂದಾಡಿದ ಮಾತುಗಳ ಗುರಿಯಾವುದೆಂಬುದು ಡಾ. ಘುರಪುರೆಯವರಿಗೆ ಅರ್ಥವಾಗಿ—

'ನಿಜ, ನಿಜ, ಮಹಾ ಘೋರಸಂದೇಶ. ಆದರೆ ಇದು ಕೇವಲ ಒಬ್ಬ ರಿಟಾ ಕೇಳಿ, ತನ್ನೊಂದಿಗೆ ತಂದ ಸಂದೇಶವಲ್ಲ ರಾವ್—ಪಾಕೀಸ್ತಾನ ಭಾಗದಿಂದ ಹಿಂದೂಸ್ಥಾನಕ್ಕೆ ನಿರಾಶ್ರಿತರಾಗಿ ಓಡಿ ಬಂದ ಜನತೆಯಲ್ಲಿ ನೂರಕ್ಕೆ ತೊಂಭತ್ತು ಪಾಲು ಜನ ಹೊತ್ತು ತಂದ ಸಂದೇಶ ಅದೇ. ಆ ಸಂದೇಶವೇ ಇಂದು ನಮ್ಮ ಕಣ್ಣ ಮುಂದಿರುವ ಸಮಸ್ಯೆಯ ಒಂದು ಮುಖ. ಬೊಂಬಾಯಿನ ಬೀದಿಗಳಲ್ಲಿ ಬರಿಗಣ್ಣು ಅರಳಿಸುತ್ತಾ ಓಡಾಡುವ ಒಬ್ಬೊಬ್ಬ ನಿರಾಶ್ರಿತನನ್ನು ಮಾತನಾಡಿಸಿದರೂ ಇಂಥದೇ ಒಂದು ದಾರುಣ ಕಥೆ ಕೇಳಿಬರುತ್ತದೆ ರಾವ್. ಒಬ್ಬೊಬ್ಬರ ಬಾಳಿನದೂ ಇಂಥ ದುರಂತವೇ.'

—ಎಂದರು.

'ಇರಬಹುದು. ಆದರೆ ರಿಟಾಪಾಧ್ಯಾನಿಯ ಬಾಳದುರಂತಕ್ಕಿಂತ ಘೋರವಸ್ತುವನ್ನು ನಾನು ಕಾವ್ಯದಲ್ಲಿಯೂ ಓದಿಲ್ಲ. ಅದು ದುರಂತದ ಪರಮಾವಧಿ'

—ಎಂದಳು ಕುಸುಮಾ, ತಾನು ಹೇಳಿದ ಕಥೆಯ ದುಃಖದಲ್ಲೇ ಕಾವೇರಿ.

'ಹಾಗೆನ್ನುತ್ತೀಯಾ?'

—ಏನೋ ಯೋಚಿಸುತ್ತಾ ಹೇಳಿದರು ಡಾಕ್ಟರ್ ಘರಪುರೆ, ಕುಸುಮಳ ಮಾತನ್ನು ನಂಬದಂತೆ—

'ಅಂದರೆ–ಈ ದುರಂತಕ್ಕಿಂತ ಘೋರತರವಾದ ದುರಂತವೂ ಇರಬಹುದೇ ಡಾಕ್ಟರ್ ?'

—ಕುಸುಮಾ ಮರುಪ್ರಶ್ನೆ ಮಾಡಿದಳು.

'ಇದರ–ಸಮ ಎನ್ನುವ ಮಾತು ಸಾಪೇಕ್ಷವಾದದ್ದು. ನಿನ್ನ ದೃಷ್ಟಿಯಲ್ಲದು ಬಹು ಘೋರ ಎನಿಸಿದೆ. ಎಂತಲೇ ಇದಕ್ಕಿಂತಲೂ ಘೋರವಾದುದು ಇನ್ನಿಲ್ಲ ಎನ್ನುತ್ತೀಯ. ಆದರೆ ನಾನೂ ಒಬ್ಬ ಸಿಂಧಿಯ ಬಾಲಿನ ದುರಂತ ಕಥೆಯನ್ನು ಕೇಳಿದೇನೆ ರಾವ್. ಆದನ್ನು ಕೇಳಿದಾಗ ನನಗನಿಸಿತು–ನೂರು ಸಾವಿಗಿಂತಲೂ ಘೋರವಾದ ದುರಂತ ಅದು ಎಂತ ಆ ದಿನ, ಕಥೆ ಕೇಳಿದಾಗ ನನ್ನ ಕಣ್ಣಲ್ಲಿಯೂ ನೀರಾಡಿತು.'

—ಡಾಕ್ಟರ್ ಹೇಳಿದರು.

'ನಿಮ್ಮ ಕಣ್ಣಲ್ಲಿಯೂ ನೀರಾಡಿತೆ ?'

—ಆದುವರೆಗೂ ಸುಮ್ಮನಿದ್ದ ವಾಸಂತಿಬಹೆನ್ ಕೇಳಿದಳು

'ಏಕೆ ? ಆಶ್ಚರ್ಯವೇ ? ನನಗೆ ಕಂಬನಿಗರೆವ ಶಕ್ತಿಯಿಲ್ಲವೆಂದೇ ತಿಳಿದುಕೊಂಡಿದೀಯಾ ? ನಿಜ–ನೀವು ಕಂಬನಿಗರೆಯುವುದಕ್ಕೆ ನಾನು ಕಂಬನಿಗರೆಯುದಿರಬಹುದು. ನಾನು ಕಂಬನಿಗರೆಯುವ ವಿಷಯ ನಿನಗೆ ಹಾಸ್ಯಾಸ್ಪದವೆಂದೇ ತೋರಬಹುದು ವಾಸಂತೀ'

'ಅದೇನೋ ನಿಜವೇ. ಇರಲಿ–ನೀವು ಕಂಬನಿಗರೆಯುವಂತೆ ಮಾಡಿದ ರೋಗಿಯಾರು ಡಾಕ್ಟರ್ ?'

—ವಾಸಂತೀಬಹೆನ್ ಕೇಳಿದಳು

'ಇದು ರೋಗಿ ಹೇಳಿದ ಕಥೆಯಲ್ಲ ವಾಸಂತೀ, ಆಕಸ್ಮಿಕವಾಗಿ ಪರಿಚಯವಾದ ವ್ಯಕ್ತಿಯೊಬ್ಬ ಹೇಳಿದ ವಿಚಾರ. ಆ ವಿಷಯ ಗೊತ್ತಾದ ಆಕಸ್ಮಿಕತೆಯೇ ನನ್ನ ಪಾಲಿಗೆ ಆ ಕಥೆಗೆ ಹೆಚ್ಚಿನ ನಾಟಕೀಯ ಮೌಲ್ಯವನ್ನು ತಂದುಕೊಟ್ಟಿತು. ರಿಟಾಳ ಕಥೆ ಜರ್ಮನ್ ನಾಟಕಕಾರ ಷಿಲ್ಲರ್‌ನ ನಾಟಕಗಳಲ್ಲಿ ಬರುವಂಥ ರೀತಿಯದು. ಅದರಲ್ಲಿ ಕೊಲೆ, ರಕ್ತ, ಕಣ್ಣೀರು ಎಲ್ಲವೂ ಅಧಿಕ. ಆದರೆ ನಾನು ಕೇಳಿದ ಕಮಲಾನಿಯ ಕಥೆ ರೇಸೀನ್‌ನ

ದುರಂತ ನಾಟಕಗಳ ಬಗೆಯದು. ಅದರಲ್ಲಿ ಭಾವೋದ್ರೇಕಗೊಳಿಸುವ ವಿಷಯ ಬಹು ಸೂಕ್ಷ್ಮವಾದದ್ದು. ನೀವೂ ಕಲಾವಿದರು ರಾವ್. ನಿಮಗೆ ಈ ದುರಂತ ಎಷ್ಟು ಗಾಢವಾದುದೆಂಬುದು ಅರಿವಾಗುತ್ತದೆ.'

—ಎಂದು ಹೇಳಿ ಡಾಕ್ಟರ್ ತಾವು ಹೇಳಲಿದ್ದ ಕಥೆಯನ್ನು ಆರಂಭಿಸಿದರು

' ಕೆಲೀನಾ (ಬೊಂಬಾಯಿನ ವಿಸ್ತರಣಗಳಲ್ಲೊಂದು)ದಲ್ಲಿ ಮೊಹೆಂದಲೆ ಎಂಬ ತನ್ನ ಮಿತ್ರರೊಬ್ಬರಿದ್ದಾರೆ. ಒಂದು ದಿನ ರಾತ್ರಿ ಅವರು ನನ್ನನ್ನು ತಮ್ಮ ಮನೆಗೆ ಊಟಕ್ಕೆ ಆಹ್ವಾನಿಸಿದರು. ಆ ದಿನ ರಾತ್ರಿ ನನ್ನ ಹಾಗೇ ಇನ್ನೂ ಒಂದಿಬ್ಬರು ಮಿತ್ರರು ಊಟಕ್ಕೆ ಬಂದಿದ್ದರು. ನನ್ನ ಬಳಿ ಬೇಕೆನಿಸಿದಾಗ ಹಿಂದಿರುಗಲು ಕಾರು ಇದ್ದುದರಿಂದ ಎಷ್ಟು ಹೊತ್ತಿಗೇ ಹಿಂದಿರುಗಬೇಕೆಂಬ ನಿರ್ಬಂಧವಿರಲಿಲ್ಲ. ಎಂತಲೇ ಎಲ್ಲರೂ ಊಟ ಮುಗಿಸಿ ಹರಟೆಗೆ ಕುಳಿತೆವು. ಕಾಲದ ನಿರ್ಬಂಧವಿರವಿಲ್ಲವಾದುದರಿಂದ ಹರಟೆಗೆ ಕುಳಿತ ನಮಗಾರಿಗೂ ಹೊತ್ತು ಹೇಗೆ ಓಡಿತು ಎಂಬುದರ ಅರಿವೇ ಇರಲಿಲ್ಲ ಕೊನೆಗೆ ಅಲ್ಲಿ ಕಲೆತಿದ್ದ ನಮ್ಮೆಲ್ಲರ ಬಳಿಯೂ ಇದ್ದ ಸಿಗರೇಟಿನ ಸಂಗ್ರಹ ಮುಗಿದಾಗಲೇ ನಾವು ಹೊತ್ತೆಷ್ಟಾಯಿತೆಂದು ನೋಡಿಕೊಂಡಿದ್ದು. ಆ ವೇಳೆಗೆ ರಾತ್ರಿ ಎರಡು ಗಂಟೆಯ ವೇಳೆಯಾಗಿತ್ತು. ಅಷ್ಟು ಹೊತ್ತಿನಲ್ಲಿ ನಮಗಾಗಿ ಬಾಗಿಲು ತೆಗೆದಿದ್ದು ಸಿಗರೇಟು ಒದಗಿಸುವ ಅಂಗಡಿಕಾರನಾರು ಎಂದು ಯೋಚಿಸುತ್ತಿರುವಾಗ ನನ್ನ ಮಿತ್ರರು 'ಹತ್ತಿರದಲ್ಲೇ ಹೊಸದಾಗಿ ಒಂದು ಸಿಂಧಿ ಹೋಟೆಲ್ ಆರಂಭವಾಗಿದೆ. ಅದು ಬಾಗಿಲು ತೆರೆದಿದ್ದರೂ ಇರಬಹುದು. ನೋಡಿಕೊಂಡು ಬರೋಣ–ಬನ್ನಿ. ನಿಮ್ಮ ಅದೃಷ್ಟ ಚೆನ್ನಾಗಿದ್ದರೆ ಸಿಗರೇಟು ಸಿಕ್ಕರೂ ಸಿಕ್ಕಬಹುದು' ಎಂದರು. ಅವರು ಹೋಟಲ್ ತೆರೆದಿರಬಹುದು ಎಂದದ್ದನ್ನು ಕೇಳಿ ನಮಗೆ ಸಿಗರೇಟಿನ ಬಯಕೆಯೊಂದಿಗೆ ಬಿಸಿ ಟೀಯ ಬಯಕೆಯೂ ಅಂಕುರಿಸಿತು. ಹರಟೆ ಹೊಡೆದು ದಣಿದ ಬಾಯನ್ನು ಟೀಯಿಂದ ತಣಿಸಿಕೊಂಡು, ಸಿಗರೇಟು ತೆಗೆದುಕೊಂಡು ಬರುವುದು ಎಂದುಕೊಂಡು, ಎಲ್ಲರೂ ಕಾರಿನಲ್ಲಿ ಹೋಟಲ ಕಡೆ ಹೊರಟೆವು.

' ಆ ಹೋಟಲೂ ಎಲ್ಲಾ ಇರಾನಿ ಹೋಟಲುಗಳಂತೆಯೇ ಇದ್ದರೂ

ಆದಕ್ಕೆ ಜೋಡಿಸಿದ 'ಫರ್ನಿಚರ್' ಫೋಟೋಗಳು, ಗೋಡೆಯ ಬಣ್ಣ–ಹೋಟಲು ಹೊಸದಾಗಿ ಆರಂಭವಾದುದೆಂಬ ಮಾತಿಗೆ ಸಾಕ್ಷಿಯಾಗಿತ್ತು. ಹಾಗೇ ಹೋಟಲಿನಲ್ಲಿ ಯಾರೂ ಗಿರಾಕಿಗಳಿಲ್ಲದೆ, ಅಲ್ಲಿದ್ದ ಮೇಜು ಕುರ್ಚಿಗಳನ್ನು ಒರಸುತ್ತಿದ್ದ ಆಳು ಹುಡುಗ ಹೋಟಲು ಮುಚ್ಚುವ ಹೊತ್ತಾಯಿತೆಂಬುದಕ್ಕೂ ಸಾಕ್ಷಿಯಾಗಿದ್ದ, ಹೋಟಲು ಬಾಗಿಲು ತೆಗೆದಿದ್ದುದರಿಂದ ಸಿಗರೇಟು ಸಿಗುವುದೆಂಬ ನಂಬಿಕೆಯಾಗಿ, ಟೀ ಸಿಗುವುದು ಅನುಮಾನವಾದರೂ 'ಎದ್ದುಹೋಗುವ ಮಾತು ಬಿದ್ದುಹೋಗಲಿ' ಎಂದುಕೊಂಡು ನಾನೇ ಕಾರಿನಿಂದಿಳಿದು ಹೋಗಿ, 'ಕ್ಯಾಷ್ ಕೌಂಟರ್'ನ ಬಳಿ ಏನೋ ಲೆಕ್ಕ ಬರೆಯುತ್ತಿದ್ದ ಸಿಂಧಿಯುವಕನಿಗೆ 'ಟೀ ಸಿಗುವುದೇ?' ಎಂದು ಕೇಳಿದೆ. ಆದಕ್ಕೆ ಆತ ಉತ್ತರ ಕೊಟ್ಟ ರೀತಿ ಮಾಮೂಲ ಹೋಟಲ್ ಮಾಲಿಕರಂತಿರಲಿಲ್ಲ, 'ಇಲ್ಲ ಎನ್ನುವ ಮಾತನ್ನು ಬಹು ನಯವಾಗಿ, ತನ್ನಿಂದ ಏನೋ ತಪ್ಪಾಗಿದೆ ಮನ್ನಿಸಬೇಕು' ಎಂದು ಕೇಳುವ ರೀತಿಯಲ್ಲಿ ಹೇಳಿದ. ಆ ಮಾತಿನಿಂದಲೇ ಆತ ಹೆಚ್ಚು ವಿದ್ಯಾವಂತನಿರಬೇಕು ಎನಿಸಿತು ನನಗೆ. 'ಹೋಗಲಿ ಹಾಗಾದರೆ ಸಿಗರೇಟ್ ಆದ್ರೂ ಕೊಡಿ' ಎಂದೆ, ಕೌಂಟರಿನ ಮೇಲೆ ಹಣಇಟ್ಟು. ಆತ ಆಳನ್ನು ಕರೆದು ಷೋಕೇಸ್‌ನಲ್ಲಿದ್ದ ಸಿಗರೇಟನ್ನು ತೆಗೆದುಕೊಡಲು ಹೇಳಿದ.

'ಆಳು ಸಿಗರೇಟು ತೆಗೆದು ಕೊಡುವವರೆಗೂ ನನಗೆ ಮಾಡಲು ಬೇರೇನೂ ಕೆಲಸವಿಲ್ಲದ್ದರಿಂದ ಹೋಟಲಿನ ಸುತ್ತಲೂ ಕಣ್ಣು ಆಡಿಸಿದೆ. ಹಾಗೆ ನೋಡಿದಾಗ ಹೋಟಲಿನ ಒಂದು ಪಾರ್ಶ್ವವಷ್ಟನ್ನೂ ಆಕ್ರಮಿಸಿದ್ದ ಬಹುದೊಡ್ಡ ಪಿಯಾನೋವನ್ನು ಕಂಡು ಅತೀವ ಆಶ್ಚರ್ಯವಾಯಿತು. ಏನಿಲ್ಲವೆಂದರೂ ಅದರ ಬೆಲೆ ಎರಡು ಮೂರು ಸಾವಿರ ರೂಪಾಯಿಗಳಿರಬೇಕು. ಬೊಂಬಾಯಿನ ಯಾವುದೋ ಮೂಲೆಯಲ್ಲಿನ ಈ ಸಣ್ಣ ಹೋಟಲಿನಲ್ಲಿ ಈ ದೊಡ್ಡ ಪಿಯಾನೊಗೇನು ಕೆಲಸ? ತಾಜ್, ಗ್ರೀನ್ಸ್, ಅಂಬಾಸಡರ್ಸ್‌ನಂಥ ದೊಡ್ಡ ಹೋಟಲುಗಳಲ್ಲಿಯಾದರೆ, ಯಾರದೋ ಪಿಯಾನೋವಾದನ ಪ್ರದರ್ಶನಕ್ಕಾಗಿ ತರಿಸಿರಬಹುದು ಎಂದುಕೊಳ್ಳಬಹುದು. ಆದರೆ ಇಂಥ ಚಿಲ್ಲರೆ ಹೋಟಲಿನಲ್ಲಿ ಅಂಥ ಪ್ರದರ್ಶನ ನಡೆಯುವುದು ಸಾಧ್ಯವೇ? ಇರಲಾರದು.

ಹಾಗಲ್ಲ ಎಂದರೆ ಈ ಹೋಟಲು ಮಾಲಿಕ, ಒಳ್ಳೇ ಸಂಗೀತಪ್ರೇಮಿಯಾಗಿದ್ದು, ತನಗೆ ಬೇಸರವಾದಾಗ ನುಡಿಸಲೆಂದು ಅದನ್ನಿಲ್ಲಿ ತಂದಿಟ್ಟುಕೊಂಡಿದ್ದಾನೆಯೇ? ಹೋಟಲ್ ಮಾಲಿಕ ರಸಿಕನೇ ಇರಬಹುದು. ಆದರೆ ಅವನು ನಿಜವಾದ ರಸಿಕನಾಗಿದ್ದರೆ, ಪಿಯಾನೋವನ್ನು ತನ್ನ ಮನೆಯಲ್ಲಿಟ್ಟುಕೊಳ್ಳದೆ, ಅಗ್ಗದ ಮಾರಾಟದ ಸರಕುಗಳೊಂದಿಗೆ ಇದನ್ನು ಅಂಗಡಿಯಲ್ಲಿ ಪ್ರದರ್ಶಿಸುತ್ತಿದ್ದನೇ? ನಿಜವಾದ ಸಂಗೀತಪ್ರಿಯನು ತನ್ನ ಪ್ರೀತಿಯ ವಾದ್ಯಗಳನ್ನು ಎಂದೂ ಹಾಗೆ ಪ್ರದರ್ಶಿಸಲಾರನು

ಅದೂ ಅಲ್ಲ ಎಂದರೆ ಹೋಟಲು ಮಾಲಿಕ ಉತ್ತಮ ಸ್ಥಿತಿಯಲ್ಲಿದ್ದಾಗ ಅದನ್ನು ಕೊಂಡಿದ್ದು, ಈಗ ಕಷ್ಟಸ್ಥಿತಿಗೆ ಸಿಕ್ಕು ಮಾರಾಟ ಮಾಡುವ ಉದ್ದೇಶದಿಂದ ಇಲ್ಲಿ ತಂದಿಟ್ಟಿರಬಹುದೇ? ಆದರೆ ಮಾಲಿಕನಿಗೆ ಅದನ್ನು ಮಾರುವ ಉದ್ದೇಶವಿದ್ದರೆ, ಯಾವುದಾದರೂ ಹೆಸರಾದ 'ಆಕ್ಷನಿಯರ್ಸ್'ಗೆ ಅದರ ಮಾರಾಟವನ್ನು ವಹಿಸದೆ, ಎರಡಾಣೆ ಚಾ ಕುಡಿದು ಹೋಗಲು ಬರುವವರ ಮುಂದೆ ಅದನ್ನಿಟ್ಟರೆ, ಅದು ಎಂದಾದರೂ ಮಾರಾಟವಾಗುವ ಸಂಭವ ಉಂಟೆ? ಅಷ್ಟನ್ನೂ ತಿಳಿಯದ ಎಗ್ಗನೇ ಈ ಹೋಟಲು ಮಾಲಿಕ? ಆತನ ಮಾತಿನ ರೀತಿಯನ್ನು ಕೇಳಿ ನನಗೆ ಆತ ಸಾಕಷ್ಟು ತಿಳಿದವನು ಎಂತಲೇ ಅನ್ನಿಸಿತ್ತು, ಆತನ ಮುಖಲಕ್ಷಣವೂ ಆ ಭಾವನೆಗೇ ಪೋಷಕವಾಗಿತ್ತು

'ಹಾಗಿರುವಾಗ ಈ ಪಿಯಾನೊಕ್ಕೆ ಇಲ್ಲೇನು ಕೆಲಸ?'

'ಹೀಗೆ ಆ ಪಿಯಾನೋವನ್ನು ಆಕಸ್ಮಿಕವಾಗಿ ಅಲ್ಲಿ ಕಂಡು ತನ್ನ ಮನಸ್ಸಿನಲ್ಲಿ ಹತ್ತಾರು ಬಗೆಯ ಭಾವನೆಗಳು ಮೂಡಿ, ಆ ಕುತೂಹಲವನ್ನು ಪ್ರದರ್ಶಿಸುವುದು ಸಭ್ಯತೆಯಿಲ್ಲವೆಂದರಿತೂ, ಅದನ್ನು ಅಣಗಿಸಲಾರದೆ—

'ಆ ಪಿಯಾನೊ ನಿಮ್ಮದೇ ?'

—ಎಂದು ಕೇಳಿದೆ.

'ಏನಂದಿರಿ?'

—ಹೋಟಲು ಮಾಲಿಕ 'ಲೆಡ್ಜರ್' ನಿಂದ ಮುಖ ಎತ್ತಿ ಪ್ರಶ್ನೆ ಮಾಡಿದ.

'ಆ ಪಿಯಾನೊ ನಿಮ್ಮದೆ ?'

—ಎಂದು ನಾನು ಮತ್ತೊಮ್ಮೆ ಪ್ರಶ್ನೆ ಮಾಡಿದೆ.

'ಹೌದು, ಏಕೆ?'

'ಏಕೂ ಇಲ್ಲ. ನನ್ನ ಕುತೂಹಲವನ್ನು ಕ್ಷಮಿಸಿ. ಅದನ್ನಿಲ್ಲಿ ಮಾರಾಟಕ್ಕಿಟ್ಟಿದ್ದೀರಾ?'

—ನಾನು ಆದಷ್ಟು ನಯವಾಗಿ ಪ್ರಶ್ನಿಸಿದೆ.

'ನಾನು ಎಷ್ಟೇ ನವಿರಾಗಿ ಪ್ರಶ್ನಿಸಿದರೂ ಆತನಿಗೇನೊ ನನ್ನ ಪ್ರಶ್ನೆಯಿಂದ ಅಪಾರ ಯಾತನೆಯಾದಂತೆಯೇ ತೋರಿತು ಆತನಮುಖ ಭಾವದಿಂದ, ಹಾಗೇ ಅಪರಿಚಯಸ್ಥನಾದ ನಾನು, ಅಗತ್ಯವಿಲ್ಲದ ಪ್ರಶ್ನೆಯನ್ನು ಕೇಳಿದ್ದನ್ನು ಕಂಡು ಕೊಂಚ ಸಿಟ್ಟೂ ಬಂದಿರಬೇಕು—ಎಂತಲೇ ಆ ಭಾವನೆ ತುಂಬಿ ತುಳುಕುವ ಧ್ವನಿಯಲ್ಲೇ ಹೇಳಿದ—

'ಬಡವನ ಮನೆಯಲ್ಲಿ ರೂಪವತಿಯಾದ ಹೆಣ್ಣಿದ್ದರೆ, ಆಕೆ ಮಾರಾಟಕ್ಕೇ ಇರುವಳೆಂದು ನಂಬುವುದು ಸಭ್ಯತನವಲ್ಲ'

'ನನ್ನ ಪ್ರಶ್ನೆಗೆ ಆತ ಕೊಟ್ಟ ಕಟುವಾದ ಉತ್ತರವನ್ನು ಕೇಳಿ ನನಗೆ ಚಾವಟಿಯಿಂದ ಹೊಡೆದಂತಾಯಿತು. ಆದರೂ ನನ್ನ ಅಸಭ್ಯ ಕುತೂಹಲಕ್ಕದು ತಕ್ಕ ಪುರಸ್ಕಾರ ಎಂದುಕೊಂಡು ನೋವನ್ನು ಪ್ರಯತ್ನಪಟ್ಟು ನುಂಗಿ—

'ಮನ್ನಿಸಿ, ನನ್ನ ಪ್ರಶ್ನೆಯ ಉದ್ದೇಶ ನಿಮ್ಮನ್ನು ಅವಮಾನ ಪಡಿಸುವದಾಗಿರಲಿಲ್ಲ. ಇಂಥ ಹೋಟಲಿನಲ್ಲಿ ಅಷ್ಟು ದೊಡ್ಡ ಪಿಯಾನೊವನ್ನು ಕಂಡು ಆಶ್ಚರ್ಯವಾಯಿತು. ಆ ಆಶ್ಚರ್ಯದ ಭಾವನೆಗೆ ವಶನಾಗಿ ಕೇಳಿದೆ. ಅಷ್ಟೇ ವಿನಾ ಬೇರಾವ ದುರುದ್ದೇಶವೂ ನನಗಿರಲಿಲ್ಲ.

—ಎಂದೆ.

'ಉಕ್ಕಿಬಂದ ಮಾತನ್ನು ತಡೆಯದೆ ಆಡಿದ ಬಳಿಕ ಆತನಿಗೂ ತನ್ನ ಮಾತಿಗಾಗಿ ಪಶ್ಚಾತ್ತಾಪವಾಗಿದ್ದಂತಿತ್ತು. ಆದರೂ ತನ್ನ ಒರಟಾದ ಧ್ವನಿಯನ್ನು ತಗ್ಗಿಸಿ–ಹೇಳಿದ—

'ತಾವೂ ನನ್ನ ಉದ್ವೇಗದ ಮಾತನ್ನು ಮನ್ನಿಸಬೇಕು. ಆ ಪಿಯಾನೋದ ಹೆಸರೆತ್ತಿದಾಗ ನನಗೂ ತಲೆಕೆಟ್ಟ ಹಾಗಾಗುತ್ತದೆ'

'ಹೋಗಲಿ ಬಿಡಿ. ನೀವೇ ಪಿಯಾನೊ ಬಾರಿಸುತ್ತೀರಾ?'

‘ಊಹೂ. ನನಗದು ಬರದು. ಆ ಪಿಯಾನೊ ನನ್ನದಲ್ಲ, ನನ್ನ ತಮ್ಮನದು. ಆತ ಬಾರಿಸುತ್ತಾನೆ.’

‘ಹಾಗೆಂದರೆ–ಆತ ಅದನ್ನು ಇಲ್ಲಿಟ್ಟುಕೊಂಡಿದಾನೆಯೊ ?’

‘ಹೂ.’

‘ಆದರೆ ಇಂಥ ಕಡೆಯಲ್ಲಿಟ್ಟುಕೊಂಡಿದ್ದರೆ ನಿಮ್ಮ ತಮ್ಮಂದಿರ ಅಭ್ಯಾಸಕ್ಕೆ ತೊಂದರೆಯಾಗುವುದಿಲ್ಲವೆ ?’

‘ಆಗುತ್ತದೆ. ಆದರೇನು ಮಾಡುವುದು ? ಈ ಹೋಟಲಿನ ಸ್ಥಳಕ್ಕೇ ಐದುಸಾವಿರ ರೂಪಾಯಿ ಪಗಡಿ ಕೊಡಬೇಕಾಯಿತು ಹಾಗಾಗಿ ನಮಗೇ ವಾಸಕ್ಕೆ ಪ್ರತ್ಯೇಕವಾದ ಸ್ಥಳವಿಲ್ಲ. ಇನ್ನು ಈ ಪಿಯಾನೋಕ್ಕಾಗಿ ಬೇರೆಲ್ಲಿ ಸ್ಥಳ ಜೋಡಿಸಲಿ ಅದಕ್ಕೇ ವ್ಯಾಪಾರ ಕುದುರಿ, ನಮಗೆ ವಾಸಕ್ಕೆ ಒಂದು ಸರಿಯಾದ ಸ್ಥಳ ದೊರೆಯುವವರೆಗೂ, ಈ ಪಿಯಾನೊ ಕೊಳ್ಳುವುದು ಬೇಡ ಎಂದು ಹೇಳಿದೆ. ಆದರೆ ನನ್ನ ತಮ್ಮ ಕೇಳಲಿಲ್ಲ ಎಲ್ಲಕ್ಕಿಂತ ಮೊದಲು ಪಿಯಾನೊವೇ ಆಗಬೇಕು ಎಂದ. ಭಗವಂತ ನನ್ನ ಪಾಲಿಗೆ ಉಳಿಸಿರುವುದೆಲ್ಲಾ ಈ ತಮ್ಮ ಒಬ್ಬನನ್ನು. ಪಿಯಾನೊ ಇಲ್ಲದಿದ್ದಲ್ಲಿ ಅವನಿಗೆ ಎಲ್ಲಿ ಹುಚ್ಚು ಹಿಡಿಯುವುದೊ ಎಂಬ ಹಾಗಿತ್ತು. ಅದಕ್ಕೋಸ್ಕರ ಆದದ್ದಾಗಲಿ ಎಂದುಕೊಂಡು, ಈ ಪಿಯಾನೊ ತೆಗೆದುಕೊಟ್ಟೆ ’

‘ಪಿಯಾನೊ ಎಂದರೆ ನಿಮ್ಮ ತಮ್ಮಂದಿರಿಗೆ ಅಷ್ಟು ಪ್ರೀತಿಯೇ ?’

‘ಪ್ರೀತಿ–ಬರೀ ಪ್ರೀತಿಯೇ ಅಲ್ಲ ಅದೇ ಅವನ ಪಂಚಪ್ರಾಣ. ಅವನು ಇನ್ನು ಬದುಕಿದ್ದರೆ ಅದಕ್ಕೆ ಕಾರಣ ಈ ಪಿಯಾನೊ. ಅವನ ಜೀವನವೆಲ್ಲವೂ ಅದಕ್ಕೇ ವಿನಿಯೋಗವಾಗಿ ಹೋಗಿದೆ. ಅದನ್ನು ನುಡಿಸುವುದು ಒಂದನ್ನುಳಿದು ಅವನಿಗೆ ಬೇರಾವುದೂ ಬೇಡ.’

‘ಹಾಗೆಂದರೆ-ನಿಮ್ಮ ತಮ್ಮ ಪಿಯಾನೊ ಬಹಳ ಚೆನ್ನಾಗಿ ನುಡಿಸುತ್ತಿರಬೇಕು....’

‘ಹೇಗೆ ನುಡಿಸುತ್ತಾನೊ–ನನಗೆ ತಿಳಿಯದು. ನನಗೆ ಸಂಗೀತದ ಗಂಧವೇ ಇಲ್ಲ. ಅಲ್ಲದೆ ಪಾಶ್ಚಾತ್ಯ ಸಂಗೀತವೆಂದರೆ ಇದ್ದದ್ದೂ ಅರ್ಥವಾಗುವುದಿಲ್ಲ. ಆದರೂ ಅವನು ಬಾರಿಸುವುದನ್ನು ಕೇಳಿದಾಗ ಮಾತ್ರ–

ಏನೊ ಹುಚ್ಚು ಹಿಡಿದಂತಾಗುತ್ತದೆ. ನಿಮಗೆ ಪಾಶ್ಚಾತ್ಯ ಸಂಗೀತ ಅರ್ಥ ವಾಗುತ್ತದೆಯೇ ?'

'ಏನೊ ಅಷ್ಟಿಷ್ಟು '

'ನಿಮಗೆ ಅರ್ಥವಾಗುವುದಾದರೆ, ಕಾಲಾವಕಾಶವಿದ್ದರೆ, ಕೇಳಬೇ ಕೆಂಬ ಕುತೂಹಲವಿದ್ದರೆ ಕೇಳಬಹುದು '

'ಏನು ? ಈ ಹೊತ್ತಿನಲ್ಲಿ !'

—ಆತನ ಮಾತು ಕೇಳಿ ಚಕಿತನಾಗಿ ಪ್ರಶ್ನಿಸಿಮಾಡಿದೆ ನಾನು.

'ಮತ್ತೆ ? ಅವನಿಗೆ ಪಿಯಾನೊ ಬಾರಿಸಲು ಇರುವ ಹೊತ್ತು ಇದೊಂದೇ. ಬೆಳಗಿನ ಝಾವದಿಂದ ಇಷ್ಟು ಹೊತ್ತಿನವರೆಗೂ ಇಲ್ಲಿ ವ್ಯಾಪಾರದ ಗದ್ದಲ ಇದ್ದೇ ಇರುತ್ತದೆ ಈಗಲೇ ಯಾವ ಗದ್ದಲವೂ ಇಲ್ಲದೆ, ಅವನು ಬಾರಿಸಿಕೊಳ್ಳಬಹುದು. ನಾನು ನನ್ನ ಕೆಲಸ ಮುಗಿಯಿತು ಎಂದು ಹೇಳಿದ ಮೇಲೆ ಅವನು ತನ್ನ ವಾದನ ಆರಂಭಿಸುತ್ತಾನೆ ಕೇಳುವು ದಾದರೆ ಕೇಳಿ.'

—ಎಂದ.

ಆತ ಹೇಳಿದುದನ್ನೆಲ್ಲಾ ಕೇಳಿ ನನಗೂ ಏಕೊ ಆ ಪಿಯಾನೊ ವಾದನಗಾರನನ್ನು ನೋಡಬೇಕೆಂಬ, ವಾದನವನ್ನು ಕೇಳಬೇಕೆಂಬ ಕುತೂ ಹಲ ಮೂಡಿತ್ತು. ಕೈಗಡಿಯಾರದಲ್ಲಿ ಹೊತ್ತೆಷ್ಟೆಂದು ನೋಡಿಕೊಂಡೆ– ಎರಡೂವರೆ ಗಂಟೆಯಾಗಿತ್ತು. ಆದರೂ ಹತ್ತು ನಿಮಿಷ ಕೇಳುವುದು ಎಂದುಕೊಂಡು—

'ನಿಮಗೆ ತೊಂದರೆಯಾಗದಿದ್ದರೆ ನನಗೇನೂ ಅಭ್ಯಂತರವಿಲ್ಲ. ಹಾಗೆ ಕಾರ್‌ನಲ್ಲಿ ನನ್ನ ಗೆಳೆಯರು ಇಬ್ಬರು ಮೂವರು ಇದ್ದಾರೆ. ಅವರನ್ನು ಕರೆ ತರಬಹುದೇ ?'

—ಎಂದು ಕೇಳಿದೆ

'ನಮಗೇನು ತೊಂದರೆ. ಕೇಳುವ ಕಿವಿ ನೂರಾದರೂ ನುಡಿಸುವ ಕೈ ಒಂದೇ ಅಲ್ಲವೇ ? ಹಾಗಿರುವಾಗ ನಮಗೇನು ತೊಂದರೆ ಅಗತ್ಯವಾಗಿ ಕರೆತನ್ನಿ '

—ಎಂದ ಹೋಟಲ್ ಮಾಲಿಕ

‘ ಥ್ಯಾಂಕ್ಸ್ ’

—ಎಂದು ಹೇಳಿ, ನಾನು ನನ್ನ ಮಿತ್ರರನ್ನು ಕರೆತರಲು ಕಾರಿನ ಬಳಿ ಹೋದೆ.

‘ ನೀವೇನು ಸಿಗರೇಟು ತರಲು ಹೋಗಿದ್ದಿರೊ ಅಥವಾ ಹೋಟಲು ಖರೀದಿ ಮಾಡಲು ಹೋಗಿದ್ದಿರೊ ?’

—ನಾನು ಸಿಗರೇಟು ತರುವುದನ್ನೇ ಕಾದು ಕಾದು ಬೇಸರವಾದ ಮಿತ್ರರು ಕೇಳಿದರು.

‘ ಛೆ! ಛೆ! ಸಿಗರೇಟು ತರುವುದಕ್ಕೇ ಹೋದದ್ದು ಆದರೆ ನನ್ನ ತಡಕ್ಕೆ ಅದು ಕಾರಣವಲ್ಲ ’

—ಎಂದು ನಾನು ತಡವಾದುದಕ್ಕೆ ಕಾರಣ ವಿವರಿಸಿ—

‘ ಬನ್ನಿ, ಒಂದು ನಿಮಿಷ ಆತ ಹೇಗೆ ನುಡಿಸುತ್ತಾನೊ ಕೇಳೋಣ ’

—ಎಂದೆ.

‘ ಆದರ ಆ ವೇಳೆಯಲ್ಲಿ ಪಿಯಾನೊ ವಾದನವನ್ನು ಕೇಳುವ ನನ್ನ ಯೋಚನೆ, ನನ್ನ ಮಿತ್ರರಿಗೆ ಅಷ್ಟಾಗಿ ರುಚಿಸಲಿಲ್ಲ. ಮೆಹೆಂದಲೆಯವ ರಂತೂ ಆ ಯೋಚನೆಯನ್ನು ಬಹು ತೀವ್ರವಾಗಿ ವಿರೋಧಿಸಿದರು—

‘ ಅವನೆಲ್ಲೋ ತಲೆಕೆಟ್ಟವನಿರಬೇಕು. ಇಲ್ಲವಾದರ–ಇಷ್ಟು ಹೊತ್ತಿನಲ್ಲಿ ಹಾಯಾಗಿ ಮಲಗುವುದು ಬಿಟ್ಟು ಪಿಯಾನೊ ಏಕೆ ನುಡಿಸುತ್ತಿದ್ದ. ನೀನಂತೂ ಹೇಳಿ ಕೇಳಿ ಸೈಕಿಯಾಟ್ರಿಸ್ಟ್. ಒಬ್ಬ ರೋಗಿಯು ಲಾಭವಾಗ ಬಹುದು ಎಂದು ನಮ್ಮ ನಿದ್ರೆಯನ್ನು ಕದಿಯುವ ಹಂಚಿಕೆ ಹಾಕಿದ್ದೀರ. ಅವೆಲ್ಲಾ ಆಗುವುದಿಲ್ಲ. ’

—ಎಂದು ನನ್ನನ್ನೇ ಗೇಲಿ ಮಾಡಿದರು

‘ ಉಳಿದವರೂ ಅವನ ಮಾತಿಗೆ ತಲೆದೂಗುವ ಸ್ಥಿತಿಯಲ್ಲಿದ್ದರು. ಆದರೂ ನಾನೇ ಅವರನ್ನು ಒತ್ತಾಯ ಮಾಡಿ, ಕಡೆಗೆ ‘ಕಾರಿನ ಸ್ವಿಚ್‌ಕೀ’ ನನ್ನ ಹತ್ತಿರವೇ ಇದೆ ಇದಿರಾಡಿದರೆ, ಇಲ್ಲೇ ಛಳಿಯಲ್ಲಿ ಕೊಳೆಯ ಬೇಕಾದೀತು’ ಎಂದು ಬೆದರಿಕೆ ಹಾಕಿ, ‘ಪಿಯಾನೋ ವಾದನ ಕೇಳಲು ಹಿತವಾಗಿಲ್ಲದಿದ್ದಲ್ಲಿ, ಆತ ಆರಂಭಿಸುತ್ತಿದ್ದ ಹಾಗೇ ನಾವು ಕೇಳಿದ ಶಾಸ್ತ್ರ ಮುಗಿಸಿ ಹೋಗಬಹುದು’ ಎಂದು ಸಮಾಧಾನ ಹೇಳಿ, ಆಕಸ್ಮಿಕವಾಗಿ

ಅವರಿಗೆ ಕರ್ಣಾಪಾಯವೇನಾದರೂ ಆದರೆ ಅದಕ್ಕೆ ನಾನೇ ಹೊಣೆಗಾರ ನಾಗುವೆನೆಂದು ಮಾತುಕೊಟ್ಟು, ಅವರನ್ನೆಲ್ಲಾ ಕಾರಿನಿಂದ ಕೆಳಗಿಳಿಸಿ ಕೊಂಡು ಬಂದೆ.

## ೨

'ನಾನು ಅವರೊಂದಿಗೆ ಹೋಟಲು ಪ್ರವೇಶಿಸುವ ವೇಳೆಗೆ ನನಗೆ ಮತ್ತೊಂದು 'ಸವಿ ಆಕಸ್ಮಿಕ' ಕಾದಿತ್ತು. ನಾವು ಹೋಟಲಿಗೆ ಹಿಂದಿರು ಗುವ ವೇಳೆಗೆ ಆಳು ಪಿಯಾನೋದ ಬಳಿ ನಮಗೆಲ್ಲಾ ಆಸನಗಳನ್ನು ಸಿದ್ಧ ಪಡಿಸಿದುದೇ ಅಲ್ಲದೆ, ನಾವು ಹೋಗಿ ಕುಳಿತುಕೊಳ್ಳುತ್ತಿದ್ದ ಹಾಗೇ ನಮ್ಮೆ ಲ್ಲರ ಮುಂದೂ, ಆ ಹೊತ್ತಿನಲ್ಲಿ ಬಹು ಪ್ರಿಯವಾದ, ಬಹು ಸ್ವಾಗತಾರ್ಹ ವಾದ, ಬಿಸಿ ಬಿಸಿಯಾಗಿ ಹೊಗೆಯಾಡುವ ಟೀ ತಂದಿಟ್ಟ. ನಾನು 'ಟೀ ಇದೆಯೇ?' ಎಂದು ಕೇಳಿದಾಗ ಆತ 'ಇಲ್ಲ' ಎಂದಿದ್ದ. 'ಈಗ ಇದೆಲ್ಲಿ ಯದು' ಎಂದುಕೊಂಡೇ ನಾನು—

'ಆಗ ಟೀ ಮುಗಿದು ಹೋಗಿದೆ ಎಂದಿದ್ದಿರಲ್ಲ'

—ಎಂದು ಹೋಟಲು ಮಾಲೀಕನನ್ನು ಕೇಳಿದೆ

'ಈಗಲೂ ಅಷ್ಟೆ–ಗಿರಾಕಿಗಳಿಗೆ ಟೀ ಇಲ್ಲ ಆದರೆ ನೀವೀಗ ಗಿರಾಕಿ ಗಳಲ್ಲ, ನನ್ನ 'ಮೆಹಮಾನ್' (ಅತಿಥಿಗಳು)'

—ಎಂದ ಆತ ನಗುತ್ತ.

'ಕೆಟ್ಟ ಸಂಗೀತ ಕೇಳಿಸುವುದಕ್ಕೆ ಈ ಕಾಲದ ಟೀ ಲಂಚ ಕೊಡು ತ್ತಿದ್ದಾನೆ'

—ಎಂದು ಮೆಹಂದಲೆ ಪಿಸುನುಡಿದರು.

'ಸದ್ಯ–ನಮ್ಮ ಪುಣ್ಯಕ್ಕೆ ಅವರ ಪಿಸುಮಾತು ಕೇಳಿಸಿಕೊಳ್ಳಲು ಆತ ಅಲ್ಲಿರಲಿಲ್ಲ. ಒಳಗಿನ ಯಾವುದೋ ಕೋಣೆಯಲ್ಲಿದ್ದ ತನ್ನ ತಮ್ಮನನ್ನು ಕರೆತರಲೆಂದು ಒಳಗೆ ಹೋಗಿದ್ದ, ನಾವು ಅದೂ ಇದೂ ಮಾತಾಡಿ ಕೊಳ್ಳುತ್ತಾ, ಬಹು ರುಚಿಯಾಗಿದ್ದ ಟೀಯನ್ನು ಸವಿಯುತ್ತಿರುವಾಗಲೇ

ಆತ ತನ್ನ ತಮ್ಮನನ್ನು ಕರೆದುಕೊಂಡು ಬಂದು, ಆಳಿಗೆ, ಗಾಳಿಯಾಡಲು ಎಡೆ ಬಿಟ್ಟು ಉಳಿದ ಬಾಗಿಲುಗಳನ್ನು ಹಾಕುವಂತೆ ಹೇಳಿದ.

' ತನ್ನ ದೃಷ್ಟಿಯೆಲ್ಲಾ ಹೋಟೆಲು ಮಾಲೀಕನೊಂದಿಗೆ ಬಂದ ಆತನ ತಮ್ಮನ ಮೇಲಿತ್ತು.

' ಆತನ ವಯಸ್ಸು ಇಪ್ಪತ್ತು-ಇಪ್ಪತ್ತೆರಡಕ್ಕಿಂತ ಹೆಚ್ಚಿರಲಾರದು. ಹೆಣ್ಣಿನಂಥ ಮೈಕಟ್ಟಿನ ಸುಂದರ ಯುವಕ. ನೀಳವಾದ ಕನಾಸಿ, ತುಂಬು ತುಟಿ, ಕೋಮಲವಾದ ಗಲ್ಲ, ಅಗಲವಾದ ಹಣೆ-ಒಂದೊಂದೂ ತಿದ್ದಿ ಮಾಡಿದಂತಿತ್ತು. ಆದರೆ ಆ ಮುಖದಲ್ಲಿ ಬಹು ಗಮನಾರ್ಹವಾಗಿದ್ದುವು ಆತನ ಕಣ್ಣುಗಳು ಬಾಚದೆ, ಹಣೆಯ ಮೇಲೆ ಜೋಲುಬಿದ್ದ ಕೇಶಗಳ ಅಡಿಯಲ್ಲಿ ಥಳಥಳಿಸುತ್ತಿದ್ದ ಆ ಕಣ್ಣುಗಳಲ್ಲಿ ತಾರುಣ್ಯದ ಚಮುಕು ಕಾಣಿಸದೆ, ವೃದ್ಧಾಪ್ಯವನ್ನು ಮುಟ್ಟಿದ ಅನಂತಯಾತನೆ ತುಂಬಿದಂತಿತ್ತು. ಜೀವನದಲ್ಲಿ ಬಹು ಕಹಿಯಾದ ನೋವನ್ನು ನುಂಗದೆ ಕಣ್ಣಲ್ಲಿ ಅಂಥ ಭಾವ ನೆಲಸುವುದು ಅಸಾಧ್ಯವೆಂದು ನೋಡುತ್ತಿದ್ದ ಹಾಗೇ ನನಗೆ ಮನವರಿಕೆಯಾಯಿತು. ಅಷ್ಟೇ ಅಲ್ಲ-ನಮ್ಮತ್ತ ನೋಡುತ್ತಿದ್ದ ಆ ಕಣ್ಣುಗಳಿಂದ ನಮ್ಮ ನೋಟವನ್ನು ಕದಲಿಸುವುದೂ ಅಸಾಧ್ಯವೆಂದೇ ಭಾಸವಾಗಿ ಹಾಗೇ ನೋಡುತ್ತಲೇ ಕುಳಿತಿದ್ದೆ. ಸದ್ಯ-ಹೋಟೆಲು ಮಾಲೀಕ ನಮಗೆ ಆತನ ಪರಿಚಯ ಮಾಡಿಕೊಡುವ ಮಾತಾಡಿ, ಆ ಕಣ್ಣುಗಳ ಮೋಡಿಯನ್ನು ಮುರಿದ

' ಈತನೇ ನನ್ನ ತಮ್ಮ-ಚಂದೂ ಕಮಲಾನಿ. ಚಂದೂ-ಇವರು ನಮ್ಮ ಅನಿರೀಕ್ಷಿತ ಅತಿಥಿಗಳು. ನಿನ್ನ ಪಿಯಾನೋ ವಾದನವನ್ನು ಕೇಳಬೇಕೆಂದು ಕುಳಿತಿದಾರೆ.'

—ಎಂದು ನಮ್ಮೆಲ್ಲರಿಗೂ ತನ್ನ ತಮ್ಮನ ಪರಿಚಯ ಮಾಡಿಕೊಟ್ಟ ಹೋಟೆಲು ಮಾಲೀಕ.

ತನ್ನ ಅಣ್ಣನ ಪರಿಚಯದ ಮಾತಿಗೆ ಆತ ಏನೊಂದೂ ಉತ್ತರ ಕೊಡದೆ, ಸುಮ್ಮನೆ ನಮಸ್ಕರಿಸಿ, ಜುಬ್ಬಾದ ಜೇಬಿನಲ್ಲಿದ್ದ ಸಿಗರೇಟಿನ ಪೊಟ್ಟಣವನ್ನು ಹೊರತೆಗೆದು, ಮುಖದ ಮೇಲೆ ಇಳಿಬಿದ್ದಿದ್ದ ಕೂದಲುಗಳನ್ನು ಮುಂಗೈನಿಂದ ಒಂದು ಬದಿಗೆ ಸರಿಸಿ, ಸಿಗರೇಟು ಹೊತ್ತಿಸಿಕೊಂಡು

ಪಿಯಾನೋದ ಬಳಿ ಸಾರಿ, ಅದರ ಅಡಿಯಲ್ಲಿ ಹುದುಗಿದ್ದ ಆಸನವನ್ನು ಹೊರಗೆಳೆದುಕೊಂಡು ಕುಳಿತು, ಪಿಯಾನೊದ ಮುಚ್ಚಳವನ್ನು ತೆಗೆದು, ಒಮ್ಮೆ ಅವನ 'ಕೀ'ಗಳ ಮೇಲೆ ಕೈಯಾಡಿಸಿ, ಶ್ರುತಿ ಹೋಗಿರುವುದೆಂದು ನೋಡಿಕೊಂಡ

ಆತ ವಾದನಕ್ಕೆ ಪಿಯಾನೊ ಸಿದ್ಧಗೊಳಿಸಿಕೊಳ್ಳುವ ವೇಳೆಗೆ ಆತನ ಅಣ್ಣ, ಅವನಿಗೆ ಕುಡಿಯಲು ಟೀ ಸಿಗರೇಟಿನ ಬೂದಿ ಹಾಕಲು 'ಆಷ್‌ಟ್ರೇ' ಎಲ್ಲವನ್ನು ಸಿದ್ಧಗೊಳಿಸಿದ. ಆ ಅಣ್ಣ ತಮ್ಮನ ಯೋಗಕ್ಷೇಮ ನೋಡಿಕೊಳ್ಳುವ ರೀತಿಯಲ್ಲಿ ನನಗೇನೊ ಸೋದರಿಕೆಗಿಂತ ಹೆಚ್ಚಾಗಿ ಮಾತೃತ್ವವೇ ಕಾಣುತ್ತಿತ್ತು.

ಚಂದೂ ಕಮಲಾನಿ ಒಮ್ಮೆ ಪಿಯಾನೊದ 'ಕೀ'ಗಳ ಮೇಲೆ ತನ್ನ ಕೈಬೆರಳುಗಳನ್ನಾಡಿಸಿ, ಒಂದು ಗುಟುಕು ಟೀ ಕುಡಿದು,—

'ಬೈಸಾಬ್—ನಿಮ್ಮ ಅತಿಥಿಗಳಿಗೆ ಯಾವುದನ್ನು ಬಾರಿಸಬೇಕೆಂದು ಆಸೆಯೋ ಕೇಳಿ?'

—ಎಂದ ನಮ್ಮ ಕಡೆ ತಿರುಗಿಯೂ ನೋಡದೆ.

ಹೋಟೆಲು ಮಾಲಿಕ ನಮ್ಮತ್ತ ತಿರುಗಿ ನೋಡುವ ರೂಪದಲ್ಲಿ ಅದೇ ಪ್ರಶ್ನೆಯನ್ನೇ ಕೇಳಿದ

'ನಮ್ಮ ಗುಂಪಿನಲ್ಲೆಲ್ಲಾ ಅಷ್ಟಿಷ್ಟು ಪಾಶ್ಚಾತ್ಯ ಸಂಗೀತದ ಪರಿಚಯ ವಿದ್ದವನು ನಾನೇ. ಮನೋವಿಜ್ಞಾನದ ಅಭ್ಯಾಸಕ್ಕಾಗಿ ಯೂರೋಪಿಗೆ ಹೋಗಿದ್ದಾಗ ವಿಯನ್ನಾದಲ್ಲಿ, ಬರ್ಲಿನ್‌ನಲ್ಲಿ, ಪ್ಯಾರಿಸ್‌ನಲ್ಲಿ ಹತ್ತಾರು ಪಿಯಾನೋ ಕಛೇರಿಗಳನ್ನೂ ಕೇಳಿದ್ದೆ. ಶಾಸ್ತ್ರೀಯ ಸಂಗೀತ—ಅದು ಪಾಶ್ಚಾತ್ಯವಾಗಲಿ, ಪೌರ್ವಾತ್ಯವಾಗಲಿ—ವನ್ನು ಕೇಳಿ, ಅದರ ಪೂರ್ಣ ರಸಾಸ್ವಾದನೆ ಮಾಡಲು ಕಿವಿಗಳಿಗೆ ಒಂದು ವಿಶಿಷ್ಟವಾದ ಸಂಸ್ಕಾರವಾಗ ಬೇಕು ಆ ಬಗೆಯ ಸಂಸ್ಕಾರದಲ್ಲಿ ನುರುಪಡಿಯಾಗದ ಕಿವಿಗೆ ಶಾಸ್ತ್ರೀಯ ಸಂಗೀತ ಸೊಗಸುವುದಿರಲಿ, ಚೀನೀಯರ ಊಟದ ಪದ್ಧತಿಯಂತೆ ಏನೋ ವಿಲಕ್ಷಣವಾಗೇ ಕೇಳಿಸುತ್ತದೆ. ಅದು ಶಾಸ್ತ್ರೀಯ ಸಂಗೀತದ ಸಾಮಾನ್ಯ ನಿಯಮ. ಆದರೆ ಎಂಥ ಅಪ್ರಬುದ್ಧ ಚೇತನನ ಮೇಲೂ, ಪರಿಣಾಮ ವನ್ನು ಮೂಡಿಸುವಂಥ ಶಕ್ತಿ ಕೆಲವು ಮಂದಿ ಅಲೌಕಿಕ ಪ್ರತಿಭ

ಶಾಲಿಗಳಾದ ಕಲಾವಿದರಿಗಿರುತ್ತದೆ ನನ್ನ ಮೇಲೆ ಪಾಶ್ಚಾತ್ಯ ಸಂಗೀತ ರಚನಾಕಾರರಲ್ಲಿ ಬಿಠೋವೆನ್ (Beethoven)ನ ಕೃತಿಗಳು ಆ ಬಗೆಯ ಪರಿಣಾಮವನ್ನು ಮೂಡಿಸಿದ್ದವು. ಬಹುಷಃ ಅದಕ್ಕೆ ಅವನ ಕೃತಿಗಳಲ್ಲಿರುವ ಭಾವದ ಉತ್ಕಟತೆಯೇ ಕಾರಣವೆಂದು ಕಾಣುತ್ತದೆ. ಉಜ್ವಲವಾದ ಮಿಂಚು ಕವಲುಕವಲಾಗಿ ಝಳಪಿಸಿದಾಗ, ಕಣ್ಣು ಮುಚ್ಚಿಕೊಂಡಿದ್ದವನಿಗೂ ಆ ಬೆಳಕಿನ ಅನುಭವವಾಗುವ ಹಾಗೆ, ಸಂಗೀತದ ಗಂಧವಿಲ್ಲದವನ ಮೇಲೂ ಬಿಠೋವೆನ್‌ನ ಕೃತಿಗಳು ಪರಿಣಾಮ ಮಾಡುತ್ತದೆ. ಯೂರೋಪಿನಲ್ಲಿ ಪಿಯಾನೋ ಕಛೇರಿಗಳಲ್ಲಿ ಬಿಠೋವೆನ್‌ನ ಕೃತಿಗಳ ವಾದನವನ್ನು ಕೇಳಿದಾಗ, ನನಗೆ ಆ ಬಗೆಯ ಭಾವಾನುಭವ ಆಗಿದ್ದುದರಿಂದಲೇ, ಚಂದೂ ಕಮಲಾನಿ, ತನ್ನ ಅಣ್ಣನ ಮೂಲಕ ನಮ್ಮನ್ನು 'ಏನು ಬಾರಿಸಲಿ? ಎಂದು ಪ್ರಶ್ನಿಸಿದಾಗ, ನಾನು ಸ್ವಲ್ಪವೂ ಹಿಂದೆ ಮುಂದೆ ಯೋಚಿಸದೆ—

'ಬಿಠೋವೆನ್‌ನ ಯಾವುದಾದರೂ ರಚನೆಯನ್ನು (Composition) ಬಾರಿಸಿ'

—ಎಂದು ಕೇಳಿದೆ

ನನ್ನ ಆಯ್ಕೆಯನ್ನು ಕೇಳಿ ಚಂದೂಕಮಲಾನಿ ಚಕಿತನಾದಂತೆ ತೋರಿತು. ಆತ ತಟಕ್ಕನೆ ನನ್ನತ್ತ ತಿರುಗಿ ತೀವ್ರವಾಗಿ ನೋಡಿ—

'ಬಿಠೋವೆನ್ನೇ ಆಗಬೇಕೇ ?'

'ಅದೇ ಆಗಬೇಕೆಂಬ ಕಡ್ಡಾಯವೇನೂ ಇಲ್ಲ ನಿಮಗೆ ಅದು ಬೇಡವಾಗಿ, ಬೇರೆಯದೇ ಬೇಕು ಎಂದಿದ್ದರೆ, ನಿಮಗೆ ಪ್ರಿಯವಾದದ್ದೇ ಆಗಬಹುದು. ಬೇರೆ ಯಾವ ರಚನೆಯನ್ನಾದರೂ ನುಡಿಸಿ.'

— ಎಂದೆ ನಾನು.

'ಹಾಗಾದರೆ ಬಿಠೋವೆನ್‌ನ ರಚನೆಯನ್ನೇ ನುಡಿಸು ಎಂದಿರಲ್ಲಾ—'

'ಅದಕ್ಕೆ ಕಾರಣವಿಷ್ಟೆ–ಮೊದಲೇ ಹೇಳಿಬಿಡುತ್ತೇನೆ· ನಾವಾರೂ ಸಂಗೀತಶಾಸ್ತ್ರತಜ್ಞರಲ್ಲ, ಪಾಶ್ಚಾತ್ಯ ಸಂಗೀತವಂತೂ ನಮಗೆ ಇದ್ದುದೂ ಹೊಸದು. ಅದರಲ್ಲಿಯೂ ಪಿಯಾನೊ ಮತ್ತಷ್ಟು ಅಪರಿಚಯಸ್ಥ.

ಹಾಗಿರುವಾಗ ನಮಗೆ ಇದು ಬೇಕು ಎಂದರೆ, ಅದು ತಜ್ಞರ ಅಯ್ಕೆಯಲ್ಲ. ಎಲ್ಲೋ ಒಂದೆರಡು ಬಾರಿ ಕೇಳಿದ ಅಭಿಮಾನ–ಅಷ್ಟೆ. ನೀವು ಹ್ಯಾಂಡೆಲ್‍ನದೋ, ಮೆಝಾರ್ಟನದೋ ಅಥವಾ ಷೋಪಿನ್‍ದೊ ಯಾವುದಾದರೊಂದು ರಚನೆಯನ್ನು ನುಡಿಸಿ, ಅದೇ ಬಿಠೋವೆನ್‍ನ ರಚನೆಯೆಂದರೂ ನಮಗೇನೂ ವ್ಯತ್ಯಾಸ ತಿಳಿಯುವುದಿಲ್ಲ. ಆದುದರಿಂದ ನೀವು ನಮ್ಮ ಆಯ್ಕೆಗೆ ಇಲ್ಲದ ಪ್ರಾಮುಖ್ಯತೆಯನ್ನು ಕೊಡಬೇಕಾದುದೂ ಇಲ್ಲ; ಹಾಗೇ ತಜ್ಞರಸಾಸ್ವಾದನೆಯನ್ನು ನಮ್ಮಿಂದ ನಿರೀಕ್ಷಿಸಬೇಕಾಗಿಯೂ ಇಲ್ಲ.'

—ನಾನು ನಮ್ಮ ಸಂಗೀತಕಲೆಯ ಅಜ್ಞತೆಯನ್ನು ಮುಚ್ಚಿಡದೆ, ಇದ್ದದ್ದನ್ನು ಇದ್ದಹಾಗೆ ಹೇಳಿದೆ.

'ಬಿಠೋವೆನ್‍ನ ರಚನೆಗಳ ವಾದನವನ್ನು ಎಂದಾದರೂ ಕೇಳಿದ್ದೀರಾ ?'

'ಒಂದೆರಡು ಸಾರಿ ಕೇಳಿದ್ದೇನೆ.'

'ಹಾಗೆ ಕೇಳಿದಾಗ ಆತನ ರಚನೆ ನಿಮಗೆ ಹಿಡಿಸಿತೇ ?'

'ಹಿಡಿಸಿದುದರಿಂದಲೇ ಈಗ ಅದಾದರೆ ಆಗಬಹುದು ಎಂದು ಹೇಳಿದ್ದು.'

'ನಿಜ, ನಿಜ–ಬಿಠೋವೆನ್‍ನ ರಚನೆಗಳಲ್ಲಿ ಅಜ್ಞ ಹೃದಯವನ್ನು ಕಲಕುವಂಥ ಗುಣವಿದೆ. This is elemental Passion in his music. ಕಾಳಿದಾಸ ಹೇಳುವ 'ವೇತ್ತಿಗಾನರಸಂ ಫಣಿ' ಗುಣ ಬಿಠೋವೆನ್‍ನಲ್ಲಿದೆ. ಅವನ ಸಂಗೀತದ್ದು ತೋಡಿ ತೆಗೆದ ಕಾಲುವೆಯ ಅಲೆಗಳ ಕಿಂಕಿಣಿ ನಾದದಲ್ಲಿ, ಜಲಪಾತದ ಸಹಜ ಘೋಷ. ಬಹುದಿನ ಕಾದ ನಲ್ಲನನ್ನು, ಹಸಿದು ಬಿಗಿದಪ್ಪುವ ಪ್ರಣಯಿನಿಯ ಪ್ರಣಯಾವೇಶ ಅವನ ರಚನೆಗಳಲ್ಲಿ ತುಂಬುತುಳುಕುತ್ತದೆ. ಅವನಲ್ಲಿ ಎಲ್ಲವೂ ತೀವ್ರ ಉತ್ಕಟ. ಮಂದ ಗಮನವೂ ಹೊರಲಾರದ ಮೈ ಭಾರವನ್ನು ಹೇಗೊ ಹೊತ್ತು ನಡೆಯುವ ಕೋಣನ ಜಗ್ಗುನಡೆಯಲ್ಲಿ ಸಹಜ ಚಪಲವಾದ ಹರಿಣಿಯ ಮೆಲುನಡೆ. ಈ ರಚನೆಯನ್ನು ಕೇಳಿ—'

—ಮಾತನಾಡುತ್ತಾ ಆಡುತ್ತಾ ಆತ ಏಕೊ ಉದ್ವೇಗ ಪರವಶನಾಗಿ

ಆ ಉದ್ವೇಗದಲ್ಲೇ, ತನ್ನ ತೆಳುವಾದ, ನೀಳವಾದ, ಧೃಡವಾದ ಕೈಬೆರಳು ಗಳಿಂದ ಪಿಯಾನೊದ ಮನೆಗಳನ್ನು ಮೀಟಿದ.

'ಝುಂ ಎಂದು ಅಲೆ ಅಲೆಯಾಗಿ ಹರಡಿ ತುಂಬಿದ ಮಂಜುಲ ಸ್ವರತರಂಗ. ಹತ್ತಾರು ಮಿಂಚುಗಳು ಚಕ್ಕನೆ ಚಿಮ್ಮಿ ನಮ್ಮ ಸುತ್ತಲೂ ಹರಿದು ಮಡುಗಟ್ಟಿ ನಿಂತಂತೆ ಭಾಸವಾಯಿತು ನಮಗೆ. ಆ ಮಿಂಚಿನ ಕಡಲಿನಲ್ಲಿ ಉಜ್ವಲ ಹವಳ ವರ್ಣದ ಮೀನೊಂದು ಚಕಮಕಿಸುತ್ತ ಚಲಿಸು ವಂತೆ ಮತ್ತಾವುದೊ ಒಂದು ಸಣ್ಣ ಸ್ವರ ನುಡಿಯುತ್ತಿತ್ತು ಆ ಕಡಲು, ಆತನ ಕೈಬೆರಳಿನ ಮೋಡಿಗೊಳಗಾಗಿ ಒಮ್ಮೆ ಹೊನ್ನು ಹೊಳೆಯಾದರೆ ಮತ್ತೊಮ್ಮೆ ರಜತ ಶರಧಿ, ಮಗದೊಮ್ಮೆ ನೀಲ ಸೀರಧಿ–ಅದರಲ್ಲಿ ಬಣ್ಣ ಬಣ್ಣದಹೊಳಪು ಅಲೆಗಳು ಕಡಲಿಗೆ ತಮ್ಮ ಬಣ್ಣ ಬೆರಸುತ್ತ, ಕಡಲನ್ನೇ ಕಲಕುತ್ತ, ಕಡಲಿನಲ್ಲಿ ಕರಗುತ್ತ, ಬಣ್ಣಬಣ್ಣದ ಫೇನಬುದ್ಬುದಗಳನ್ನು ಸೀರ್ಪನಿಗಳನ್ನು ತೂರುತ್ತಾ, ಒಮ್ಮೆ ಒಂಟಿಯಾಗಿ, ಒಮ್ಮೆ ಹಿಂಡು ಹಿಂಡಾಗಿ ಚಲಿಸುವಂತಿತ್ತು.

ಭಾವದ ಉದ್ವೇಗಕ್ಕೆ ಬಾಗಿದ ಆತನ ಬೆನ್ನ ನರನರವೂ ಬಿಗಿದು, ಬಾಗಿದ ಮುಖದ ಮೇಲೆ ಕೂದಲು ಜೊಂಪೆ ಜೊಂಪೆಯಾಗಿ ಇಳಿಬಿದ್ದು, ಪಿಯಾನೊದ 'ಕೀ'ಗಳ ಮೇಲೆ ಕೈಬೆರಳುಗಳು ಮಿಂಚಿನಂತೆ ಓಡುತ್ತಿ ದ್ದವು ಆತ ಸೃಷ್ಟಿಸಿದ ಅಪರಿಚಿತ ಸ್ವರ ಮಾಧುರಿಗಳ ವಿಚಿತ್ರ ಲಾಸ್ಯದಲ್ಲಿ ನಾವೆಲ್ಲರೂ ಪರವಶ ಚಿತ್ತರಾಗಿ, ಕೈಯಲ್ಲಿ ಹೊಗೆಯಾಡುತ್ತಿದ್ದ ಸಿಗ ರೇಟನ್ನು ಸೇದಬೇಕೆಂಬುದನ್ನು ಮರೆತು, ಅದು ಬುಡದವರೆಗೂ ಸುಟ್ಟು ಕೈಬೆರಳ ಚರ್ಮವನ್ನು ಸುಟ್ಟುದೂ ಅರಿವಾಗದೆ ಕುಳಿತು ಕೇಳುತ್ತಿದ್ದೆವು. ಆತನ ಪಿಯಾನೊ ವಾದನ ವೈಖರಿಯ ಅನುಭವವಾದ ಬಳಿಕ ನನಗೆ ಆತ ಬರೀ ಪಿಯಾನೊ ನುಡಿಸಬಲ್ಲವನಷ್ಟೇ ಅಲ್ಲ, ಆ ಪಾವನ ಕಲೆಯಲ್ಲಾತ ಪ್ರತಿಭಾಶಾಲಿ ಎಂಬುದು ನಂಬಿಕೆಯಾಗಿತ್ತು.

'ಆತ ಹಿಂದೆ ಬಾರಿಸುತ್ತಿದ್ದ ರಚನೆಯನ್ನು ಯಾವಾಗ ನಿಲ್ಲಿಸಿ, ಹೊಸ ರಚನೆಯನ್ನು ಎಲ್ಲಿ ಹೇಗೆ ಆರಂಭಿಸಿದನೋ ಏನೊ, ಆದರೆ ಕೇಳುತ್ತಾ ಕುಳಿತಿದ್ದ ನನಗೆ ಮಾತ್ರ ಏಕೊ ಆತನ ವಾದನದಲ್ಲಿದ್ದ ವಿನೂತನತೆ ಮಾಯವಾಗಿ, ಸ್ವರಮೇಳವದಲ್ಲಿ ಭಾರತೀಯ ಸ್ವರಮೇಳದ ರೀತಿಯೇ

ಹೆಚ್ಚಾಗಿ ಇದ್ದಂತೆ ಕಾಣತೊಡಗಿತು. ಅದನ್ನು ಕೇಳಿ ಅಪರಿಚಿತ ಸೀಮೆ ಯಲ್ಲಿ ನಮ್ಮದೇ ಆದ ಉಡಿಗೆತೊಡಿಗೆ, ನಡಗೆ ನುಡಿಯ ಪರಿಚಿತರನ್ನು ಆಕಸ್ಮಿಕವಾಗಿ ಕಂಡಂತಾಗಿ ಆಶ್ಚರ್ಯವಾಯಿತು. ನುಡಿಸುತ್ತಿರುವ ಆತ ನನ್ನು ತಡೆದು, 'ಇದು ಯಾರ ರಚನೆ, ಯಾವ ಸೀಮೆಯವರ ರಚನೆ' ಎಂದು ಕೇಳಬೇಕೆನಿಸಿದರೂ, ನುಡಿಸುವಾತನ ತನ್ಮಯತೆಯನ್ನು ಕಂಡು, ನಡುವೆ ಮಾತಾಡಲು ಮನಸ್ಸಾಗಲಿಲ್ಲ. ಹಿಂದೆ ಆತ ನುಡಿಸುತ್ತಿದ್ದ— 'ರಚನೆ'ಯನ್ನು ಕೇಳುತ್ತಿದ್ದಾಗ ಮೌನವಾಗಿದ್ದ ನನ್ನ ಮಿತ್ರರೂ ಈಗ ಏಕೊ ಮಂತ್ರಮುಗ್ಧರಂತಾಗಿದ್ದರು.

'ಆತ ನುಡಿಸುತ್ತಲೇ ಇದ್ದ. ಗಳಿಗೆ ಗಳಿಗೆಗೆ ಆತನ ತನ್ಮಯತೆ ತೀವ್ರವಾಗಿ, ನುಡಿಯುತ್ತಿರುವುದು ಪಿಯಾನೋದ 'ಕೀ'ಗಳೊ, ಅಥವಾ ಆತನ ಹೃದಯದಲ್ಲಿ ಉದ್ರೇಕಿತವಾದ ಭಾವತರಂಗಗಳೋ, ಅವನ ತೋಳ ನರಗಳ ಮೂಲಕ, ಬೆರಳುಗಳಿಗೆ ಹರಿದು ಬಂದು, ಅವುಗಳ ಚಲನೆ ಯಿಂದಾಗಿ ಹಾಡಾಗಿ ಹೊರಹೊಮ್ಮುತ್ತಿರುವುದೋ ಎಂಬ ಭ್ರಾಂತಿ ಮೂಡಿತ್ತು ಕೇಳುವ ನಮಗೆ.

'ಮೊದಲ ಮೊದಲು ಉಲ್ಲಾಸಕರವಾಗಿದ ರಚನೆ, ಬರಬರುತ್ತಾ ದುಃಖ ಭಾರವಾಗಿ, ಹೆಪ್ಪುಗಟ್ಟಿದ ಹಿರಿದುಃಖ ತೀವ್ರ ಯಾತನೆಯ ಉರಿಗೆ ನಿಧಾನವಾಗಿ ಕರಗಿ, ಹನಿ ಹನಿಯಾಗಿ ಹರಿಯುತ್ತಿರುವಂತಿತ್ತು ಮಹಾ ವಿಪಿನದಲ್ಲಿ, ದೊಡ್ಡ ಮಳೆ ಬಂದು ನಿಂತ ಮೇಲೆ, ತಣ್ಣಗೆ ಸುಳಿಯುವ ಮಂದ ಮಾರುತದಲ್ಲಿ ಲಕ್ಷೋಪ ಲಕ್ಷ ಎಲೆಗಳಿಂದ ನೀರ್ಹನಿಗಳು ಹುಲ್ಲಿನ ಮೇಲೆ, ಬಂಡೆಗಳ ಮೇಲೆ, ಝರಿಗಳ ಮೇಲೆ ತೊಟಕುವ ಹಾಗೆ, 'ರಚನೆ'ಯ ಎಳೆಯ ಎಳೆಯಲ್ಲೂ, ಒಂದೊಂದು ತಿರುವಿನಲ್ಲೂ ಏರಿಳಿತ ದಲ್ಲೂ ಮಹಾಶೋಕದ ಬಗೆಬಗೆಯ ವಿಶ್ವಾಸವೇ ಕಾಣಬರುತ್ತಿತ್ತು. ಪಿಯಾನೋದ ಒಂದೊಂದು 'ಮನೆ'ಯ ಮೇಲೂ ನಮ್ಮ ಹೃದಯದಲ್ಲಿ ದುಃಖವನ್ನು ಮಿಡಿದು, ಕಣ್ಣಾಲಿಯ ಕಂಬನಿಯ ನರಗಳನ್ನು ಕೆಣಕುತ್ತಿ ದ್ದವು. ಒಮ್ಮೆ ಪ್ರಕ್ಷುಬ್ಧವಾರಿಧಿಯಾಗಿ, ಒಮ್ಮೆ ಕಾಳ್ಗಿಚ್ಚಾಗಿ, ಒಮ್ಮೆ ಬಿರುಗಾಳಿಯಾಗಿ, ಮತ್ತೊಮ್ಮೆ ಕೊರೆವ ಶೀತಮಾರುತವಾಗಿ, ಕೊಚ್ಚುವ ಹೊಳೆಯಾಗಿ, ಕಲ್ಲನ್ನು ಕರಗಿಸುವ, ಕರಗಿದ ಅಗ್ನಿಯ ಹನಿಗಳಾಗಿ

ದುಃಖ ನಮ್ಮ ಹೃದಯವನ್ನೇ ಹಿಡಿದು ಅಲುಗಿಸುತ್ತಿತ್ತು. ಏಕೋ ನಮಗಾರಿಗೂ ನಮಗಾದ ಭಾವೋದ್ರೇಕವನ್ನು ತಡೆಯಲಾಗದೆ, ನಮ್ಮೆಲ್ಲರ ಕಣ್ಣುಗಳೂ ಸಜಲವಾದುವು

'ನಮ್ಮ ಮೇಲೆ ಅಷ್ಟು ಪರಿಣಾಮ ಮಾಡಿದ ದುಃಖ, ನುಡಿಸುವಾತನ ಮೇಲೂ ಪ್ರಚಂಡ ಪರಿಣಾಮವನ್ನು ಮಾಡದೆ ಇರಲಿಲ್ಲ ಆತನ ಮೈಯೂ ಭಾವನಿರ್ಭರತೆಯಲ್ಲಿ ಬೆಂಡಾಗಿ ಕಂಪಿಸುತ್ತಿತ್ತು ಈಗ ಆತ ನುಡಿಸುತ್ತಿರಲಿಲ್ಲ, ರಚನೆಯೇ ಆತನ ಕೈ ಬೆರಳುನ್ನು ನಡೆಸುತ್ತಿತ್ತು

'ರಚನೆ ಕ್ರಮವಾಗಿ 'ಶೃಂಗ' (creendo) ವನ್ನು ಏರುತ್ತಿತ್ತು. ಇನ್ನೇನು ಅದು ಮುಕ್ತಾಯ ಘಟ್ಟವನ್ನು ತಲುಪಬೇಕು, ಎನ್ನುವವೇಳೆಗೆ ನುಡಿಸುತ್ತಿದ್ದಾತ, ಇದ್ದಕ್ಕಿದ್ದ ಹಾಗೇ ಪಿಯಾನೋದ ಮೇಲೆ ಕುಸಿದು ಬಿದ್ದು, ಎಳೆಯ ಮಗುವಿನ ಹಾಗೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ, ಆ ಆಕಸ್ಮಿಕವನ್ನು ಕಂಡು ನಮ್ಮೆಲ್ಲರಿಗೂ ಉಸಿರು ಬಿಗಿದಂತಾಯಿತು. ಏನೂ ಮಾತಾಡಲು ತೋಚದೆ ಸುಮ್ಮನೆ ಕುಳಿತುಬಿಟ್ಟೆವು.

'ನಮ್ಮಷ್ಟೆ ತನ್ಮಯನಾಗಿ ಕುಳಿತು ಕೇಳುತ್ತಿದ್ದ ಚಂದೂ ಕಮಲಾನಿಯ ಅಣ್ಣ ತನ್ನ ತಮ್ಮನ ಅಳುವನ್ನು ಕೇಳಿ, ಇದ್ದಕ್ಕಿದ್ದ ಹಾಗೇ ಕನಸು ಮುರಿದವನಂತೆ ಮೈ ಕೊಡವಿಕೊಂಡು ಎದ್ದು, ತನ್ನ ತಮ್ಮನ ಬಳಿ ಹಾರಿ—

"ಚಂದೂ .. ಚಂದೂ .. ನಾನೆಷ್ಟು ಬಾರಿ ಈ ಹಾಡು ಬಾರಿಸಬೇಡೆಂದು ಬೇಡಿಕೊಂಡರೂ ನೀನು ಕೇಳುವುದಿಲ್ಲ.'

'ಎನ್ನುತ್ತಲ್ಲೇ ದುಃಖಿತವಾದ ಎಳೆಯ ಮಗುವನ್ನು ಸಂತೈಸುವ ತಾಯಂತೆ ನೇವರಿಸುತ್ತಾ, ನಮ್ಮತ್ತ ತಿರುಗಿ—

"ನಮ್ಮನ್ನು ಕ್ಷಮಿಸಿ'

'—ಎಂದು ಹೇಳಿ, ಪಿಯಾನೋದ ಮೇಲೆ ಬಿಕ್ಕಿ ಬಿಕ್ಕಿ ಅಳುತ್ತಲೇ ಮಲಗಿದ್ದ ತನ್ನ ತಮ್ಮನನ್ನು ಎತ್ತಿಕೊಂಡು ಒಳಗೆ ಕರೆದುಕೊಂಡು ಹೋದ. ಹಾಗೆ ಎತ್ತಿದಾಗ ಚಂದೂ ಕಮಲಾನಿಯ ಕೈ ಪಿಯಾನೋದ 'ಕೀ'ಗಳಿಗೆ ಸೋಕಿ, ಅದು 'ಜಯ್'ಎಂದು ಸದ್ದುಮಾಡಿತು.

'ಚಂದೂ ಕಮಲಾನಿಯ ಪಿಯಾನೋದ ವಾದನ ಸೃಜಿಸಿದ

ಯಾವುದೋ ಸ್ವಪ್ನ ಪ್ರಪಂಚದಲ್ಲಿ ತೇಲಾಡುತ್ತಿದ್ದ ನಾವೆಲ್ಲಾ ವಾಸ್ತವ ಪ್ರಪಂಚಕ್ಕಿಳಿದು ಬಂದು, ಅರ್ಥವಾಗದ ಯಾವುದೋ ದುಃಖದಿದಿರು ಮೂಕರಾಗಿ ಕುಳಿತಿದ್ದೆವು. ನಮ್ಮ ನಮ್ಮಲ್ಲೇ ಮಾತನಾಡಿಕೊಳ್ಳಲೂ ನಮ್ಮಲ್ಲಿ ಶಕ್ತಿ ಇರಲಿಲ್ಲ.

' ಕೊಂಚ ಹೊತ್ತಿನಲ್ಲೇ ಚಂದೂ ಕಮಲಾನಿಯ ಅಣ್ಣ ಒಳಗಿನಿಂದ ಹೊರಗೆ ಬಂದು—

'' ನನ್ನನ್ನು ಕ್ಷಮಿಸಿ. ತಮಗೆ ಬೇಸರವಾಯಿತೇನೋ ? '

'—ಎಂದ

' ಆತನ ಮುಖವೂ ದುಃಖದಲ್ಲಿ ಹಿಂಡಿದ ಹಾಗಾಗಿತ್ತು. ನನ್ನ ಮಿತ್ರರೆಲ್ಲರೂ ಸುಮ್ಮನೆ ಕುಳಿತಿದ್ದರು. ನಾನೇ, ಎದೆ ಗಟ್ಟಿಮಾಡಿ ಕೊಂಡು—

"ನಿಮ್ಮ ತಮ್ಮನ ಈ ದುಃಖಕ್ಕೆ ನಾನು ಕಾರಣವನ್ನು ಕೇಳಬಹುದೇ?'

'—ಎಂದೆ.

" ಹೇಳುವುದಕ್ಕೆ ಅಭ್ಯಂತರವೇನು ಇಲ್ಲ ಆದರೆ ಆದರಿಂದ ಉಪಯೋಗವೂ ಇಲ್ಲ.'

" ನೀವು ಅಷ್ಟು ನಿರಾಶರಾಗಬಾರದು. ಪರಿಹಾರದ ದುಃಖ ವಾವುದೂ ಜಗತ್ತಿನಲ್ಲಿಲ್ಲ.

" ದೈಹಿಕ ದುಃಖಕ್ಕೆ ಪರಿಹಾರವಿರಬಹುದು. ಆದರೆ—'

" ಮಾನಸಿಕ ದುಃಖಕ್ಕೂ ಪರಿಹಾರವಿದೆ. ನಾನು ಆ ಮಾತನ್ನು ಸಾಂಪ್ರದಾಯಕವಾಗಿ ಹೇಳುತ್ತೇನೆ. ನೀವು ನಿರಾಶರಾಗಲು ಕಾರಣವಿಲ್ಲ. ನಿಮ್ಮ ಸೋದರರಲ್ಲಿ ಅದ್ಭುತ ಕಲೆಯಿದೆ. ಅದು ಹೀಗೆ, ಒಳಗೇ ಕೊರೆಯುವ ದುಃಖದ ಗೆದ್ದಲು ಹುಳುವಿನ ಪಾಲಾಗಬಾರದು. ಅದಕ್ಕಾಗಿಯೇ, ಅಪರಿಚಿತನಾದರೂ ಇಲ್ಲದ ಸಲಿಗೆ ವಹಿಸಿ ಕೇಳುತ್ತಿದ್ದೇನೆ. ಅದೇನು ಹೇಳಿ ? '

" ಚಂದುವಿನದು ವಿಚಿತ್ರದುಃಖ. ತಾವು ಸೃಜಿಸಿದ ಸುಂದರ ವಸ್ತುಗಳನ್ನೆಲ್ಲವನ್ನು ಕಳೆದುಕೊಂಡ ಕಲಾವಿದನ ದುಃಖ. ಆ ದುಃಖಕ್ಕೆ ಏನು ಪರಿಹಾರವಿದೆ ಹೇಳಿ ? ದೇವರೇ ಅವನಿಗೆ ಆ ಕಷ್ಟವನ್ನು ಮರೆಯುವ

ಶಕ್ತಿಯನ್ನು ನೀಡಬೇಕು.'

" ಅಂದರೆ—'

" ನನ್ನ ಸೋದರನ ಬಾಳಿನದೊಂದು ಬಹುವಿಚಿತ್ರ ದುರಂತ. ಈಗಲೇ ತಮ್ಮ ಮನಸ್ಸಿಗೆ ರಸಭಂಗದಿಂದ ಬೇಸರವಾಗಿರಬೇಕು ಎಂತಲೇ ನಿಮ್ಮಮುಂದೆ ಅಪರಿಹಾರ್ಯವಾದ ದುಃಖದ ಕಥೆ ಹೇಳಿ ಮತ್ತಷ್ಟು ಬೇಸರಗೊಳಿಸುವ ಇಚ್ಛೆ ನನಗಿಲ್ಲ.'

" ಚಿಂತೆಯಿಲ್ಲ—ಹೇಳಿ. ನಾನಂತೂ ಹೇಳಿ ಕೇಳಿ ಡಾಕ್ಟರ್. ದುಃಖದ ಕಥೆಗಳನ್ನು ಕೇಳಿ ಕೇಳಿ ನನ್ನ ಮೈ ಮರಗಟ್ಟಿದೆ. ಸಾಧ್ಯವಿದ್ದರೆ ಏನಾದರೂ ಪರಿಹಾರಮಾರ್ಗ ಕಂಡುಹಿಡಿಯೋಣ.'

'—ಎಂದು ನಾನೇ ಆತ ತನ್ನ ಕಥೆ ಹೇಳುವಂತೆ ಒತ್ತಾಯಮಾಡಿದೆ.

' ನನ್ನ ಬಲವಂತಕ್ಕೆ ಕಟ್ಟುಬಿದ್ದು ಆತ ತನ್ನ ಕಥೆಯನ್ನು ಹೇಳಿದ.

## ೩

'' ಡಾಕ್ಟರ್, ನಾನು, ನನ್ನ ತಮ್ಮ ಇಬ್ಬರೂ ನಿರಾಶ್ರಿತ ಸಿಂಧಿ ಸಹೋದರರು. ಆದರೆ ನಾವು ಎಂದೂ ಹೀಗೇ ನಿರಾಶ್ರಿತರಾಗಿರಲಿಲ್ಲ. ತಾವು ಭಾರತದ ಅತ್ಯಂತ ಪ್ರಾಚೀನ ಅವಶೇಷಗಳು ದೊರೆತ ಮೊಹೆಂಜೊ ದಾರೊದ ಹೆಸರು ಕೇಳಿರಬೇಕು. ಅದರ ಸಮೀಪದಲ್ಲಿಯೇ ನಮ್ಮ ಹುಟ್ಟಿದೂರು. ನಮ್ಮ ತಂದೆ ಬಹು ದೊಡ್ಡ ಜಮೀನ್ದಾರರು. ಅವರಿಗೆ ನಾವಿಬ್ಬರೇ ಗಂಡು ಮಕ್ಕಳು ನಮ್ಮಿಬ್ಬರನ್ನು ಅವರು ತಮ್ಮ ಕಣ್ಣು ಗಳಂತೆ ಸಾಕಿ ಬೆಳೆಸಿದರು. ನಮ್ಮೀರ್ವರಿಗೂ ಒಳ್ಳೆ ವಿದ್ಯಾಭ್ಯಾಸ ಮಾಡಿ ಸಿದರು. ಜೀವನದಲ್ಲಿ ನಮಗೆ ಬೇಕೆನಿಸಿದ ಜಾಡನ್ನು ಹಿಡಿಯಲು ಅವಕಾಶ ಮಾಡಿಕೊಟ್ಟರು.

'' ನನ್ನ ತಮ್ಮನಿಗೆ ಮೊದಲಿನಿಂದಲೂ ಸಂಗೀತದ ಗೀಳು ಬಹಳ ವಾಗಿತ್ತು. ಚಿಕ್ಕಂದಿನಲ್ಲೇ ಕೇಳಲು, ಸಾರಂಗಿ, ಸಿತಾರು ಮೊದಲಾದ ವಾದ್ಯಗಳನ್ನು ನುಡಿಸುವುದನ್ನು ಕಲಿತಿದ್ದ. ಕಾಲೇಜಿನಲ್ಲಿ ಓದುವಾಗ

ಅವನಿಗೆ ಈ ಪಿಯಾನೊ ವಾದನದ ಹುಚ್ಚುಹಿಡಿಯಿತು. ಕರಾಚಿಯಲ್ಲಿ ಅದನ್ನು ಚೆನ್ನಾಗಿ ಕಲಿಸಬಲ್ಲವರು ಇರಲಿಲ್ಲ. ಅದಕ್ಕಾಗಿಯೇ ಬೊಂಬಾಯಿಗೆ ಬಂದು ಕಲಿತ. ಆದರೆ ಅಲ್ಲಿ ಕಲಿತದ್ದು ಸಾಕಾಗಲಿಲ್ಲ. ಅದಕ್ಕಂತಲೇ ನಮ್ಮ ತಂದೆ ಅವನನ್ನು ಯೂರೋಪಿಗೆ ಕಳಿಸಿದರು. ಅಲ್ಲಿಯೂ ಮೂರು ನಾಲ್ಕು ವರ್ಷ ಅಭ್ಯಾಸ ಮಾಡಿ, ಬಹಳ ಚೆನ್ನಾಗಿ ನುಡಿಸಬಲ್ಲ ಎಂಬ ಹೆಸರು ತೆಗೆದುಕೊಂಡು ಬಂದ.

"ಯೂರೋಪಿನಿಂದ ಹಿಂದಿರುಗುವಾಗ ಚಂದು, ಅಲ್ಲಿಂದಲೇ ಒಂದು ಉತ್ತಮ ಪಿಯಾನೊ ಖರೀದಿ ಮಾಡಿಕೊಂಡು ಬಂದಿದ್ದ. ಜೀವನಕ್ಕಾಗಿ ಅವನು ಯಾವುದಾದರೂ ಒಂದು ವೃತ್ತಿಯನ್ನು ಅವಲಂಬಿಸುವ ಅಗತ್ಯವಿಲ್ಲದುದರಿಂದ ಮನೆಯಲ್ಲೇ ಕುಳಿತು ತನ್ನ ಅಭ್ಯಾಸವನ್ನು ಮುಂದುವರಿಸಿದ. ಕೇಳಿದವರೆಲ್ಲರೂ ಮುಗ್ಧರಾಗುವ ಮಟ್ಟಿಗೆ ನುಡಿಸುವ ಶಕ್ತಿ ಬಂದಿದ್ದರೂ, ಅವನಿಗೆ ಮಾತ್ರ ತೃಪ್ತಿ ಇರಲಿಲ್ಲ. ಅದರೊಂದಿಗೆ, ಅವನಿಗೆ ತಾನೆ ಸ್ವತಃ ಗೀತೆಗಳನ್ನು ರಚಿಸಬೇಕು; ಭಾರತೀಯ ಸಂಗೀತ ಪದ್ಧತಿಯನ್ನು ಪಿಯಾನೊ ವಾದನಕ್ಕೆ ಅಳವಡಿಸಬೇಕು. ಅಲ್ಲಿಯ 'ಸೆರಿನೇಡ್' 'ಸೋನಾಟಾ'ಗಳ ರೀತಿಯ ಕೃತಿಗಳನ್ನು ರಚನೆ ಮಾಡಬೇಕು ಎಂಬ ಬಯಕೆ ಮೂಡಿತು. ಈ ಹೊಸ ಹುಚ್ಚನ್ನು ತಲೆಗೆ ಹತ್ತಿಸಿಕೊಂಡ ಬಳಿಕ ಚಂದುವಿಗೆ ಇಪ್ಪತ್ತುನಾಲ್ಕು ಗಂಟೆಯ ಕಾಲವೂ ಪಿಯಾನೊವೇ ಜೊತೆಯಾಯಿತು

"ಹೀಗಿರುವಾಗಲೇ ನನ್ನ ತಂದೆ ಅವನಿಗೆ ಮದುವೆಯನ್ನು ಮಾಡಿದರು ಚಂದುವಿಗೆ ಹಿಡಿದ ಪಿಯಾನೊ ಹುಚ್ಚನ್ನು ಮರೆಸುವಂಥ ಹುಡುಗಿ, ಅವನ ಮಡದಿಯಾದ ಷೀಲಾ. ಎಷ್ಟು ಚೆಲುವೆಯೊ ಅಷ್ಟು ಗುಣವಂತೆ. ಗಂಡ ಹೆಂಡಿರಿಬ್ಬರೂ ಬಹು ಅನ್ಯೋನ್ಯವಾಗಿದ್ದರು. ಅವರಿಬ್ಬರ ಸುಖಸಂತೋಷವನ್ನು ಕಂಡು ದೇವತೆಗಳಿಗೂ ಹೊಟ್ಟೆ ಉರಿಯಿತೊ ಏನೊ, ಅದಕ್ಕೇ ಆ ಸುಖ ಬಹುದಿನ ಬಾಳಲು ಬಿಡದೆ, ಷೀಲಾನ ತೆಗೆದುಕೊಂಡು ಹೋಗಿಬಿಟ್ಟರು. ಷೀಲಾ ಹೋದಾಗ ನಮಗೇ ಹುಚ್ಚು ಹಿಡಿಯುವಷ್ಟು ದುಃಖವಾಗಿತ್ತು. ಇನ್ನು ಇವನ ದುಃಖವನ್ನು ಕೇಳಬೇಕೆ? ಅಷ್ಟು ದಿನ ಇವನೂ ಬದುಕುವ ನಂಬಿಕೆ ಇರಲಿಲ್ಲ ನಮಗೆ."

“ಆ ಹೊತ್ತಿನಲ್ಲಿ ಇವನ ಪಿಯಾನೊ ಇವನನ್ನು ಉಳಿಸಿತು. ಆ ಪಿಯಾನೊವೇ ಇವನ ಪಾಲಿಗೆ ಇವನ ಷೀಲಾ ಆಯಿತು. ಊಟ, ತಿಂಡಿಯ ಯೋಚನೆ ಬಿಟ್ಟು ಹೊಸಹೊಸ ಗೀತೆಗಳನ್ನು ನುಡಿಸುತ್ತಾ ಕುಳಿತುಬಿಡುವನು. ಆ ಕಾಲದಲ್ಲಿ ಅವನು ರಚಿಸಿದುದೆಲ್ಲವೂ, ಈಗ ನೀವು ಕೇಳಿದಿರಲ್ಲಾ, ಅಂಥ ದುಃಖ ಗೀತೆಗಳೇ. ಅಂಥವನ್ನು ಎಷ್ಟನ್ನು ರಚಿಸಿದ್ದನೊ ಏನೋ. ತೆಕ್ಕೆ ತೆಕ್ಕೆ ಬರದಿಟ್ಟಿದ್ದ. ಹಾಗೆ ಬರದಿಟ್ಟದನ್ನು ನಾವು ಮುಟ್ಟಲು ಕೂಡಾ ಬಿಡುತ್ತಿರಲಿಲ್ಲ. ‘ಅವೆಲ್ಲಾ ನಾನು ಷೀಲಾಗೆ ಬರದ ಕಾಗದಗಳು ಬೇರೆಯವರು ಮುಟ್ಟಕೂಡದು’ ಎಂದು ಕಟ್ಟಪ್ಪಣೆ ಮಾಡಿದ್ದ.”

“ಷೀಲಾ ಹೋದದ್ದೇ ಹೋದದ್ದು–ನಮ್ಮ ಸಂಸಾರಕ್ಕೆ ದುರ್ದಿನಗಳು ಬಂದವು. ಷೀಲಾ ಹೋದ ವರ್ಷಕ್ಕೆ ನಮ್ಮ ತಾಯಿ ತೀರಿಕೊಂಡಳು. ಆಕೆ ಹೋದ ದುಃಖದಲ್ಲಿ ನಮ್ಮ ತಂದೆಯವರೂ ಹಾಸಿಗೆ ಹಿಡಿದರು. ಅದರಿಂದಾಗಿ ಕರಾಚಿಯಲ್ಲಿ ಹೊಸದಾಗಿ ಅಂಗಡಿಯನ್ನು ಪ್ರಾರಂಭಿಸಿದ್ದ ನಾನು ಅಂಗಡಿಯನ್ನು ಮುಚ್ಚಿ ಮನೆಯ ಕಡೆ ನೋಡಿಕೊಳ್ಳಲು ಬಂದು ನಿಲ್ಲಬೇಕಾಯಿತು.”

“ಈ ದುಃಖವೇ ನಮಗೆ ಸಾಕೆನಿಸುವಷ್ಟು ಆಗಿದ್ದಾಗ, ವಿಭಜನೆಯ ಕಾಲದ ದುಃಖದ ಹೊಳೆಯೇ ಬಂತು–ನಮ್ಮ ದೇಶವನ್ನೇ ಕೊಚ್ಚಿಕೊಂಡು ಹೋಗಲು. ಆ ಕಾಲದಲ್ಲಿ ಭಸ್ಮವಾದ ಲಕ್ಷಾಂತರ ಮನೆಗಳಲ್ಲಿ ನನ್ನದೂ ಒಂದು; ಆಗ ಸತ್ತ ಲಕ್ಷಾಂತರ ಅಭಾಗಿನಿಯರಲ್ಲಿ ನನ್ನ ಮಡದಿಯೂ ಒಬ್ಬಳು. ನನ್ನ ನಾಲ್ಕು ವರ್ಷದ ಮಗುವನ್ನು, ನನ್ನ ವೃದ್ಧ ತಂದೆಯನ್ನು ನಮ್ಮ ಕಣ್ಣಮುಂದೇ ಕೊಂದರು. ಆಸ್ತಿ-ಪಾಸ್ತಿ ಎಲ್ಲವೂ ಲೂಟಿಯಾಗಿ ಹೋಯಿತು.”

“ಆದರೆ ಆಗ ನಾವು ಅದಾವುದಕ್ಕಾಗಿಯೂ ದುಃಖಪಡುವ ಸ್ಥಿತಿಯಲ್ಲಿರಲಿಲ್ಲ. ನಮ್ಮ ಜೀವ ಉಳಿಸಿಕೊಳ್ಳುವುದೇ ಬಹು ದೊಡ್ಡ ಕೆಲಸವಾಗಿತ್ತು. ಹೇಗೆ ಹೇಗೊ ತಪ್ಪಿಸಿಕೊಂಡು, ಮನೆಯಲ್ಲಿದ್ದ ಒಡವೆಗಳನ್ನು ಮಾತ್ರ ಬಚ್ಚಿಟ್ಟುಕೊಂಡು ಬಂದು, ಗಡಿ ದಾಟಿ ಜೀವ ಉಳಿಸಿಕೊಂಡವು. ಹಾಗೆ ಬರುವಾಗ ನಮ್ಮನ್ನು ಕೊಲ್ಲಬರುತ್ತಿದ್ದವನಿಂದ ತಲೆ ಉಳಿಸಿಕೊಂಡು

ಬರುವುದು ಎಷ್ಟು ಕಷ್ಟವಾಯಿತೊ, ಅದಕ್ಕೆ ಹತ್ತರಷ್ಟು ಕಷ್ಟವಾಯಿತು, ಈ ತಮ್ಮನನ್ನು ಕರೆದುಕೊಂಡು ಬರಲು."

"ಮನೆಯನ್ನು ಲೂಟಿ ಮಾಡಿದ ಜನ, ಚಂದೂನ ಕಣ್ಣೆದುರಿಗೇ ಅವನ ಪಿಯಾನೊವನ್ನು ಸೌದೆಯಂತೆ ಸೀಳಿ, ಅವನು ಬರೆದುದೆಲ್ಲಕ್ಕೂ ಬೆಂಕಿ ಕೊಟ್ಟರು. ಆ ದುಃಖದಲ್ಲಿ ಚಂದೂ ಹುಚ್ಚನಾಗಿದ್ದ. ಇವನನ್ನು ಜಾಗ್ರತ ಸ್ಥಿತಿಯಲ್ಲಿ ಅಲ್ಲಿಂದ ಸಾಗಿಸಲಾಗದೆ. ಪ್ರಜ್ಞೆ ತಪ್ಪಿಸಿ ಹೆಣದ ಹಾಗೆ ತರಬೇಕಾಯಿತು ಡಾಕ್ಟರ್."

"ಆದರೆ ಇಲ್ಲಿಗೆ ಕರೆದುಕೊಂಡು ಬಂದ ಬಳಿಕ ಎಷ್ಟೋ ಬಾರಿ ನನಗನಿಸುತ್ತದೆ. ಇವನೂ ಬದುಕಿರುವುದಕ್ಕಿಂತ ಸತ್ತುಹೋಗಿದ್ದರೆ ಚೆನ್ನಾಗಿತ್ತು ಎಂದು. ಇವನ ದುಃಖ ನೋಡಲು ಅಷ್ಟು ಕಷ್ಟವಾಗಿದೆ ಡಾಕ್ಟರ್. ನನಗೂ ಅವನ ದುಃಖ ಅರ್ಥವಾಗುತ್ತದೆ ಡಾಕ್ಟರ್. ನಾನು ಕಲಾವಿದನಲ್ಲ. ಆದರೂ ಅವನ ದುಃಖವೇನೆಂಬುದನ್ನು ಅರ್ಥಮಾಡಿಕೊಳ್ಳಬಲ್ಲೆ. ಲೂಟಿಗಾರರು ನನ್ನ ಮಗುವನ್ನು ಕೊಂದರು. ನಾನಾಗ ದುಃಖಪಟ್ಟೆ; ನನ್ನ ಹೆಂಡತಿಯನ್ನು ಕತ್ತರಿಸಿದಾಗ ಕಣ್ಣೀರಿಟ್ಟೆ, ನನ್ನ ತಂದೆಯನ್ನು ಕೊಂದುದನ್ನು ನೋಡಿ ಹೊಯ್ದಾಡಿದೆ–ಆದರೆ ಚಂದೂನ ಪಿಯಾನೊ ಸೀಳಿ, ಅವನ ರಚನೆಗಳನ್ನು ಸುಟ್ಟಾಗ ನನಗಾದ ದುಃಖ ಅದೆಲ್ಲಕ್ಕಿಂತ ಹೆಚ್ಚಿನದು"

"ಆದಕ್ಕಾಗಿಯೆ ಬೊಂಬಾಯಿಗೆ ಬಂದು ನಿಲ್ಲಲು ನೆಲೆ ಸಿಗುತ್ತಿದ್ದ ಹಾಗೇ ಮೊದಲು ಚಂದುವಿಗೆ ಒಂದು ಪಿಯಾನೊ ತೆಗೆದುಕೊಟ್ಟೆ. ಅದನ್ನು ಬಾರಿಸುತ್ತ ಅವನು ಅಷ್ಟಿಷ್ಟಾದರೂ ತನ್ನ ದುಃಖವನ್ನು ಮರೆಯಲೆಂದು. ಆದರೆ ಅದರಿಂದ ಅವನಿಗೆ ಹೊಸ ದುಃಖವನ್ನು ಕೊಂಡುಕೊಟ್ಟ ಹಾಗಾಗಿದೆ. ದುಃಖವನ್ನು ಮರೆಯಲು ಪಿಯಾನೊ ಬಾರಿಸುತ್ತಾನೆ. ಅದನ್ನು ಬಾರಿಸುವಾಗ ಕಳೆದುಹೋದ ರಚನೆಗಳ ನೆನಪು ಮರುಕುಳಿಸಿ, ಹೀಗೆ ಮಗುವಿನ ಹಾಗೆ ಅಳಲಾರಂಭಿಸುತ್ತಾನೆ. ಈ ದುಃಖವನ್ನು ಮರೆಯಲು ಹೊಸ ಹಾಡುಗಳನ್ನಾದರೂ ಬರೆ ಎಂದೆ. ಅದೂ ಅವನಿಗೆ ಸಾಧ್ಯವಿಲ್ಲವಾಗಿದೆ"

"ಹೀಗೆ ಸುಟ್ಟುಹೋದ ಹಾಡುಗಳ ನೆನಪಿನ ನೋವನ್ನು ಮಾಯಿ

ಸುವುದಕ್ಕೆ ಏನು ಮದ್ದಿದೆ ಹೇಳಿ ಡಾಕ್ಟರ್ ? ಈಗಳನು ಹೊಸದನ್ನು ಬರೆಯಲಾರ, ಹಳೆಯದನ್ನು ಮರೆಯಲಾರ. ಅದಕ್ಕೆ ಏನು ಔಷಧ ಮಾಡಿಸಲಿ ಹೇಳಿ ?'

'—ಅಪರಿಹಾರ್ಯವಾದ ದುಃಖದ ಆಘಾತಕ್ಕೆ ಸಿಲುಕಿದ ಅಸಹಾಯಕ ಶಿಶುವಿನಂತೆ ಕೇಳಿದ ಆತ.

'ಆತನ ಪ್ರಶ್ನೆಗೆ ಏನು ಉತ್ತರ ಹೇಳಬೇಕೆಂದು ನನಗೂ ತೋಚಲಿಲ್ಲ

'' ಇರಲಿ—ದೇವರಿದ್ದಾನೆ. ಎಂದಾದರೊಮ್ಮೆ ಬಿಡುವಾಗಿ ನನ್ನ ಬಳಿ ಕರೆತನ್ನಿ. ಆತ ಇದೆಲ್ಲವನ್ನೂ ಮರೆತು ಹೊಸ ಜೀವನ ಆರಂಭಿಸುವಂತೆ ಏನಾದರೊಂದು ದಾರಿ ಹುಡುಕೋಣ.'

'—ಎಂದು ಹೇಳಿ ಆತನಿಗೆ ನನ್ನ ಅಡ್ರೆಸ್ ಕೊಟ್ಟು ಬಂದೆ.'

—ಎಂದು ಹೇಳಿ ಡಾಕ್ಟರ್ ಘರಪುರೆ ತಾವು ಹೇಳುತ್ತಿದ್ದ ಕಥೆಯನ್ನು ಮುಗಿಸಿ ನಿಟ್ಟುಸಿರು ಬಿಟ್ಟು, ನನ್ನತ್ತ ತಿರುಗಿ ದುಃಖ ಜಡವಾದ ಧ್ವನಿಯಲ್ಲಿ ಕೇಳಿದರು—

'ನೀವೇ ಹೇಳಿ ರಾವ್. ಈ ಕಲೆಯ ಕೊಲೆಗಿಂತ ಮಿಗಿಲಾದ ದುರಂತವುಂಟೇ ? '

ನನಗಂತೂ ಅವರ ಪ್ರಶ್ನೆಗೆ ಉತ್ತರ ಕೊಡುವಷ್ಟು ಶಕ್ತಿ ಉಳಿದಿರಲಿಲ್ಲ. ಅವರು ಹೇಳಿದ ಕಥೆಯನ್ನು ಕೇಳಿಯಾದ ಮೇಲೆ ಉಳಿದವರಿಗೂ ನನ್ನಂತೇ ಬಾಯಿ ಕಟ್ಟಿತ್ತು.

'ಚಂದೂ ಕಮಲಾನಿ ಈಗಲೂ ಬೊಂಬಾಯಿನಲ್ಲಿಯೇ ಇದ್ದಾನೆಯೇ ಡಾಕ್ಟರ್ ? '

—ನಾನೇ ಕೇಳಿದೆ.

'ಇದ್ದಾನೆ ಇರದೆ ಎಲ್ಲಿಗೆ ಹೋಗಬೇಕು ? '

'ಮತ್ತೆ ಗೀತೆಗಳನ್ನು ರಚಿಸುವ ಶಕ್ತಿ ಬಂದಿವೆಯೇ ? '

'ಊಹೂ, ಆತನಲ್ಲಿ ಅದರ ಸೆಲೆಯೇ ಬತ್ತಿಹೋಗಿದೆ ರಾವ್. ಆ ಹೃದಯದಲ್ಲಿ ಅರಳಿ ಗಮಗಮಿಸುತ್ತಿದ್ದ ಹೂವು ಸತ್ತುಹೋಗಿ, ಅಲ್ಲಿ ಪುಷ್ಪದ ಪ್ರೇತ—ಅದೂ ಕೊಳೆತು ನಾರುವ ಹೆಣ—ಉಳಿದಿದೆ. ತನ್ನ ಹಾಡನ್ನು ಸುಟ್ಟ ಮಾನವನ ಬಗ್ಗೆ ಪ್ರಚಂಡ ತಾತ್ಸಾರಪೂರ್ಣ ಕ್ರೋಧ

ಹೊಗೆಯಾಡುವ ಜ್ವಾಲಾಮುಖಿಯಾಗಿದೆ ಆತನ ಹೃದಯ. ಹೃದಯದಲ್ಲಿ ಮಾನವತೆಯ ಪ್ರೇಮವಿಲ್ಲದ ಕಡೆ ಎಂದೂ ನಿಜವಾದ ಕಲೆ ಅರಳಲಾರದು ರಾವ್. ಚಂದೂ ಕಮಲಾನಿಗೆ ಮಾನವನಲ್ಲಿ ಪ್ರೇಮವಿಲ್ಲ, ದೈವದಲ್ಲೂ ನಂಬಿಕೆಯಿಲ್ಲ ಎರಡರ ಬಗ್ಗೆಯೂ ದ್ವೇಷವೇ ಇದೆ. ಪಿಯಾನೋ ನುಡಿಸುತ್ತಿರುವಷ್ಟು ಹೊತ್ತೇ ಅವನು ಹಿಂದಿನ ಮನುಷ್ಯ, ಉಳಿದ ಹೊತ್ತಿನಲ್ಲಾತ ಶುದ್ಧ ದ್ವೇಷದ ಚಿಲುಮೆ.'

—ಡಾಕ್ಟರ್ ಘೆರಪುರೆ ಕಳಕಳಿಯಿಂದ ಹೇಳಿದರು.

'ಹುಲಿ ಹಾವನ್ನಾದರೂ ನಂಬು' ಎಂದ ಚೋಯಿತ್‌ರಾಂ ವಾಧ್ವಾನಿ—

ಕಲೆಯ ಸೆಲೆ ಬತ್ತಿ ದ್ವೇಷದ ಚಿಲುಮೆಯಾದ ಚಂದೂ ಕಮಲಾನಿ—

ಮತದ್ವೇಷದ ಅಗ್ನಿತಾಂಡವ ನಡೆದ ಮಹಾಮಸಣದಲ್ಲರಳಿದ ವಿಷಪುಷ್ಪಗಳು!

ಇನ್ನೆಷ್ಟುಜನ, ಇನ್ನೆಷ್ಟು ಸಾವಿರ ಸಾವಿರ, ಲಕ್ಷ ಲಕ್ಷ ಇಂಥ ವಿದ್ವೇಷದ ಹೊಗೆಯಾಡುವ ಮಾನವ ಹೃದಯಗಳು ಸುತ್ತುತ್ತಿರಬೇಕು ದೇಶದಲ್ಲಿ—

ಆ ಭಾವನೆ ನನ್ನಲ್ಲಿ ಮೂಡಿ, ಏಕೊ ನನಗೆ ಮಂಜಿನಗಡ್ಡೆಯ ಮೇಲೆ ಕುಳಿತಂತಾಗಿ ಮೈ ನಡುಗಿತು

ಸುಮ್ಮನೆ ಕುಳಿತುಬಿಟ್ಟೆ.

ನನ್ನನ್ನು ಹಾಗೆ ಬಿಟ್ಟಿದ್ದರೆ ಎಷ್ಟು ಹೊತ್ತು ಹಾಗೇ ಕುಳಿತಿರುತ್ತಿದ್ದೆನೊ ಏನೋ, ಆದರೆ ತನ್ನ ಕೈಗಡಿಯಾರವನ್ನು ನೋಡಿಕೊಂಡ ವಾಸಂತಿ ಬಹೆನ್—

'ಹೊತ್ತೆಷ್ಟಾಯಿತು ಗೊತ್ತೆ ಡಾಕ್ಟರ್? ಹೀಗೆ ಅಡ್ಡ ಮಾತಾಡುತ್ತಾ ಕುಳಿತರೆ, ಮಧುವಾಠಕ್‌ನ ವಿಷಯಕ್ಕೆ ಬರುವುದಕ್ಕೆ ಮೂರುದಿನ ಹಿಡಿಯುತ್ತದೆ—'

—ಎಂದು ನಮ್ಮ ಗಮನವನ್ನು ನಾವು ಆರಂಭಿಸಿದ ವಿಷಯದತ್ತ ಎಳೆದಳು.

'ನಿಜ, ನಿಜ, ಇಂಥ ಮಾತೇ ಹೀಗೆ. ಯಾವುದೋ ಅಡ್ಡದಾರಿ

ಹಿಡಿದರೆ, ಎಲ್ಲಿ ಆರಂಭಿಸಿದೆವು ಎಂಬುದೇ ಅರ್ಥವಾಗದ ಹಾಗೆ ಎಲ್ಲೋ ಎಳೆದುಕೊಂಡು ಹೋಗುತ್ತದೆ. ಅಂತೂ ನಿನ್ನ ಕೆಲಸದಲ್ಲಿ ಅರ್ಧ ನಮ್ಮಿಂದಲೇ ಮಾಡಿಸಿದೆ—ವಾಸಂತೀ, ಆದಕ್ಕಾಗಿ ನಿನ್ನ ಖರ್ಚಿನಲ್ಲಿ ಇನ್ನೊಂದು 'ರೌಂಡ್'ಟೀಗೆ ಹೇಳಿ, ರಾವ್‌ಗೆ ಮಧುವಾರಕ್ ವಿಷಯ ಹೇಳು'

—ಎಂದರು ಡಾಕ್ಟರ್ ಘರಪುರೆ.

'ಅಂತೂ ನಿಮ್ಮ ವೈಮರೆವಿಗೆ ನಾನು ಜುಲ್ಮಾನೆ ಕೊಡ ಬೇಕು ಎನ್ನಿ'

—ಎಂದು ವಾಸಂತೀ ಬಹೆನ್, ಬೇರೆ ಮೇಜಿನ ಬಳಿ ಸುಳಿದಾಡು ತ್ತಿದ್ದ ಮಾಣಿಯನ್ನು ಕರೆದು ಮತ್ತಷ್ಟು ಟೀ ತರುವಂತೆ ಹೇಳಿಕಳಿಸಿ ತಾನು ಹೇಳಬೇಕಾಗಿದ್ದ ವಿಷಯವನ್ನು ಆರಂಭಿಸಿದಳು.

# ರಿಟಾ ಹೇಳಿದ ಕಥೆ

೧

‘ ನಾನು ಈ ಕಥೆಯನ್ನು ಹೇಗೆ ಆರಂಭಿಸಿ ಹೇಗೆ ಹೇಳಬೇಕೆಂದು ಏನೋ ಒಂದು ಲೆಕ್ಕ ಹಾಕಿಕೊಂಡಿದ್ದೆ. ಡಾಕ್ಟರು, ಕುಸುಮಾ ಇಬ್ಬರೂ ಅಡ್ಡಮಾತಾಡಿ, ನನ್ನ ಮಾತಿನ ಕೊಂಡಿಯನ್ನೇ ಕಡಿದು ಬಿಟ್ಟರು ಈಗ ನಾನು ಅದರ ಜಾಡು ಹಿಡಿದೇ ಹೇಳಬೇಕಾಗಿ ಬಂತು.

‘ ಕುಸುಮಾ ಹೇಳಿದ ರಿಟಾ ವಾಧ್ವಾನಿಯ ವಿಷಯ ಕೇಳಿದಿರಲ್ಲ, ರಾವ್. ಕರಾಚಿಯಲ್ಲಿ ಎಲ್ಲವನ್ನೂ ಕಳೆದುಕೊಂಡು ಹೇಗೋ ಬೊಂಬಾಯಿಗೆ ಬಂದ ರಿಟಾ, ಇಲ್ಲಿಯೂ ಏನೇನೋ ಪಡಬಾರದ ಕಷ್ಟಗಳನ್ನೆಲ್ಲಾ ಪಟ್ಟು, ಹೇಗೊ ನಮ್ಮ ಡಾಕ್ಟರ ಕಣ್ಣಿಗೆ ಬಿದ್ದಳು. ಡಾಕ್ಟರ ಬಳಿ ಅವಳು ಹೇಗೆ ಬಂದಳು ಎಂಬುದನ್ನು ಹೇಳ ಹೊರಟರೆ ಅದೇ ಒಂದು ಕಥೆಯಾಗುತ್ತದೆ, ನಾವು ಅಂದುಕೊಂಡ ವಿಷಯ ಇವತ್ತಿಗೆ ಮುಗಿಯುವುದಿಲ್ಲ. ಆದ್ದರಿಂದ ಆ ವಿಷಯ ಹೇಳಹೋಗುವುದಿಲ್ಲ ಕ್ಷಮಿಸಿ

‘ ರಿಟಾ ಕರಾಚಿಯಲ್ಲಿ ಕಾಲೇಜಿನಲ್ಲಿ ಓದುತ್ತಿದ್ದಾಗ ಮನೋವಿಜ್ಞಾನವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಡಿಗ್ರಿ ತೆಗೆದುಕೊಂಡಿದ್ದಳು. ಎಂತಲೇ ಆಕೆ, ಮಾಡಲು ಏನೂ ಕೆಲಸವಿಲ್ಲದೆ ಡಾಕ್ಟರ ಕಣ್ಣಿಗೆ ಬಿದ್ದಾಗ, ಸಿಂಧಿ ನಿರಾಶ್ರಿತರ ಬಗ್ಗೆ ವಿಷಯ ಸಂಗ್ರಹ ಮಾಡುತ್ತಿದ್ದ ಡಾಕ್ಟರು ಆ ಬಗ್ಗೆ ತಮಗೆ ಆದಷ್ಟು ‘ಕೇಸ್ ಹಿಸ್ಟರೀಸ್'ನ ಸಂಗ್ರಹಿಸಿ ಕೊಡಲು. ರಿಟಾಳನ್ನು ತಮ್ಮ ಬಳಿ ‘ಕೇಸ್ ವರ್ಕರ್’ ಆಗಿ ನೇಮಿಸಿ ಕೊಂಡರು

‘ ಜೀವನಕ್ಕೆಂದು ದಾರಿಯನ್ನು ಕಂಡುಕೊಂಡ ರಿಟಾ, ಅಂಧೇರಿಯಲ್ಲಿ, ಯಾರೋ ಸಿಂಧಿಗಳ ಮನೆಯಲ್ಲಿ ಊಟ, ವಾಸಕ್ಕೆ ಏರ್ಪಾಟು ಮಾಡಿಕೊಂಡು, ಕೆಲಸ ಮಾಡುತ್ತಿದ್ದಳು.

‘ ರಿಟಾ ಡಾಕ್ಟರ ಬಳಿ ‘ಕೇಸ್ ವರ್ಕರ್’ ಆದರೂ, ಡಾಕ್ಟರ ದೃಷ್ಟಿಯಲ್ಲಿ ಮಾತ್ರ ಅವಳೂ ಒಂದು ‘ಕೇಸ್’ ಆಗಿದ್ದಳು, ಅವಳ ಹೃದ

ಯಕ್ಕೂ ಮನಸ್ಸಿಗೂ ಗಾಯವಾಗಿತ್ತು. ಡಾಕ್ಟರ್ ಆ ಗಾಯವೂ ಮಾದು ಅವಳು ಪೂರಾ ಹೊಸಮನುಷ್ಯಳಾಗುವಂತೆ ಆದಷ್ಟು ಪ್ರಯತ್ನಿಸು ತ್ತಿದ್ದರು. ನಮಗೂ ರಿಟಾಳಲ್ಲಿ ಮತ್ತೆ ಜನರಲ್ಲಿ ನಂಬಿಕೆ, ಮನುಷ್ಯನ ಬಗ್ಗೆ ಪ್ರೇಮ ಮೂಡುವ ರೀತಿಯಲ್ಲಿ ಆಕೆಯೊಂದಿಗೆ ನಡೆದುಕೊಳ್ಳಿ' ಎಂದೇ ಹೇಳಿದ್ದರು ಡಾಕ್ಟರು. ನಾವೆಲ್ಲರೂ ಅವಳ ವಿಷಯದಲ್ಲಿ ಹಾಗೇ ನಡೆದುಕೊಳ್ಳುತ್ತಿದ್ದೆವು. ಸ್ನೇಹಕ್ಕೆ ರಿಟಾಳೂ ತುಂಬಾ ಯೋಗ್ಯ ವ್ಯಕ್ತಿ; ತುಂಬಾ ಸ್ನೇಹಪರಳಾದ ಹುಡುಗಿ.

' ನಮ್ಮೆಲ್ಲರ ನಡುವೆ ರಿಟಾ ದಿನದಿನಕ್ಕೆ ಹೊಸಬಳಾಗುತ್ತಾ, ಅವಳ ಮುಖವನ್ನು ಸದಾ ಕವಿಯುತ್ತಿದ್ದ ಚಿಂತೆಯ ಮೋಡ ದಿನದಿನಕ್ಕೆ ಕರಗಿ, ಅವಳ ಮುಖದಲ್ಲಿ ಗೆಲುವು ಮೂಡತೊಡಗಿತು.

' ಹೀಗಿರುವಾಗ ಒಂದು ದಿನ ಸಂಜೆ ರಿಟಾ ಎಂದಿನಂತೆ, ಡಾಕ್ಟರಿಗೆ ತನ್ನ ಅಂದಿನ ಕೆಲಸದ ವರದಿಯನ್ನು ಒಪ್ಪಿಸಲು ಬಂದಾಗ, ಹಣೆಯ ಮೇಲೆ ಇಷ್ಟಗಲದ ಪಟ್ಟಿ ಕಟ್ಟಿಕೊಂಡು ಬಂದಳು. ಆ ಗಾಯದ ಪಟ್ಟಿಯನ್ನು ನೋಡಿ, ಎಲ್ಲಿ ಬಿದ್ದಳೋ, ಎಲ್ಲಿ ಏನು 'ಆಕ್ಸಿಡೆಂಟ್'ಗೆ ಸಿಕ್ಕಳೋ, ಅಥವಾ ಮತ್ತೇನಾಯಿತೋ ಎಂದು ಗಾಬರಿಯಾಗಿ—

' ಇದೆಲ್ಲಿಯದು ಇಷ್ಟು ದೊಡ್ಡ ಗಾಯ ? ಏನಾಯಿತು ? '

—ಎಂದು ಕೇಳಿದೆ.

'ಕರಾಚಿಯಲ್ಲಿದ್ದ ಭೂತ ಬೊಂಬಾಯಿಗೂ ಬಂದಿದೆ ವಾಸಂತಿ ಬಹೆನ್, ಅದು ಮಾಡಿದ ಗಾಯ ಇದು '

—ಎಂದಳು ರಿಟಾ ಬಹು ಕಟುವಾಗಿ.

' ನನಗೆ ಅವಳ ಮಾತೇ ಸರಿಯಾಗಿ ಅರ್ಥವಾಗಲಿಲ್ಲ. ಇಲ್ಲಿಯೂ ಯಾರಾದರೂ ಮುಸಲ್ಮಾನ ಪುಂಡರು, ಚೆಲುವೆಯಾದ ರಿಟಾಳ ಮೇಲೆ ಕೈಮಾಡಿದರೇನೋ ಎನಿಸಿ ಗಾಬರಿಯಾಗಿ—

'' ಹಾಗೆಂದರೇನು ರಿಟಾ ? ನಿನ್ನಮಾನ ಅರ್ಥ ಏನು ? ಏನಾ ಯಿತು ಬಿಡಿಸಿ ಹೇಳು.'

'—ಎಂದು ಕೇಳಿದೆ.

'' ಹೇಳುವುದಕ್ಕೇನಿದೆ ವಾಸಂತೀ ಬಹೆನ್. ಇಷ್ಟೆ—ಸಿಂಧಿಗಳು

ಶಾಸಗ್ರಸ್ತ ಜನ. ಭೂಮಿಯ ಮೇಲೆ ಅವರು ಇರಲೇ ಬಾರದು. ಅದಕ್ಕೆ ಎಲ್ಲಿಂದ ಎಲ್ಲಿಗೆ ಹೋದರೂ ಸಿಂಧಿ ಎಂದರೆ ಜನ ಬೆಂಕಿಕಾರುತ್ತಾರೆ. ಹಿಟ್ಲರನ ಜರ್ಮನಿಯಲ್ಲಿ ಯಹೂದಿಗಳಿಗೆ ಬಂದ ಪಾಡು ನಮಗೆ ಹಿಂದೂ ಸ್ಥಾನದಲ್ಲಿ ಬಂದಿದೆ ಹೀಗೆ ಎಲ್ಲರಿಗೂ ಹಗೆಗಳಾಗಿ ಬದುಕುವುದಕ್ಕಿಂತ, ಸಿಂಧಿಗಳೆಲ್ಲರೂ ಎಲ್ಲಾದರೊಂದು ಕಡೆ ಸೇರಿ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುವುದು ಮೇಲು'

'—ಎಂದಳು ರಿಟಾ, ಕಣ್ಣತುಂಬ ನೀರಿಟ್ಟುಕೊಂಡು.

' ತೀವ್ರ ನಿರಾಶೆಯಲ್ಲಿ ತೊಯ್ದು ತೊಟಕುತ್ತಿದ್ದ ರಿಟಾಳ ಮಾತು ಗಳನ್ನು ಕೇಳಿ ನನಗೆ ಇನ್ನಿಲ್ಲದಷ್ಟು ಕಸವಿಸಿಯಾಯಿತು.

" ಛಿ! ಅಂಥ ಕಹಿ ಮಾತಾಡಬಾರದು ಬಿಡು. ನಡೆದದ್ದಾದರೂ ಏನು—ಹೇಳು '

—ಎಂದು ಕೇಳಿದೆ.

" ಕಹಿ ಮಾತಲ್ಲ ವಾಸಂತೀ ಬಹೆನ್, ನಿಜವಾಗಿಯೂ ನಾವು ಎಲ್ಲರಿಗೂ ಬೇಡವಾದವರು ಸಣ್ಣ ಪುಟ್ಟ ಮಕ್ಕಳಿಗೂ ನಮ್ಮ ಹೆಸರೆತ್ತಿ ದರೆ ಹಗೆ ಕಾರುವಂತಾಗಿದೆ. ಹೀಗಿರುವಾಗ ಇನ್ನು ನಮಗೆ ಉಳಿವುಂಟೆ ವಾಸಂತೀ ಬಹೆನ್ '

'—ರಿಟಾ ದುಃಖ ತಪ್ತಳಾಗಿ ಕೇಳಿದಳು.

" ಅದೆಲ್ಲಾ ಹಾಗಿರಲಿ, ಈಗ ಆದೇನಾಯಿತೋ ಹೇಳು '

'—ಎಂದು ಕೇಳಿದೆ ನಾನು.

" ನಾನು ಅಷ್ಟು ಬಲವಂತ ಮಾಡಿದ ಬಳಿಕ ರಿಟಾ, ತನಗಾಗಾಯ ಏಕಾಯಿತೆಂಬುದನ್ನು ಹೇಳಲು ಇಚ್ಛೆ ಇಲ್ಲದಿದ್ದರೂ ಹೇಳಲಾರಂಭಿಸಿದಳು;

## ೨

' ನಾನು ಅಂಧೇರಿಯಲ್ಲಿ ವಾಸವಾಗಿರುವುದು ನಿನಗೆ ಗೊತ್ತಷ್ಟೆ ವಾಸಂತೀ ಬಹೆನ್, ನಾನು ವಾಸವಾಗಿರುವುದು ನನ್ನಂತೆಯೇ ಒಬ್ಬ ನಿರಾಶ್ರಿ

ತನ್ನ ಮನೆಯಲ್ಲಿ. ನಾನು ವಾಸವಾಗಿರುವ ಮನೆಯವನ ಹೆಸರು ಭಗತ್‌ರಾಂ ಎಂದು. ಆತ ವೃತ್ತಿಯಿಂದ ಮಿಠಾಯಿಗಾರ ಬೊಂಬಾಯಿಗೆ ಬರುವ ಮುನ್ನವೂ ಅದೇ ಆತನ ವೃತ್ತಿಯಾಗಿತ್ತು.

' ನಮ್ಮ ಹಾಗೇ ಏನೇನೋ ಕಷ್ಟಪಟ್ಟು, ತನ್ನ ಹೆಂಡತಿಯೊಂದಿಗೆ ಅದಷ್ಟು ಹಣ, ನಗನಾಣ್ಯ ಹೊತ್ತುಕೊಂಡು ಬೊಂಬಾಯಿಗೆ ಬಂದು ಸೇರಿಕೊಂಡ ಭಗತ್‌ರಾಂ ಇಲ್ಲಿ ಅಷ್ಟು ದಿನ ನಿಲ್ಲಲು ನೆಲೆ ಇಲ್ಲದೆ, 'ಫುಟ್‌ಪಾತ್'ನ ಮೇಲೆ ವಾಸ ಮಾಡಿ, ಕಡೆಗೆ ಅಂಧೇರಿಯಲ್ಲಿ ಎಲ್ಲೋ ಒಂದು ಕಡೆ, ಖಾಲಿಜಾಗದಲ್ಲಿ ಜೋಪಡಿ ಹಾಕಿಕೊಂಡು, ನಿಲ್ಲಲು ನೆರಳು ಮಾಡಿಕೊಂಡು, ಅಲ್ಲೇ ತನ್ನ ಮಿಠಾಯಿ ಅಂಗಡಿ ತೆರೆದ ಅವನು ಮಾಡುತ್ತಿದ್ದ ಸಿಹಿ ಸಾಮಾನು, ಎಲ್ಲಕ್ಕಿಂತ ಹೆಚ್ಚಾಗಿ ಅವನು ತಯಾರಿಸುತ್ತಿದ್ದ 'ಲಸ್ಸಿ' (ಮಜ್ಜಿಗೆಯಿಂದ ತಯಾರಿಸಿದ ಸಿಹಿಪಾನಿಯ) ಸುತ್ತ ಮುತ್ತಲ ವಿಸ್ತರಣಗಳಿಗೆಲ್ಲ ಹೆಸರುವಾಸಿಯಾಗಿ, ಸಂಜೆಯಾದರೆ ಹತ್ತಿಪ್ಪತ್ತು ಕಾರುಗಳು ಅವನ ಜೋಪಡಿಯಂಗಡಿಯ ಮುಂದೆ ಸಾಲುಗಟ್ಟಿ ನಿಲ್ಲುತ್ತಿದ್ದವು. ಇದರಿಂದಾಗಿ ಅವನ ವ್ಯಾಪಾರ ಹೆಚ್ಚಿ, ಕೈಲಿ ನಾಲ್ಕು ಕಾಸು ಕೂಡಿ, ಭಗತ್‌ರಾಂ ಹತ್ತಿರದಲ್ಲೇ ವಾಸಕ್ಕೆ ಒಂದು ಮನೆ ಬಾಡಿಗೆ ಹಿಡಿದ.

' ಭಗತ್‌ರಾಂ ಆ ಮನೆಗೆ ಹೋದ ಬಳಿಕಲೇ ನಾನು ಅವರಲ್ಲಿಗೆ ವಾಸಕ್ಕೆ ಹೋಗಿದ್ದು.

' ಅಷ್ಟುದಿನ ಅವನ ಅದೃಷ್ಟ ಸಮುಖವಾಗಿ ಭಗತ್‌ರಾಂನ ಸಂಸಾರದಲ್ಲಿ ಸುಖ ಶಾಂತಿ ನೆಲೆಸಿತು ಗಂಡಹೆಂಡಿರಿಬ್ಬರೂ ಮೈಮುರಿದು ದುಡಿದು ತಮ್ಮ ಮಕ್ಕಳು ಮರಿಗಳನ್ನು ಸಾಕಿಕೊಂಡು ಹಾಯಾಗಿದ್ದರು.

' ಕಷ್ಟದ ದಿನಗಳು ಮುಗಿದು ಸುಖದ ಹೊಸ ದಿನಗಳು ಆರಂಭವಾದವು ಎಂದು ಆ ದಂಪತಿಗಳು ತೃಪ್ತಿಯ ನಿಟ್ಟುಸಿರು ಇಡುವುದರೊಳಗೆ, ಅವರ ಪಾಲಿಗೆ ಮತ್ತೊಂದು ರೀತಿಯಲ್ಲಿ ಶನಿಕಾಟ ಆರಂಭವಾಯಿತು.

' ಈ ಬಾರಿಯ ಪಿಡುಗು ಉಡಾಳ ಹುಡುಗರ ಗುಂಪಿನ ರೂಪದಲ್ಲಿ ಅವನನ್ನು ಕಾಡತೊಡಗಿತು. ಹತ್ತಾರು ಜನ ಹುಡುಗರು ಗುಂಪು ಕೂಡಿಕೊಂಡು, ಭಗತ್‌ರಾಂನನ್ನು ಪೀಡಿಸತೊಡಗಿದರು ಅವನು ವ್ಯಾಪಾರದ ಗದ್ದಲದಲ್ಲಿದ್ದಾಗ, ಗುಂಪು ಅವನ ಅಂಗಡಿಯೊಳಗೆ ನುಗ್ಗಿ ಕೈಗೆ ಸಿಕ್ಕ ತಿಂಡಿ

ಪದಾರ್ಥಗಳನ್ನು ಲೂಟಿ ಮಾಡಿಕೊಂಡು ಹೋಗುವುದು. ಅವನು ಎಚ್ಚರವಾಗಿದ್ದರೆ, ಯಾವ ಮಾಯದಲ್ಲೋ ಬಂದು ಅವನ ತಿಂಡಿಗಳ ಮೇಲೆ ಮಣ್ಣು ಎರಚುವುದು ದೂರದಿಂದಲೇ ಅವನ ಮಜ್ಜಿಗೆ ಕಡೆಯುವ ಮಡಕೆಯನ್ನು ಕಲ್ಲಿನಿಂದ ಹೊಡೆದು ಒಡೆದು ಹಾಕುವುದು, ಹೀಗೆ ದಿನ ಕ್ಕೊಂದು ರೀತಿ ಭಗತ್‌ರಾಂನನ್ನು ಕಾಡತೊಡಗಿತು

'ಒಂದು ಕಡೆಯಲ್ಲಿ ಹೀಗೆ ಅವನನ್ನು ಕಾಡಿದರೆ, ಮತ್ತೊಂದು ಕಡೆ ಅವನ ಅಂಗಡಿಗೆ ಬರುವ ಗಿರಾಕಿಗಳನ್ನು ಕಾಡುತ್ತಿತ್ತು ಆ ಹುಡುಗರ ಗುಂಪು. ಕಾರು ಸೈಕಲ್ಲುಗಳ ಟ್ಯೂಬಿನ ಗಾಳಿ ಬಿಡುವುದು; ಅವರು ತಿಂಡಿ ತಿನ್ನುವಾಗ ಬೇಕೆಂದೇ ಅಲ್ಲಿ ಗದ್ದಲಮಾಡುತ್ತಾ ಧೂಳಾಡುವುದು, ಅನಾಚ್ಯ ಶಬ್ದಗಳನ್ನುಪಯೋಗಿಸಿ ಬೈಯುವುದು ಹೀಗಾಗಿ ಮಾನಿಷ್ಟರು ಅವನ ಅಂಗಡಿಯ ಬಳಿ ಕುಳಿತು ತಿಂಡಿ ತಿನ್ನುವುದು ಕಷ್ಟವಾಯಿತು.

'ಭಗತ್‌ರಾಂ ಆದಷ್ಟು ದಿನ ಆ ಕಾಟವನ್ನು ಬಾಯಿ ಮುಚ್ಚಿಕೊಂಡು ಸಹಿಸಿದ. ಬರಿ ಬೈಗಳನ್ನಾದರೆ ಆತ ಎಷ್ಟು ದಿನವಾದರೂ ಸಹಿಸಬಹು ದಾಗಿತ್ತು. ಆದರೆ ದಿನದಿನವೂ ನಷ್ಟವಾದರೆ ಅದನ್ನು ಆ ಬಡಪಾಯಿ ಹೇಗೆ ಸಹಿಸಿಯಾನು? ಹಾಗೆಂದು ಆ ಹುಡುಗರ ಪುಂಡಾಟವನ್ನು ತಡೆಗಟ್ಟು ವುದೂ ಅವನಿಗೆ ಸಾಧ್ಯವಿರಲಿಲ್ಲ. ಆ ಗುಂಪಿನ ಪುಂಡಾಟ ನಿಲ್ಲಿಸಬೇಕೆಂದರೆ, ಅವನಿಗಿದ್ದುದು ಎರಡು ದಾರಿ, ಒಂದು ಆ ಗುಂಪಿನ ಬಗ್ಗೆ ಪೋಲೀಸಿ ನವರಿಗೆ ದೂರು ಕೊಟ್ಟು, ಅವರ ಸಹಾಯದಿಂದ ಗುಂಪನ್ನು ಮುರಿಯು ವುದು, ಇಲ್ಲವೇ ಎರಡನೆಯ ದಾರಿಯೆಂದರೆ-ಅಲ್ಲಿಂದ ಅಂಗಡಿ ಬದಲಾ ಯಿಸುವುದು ಆದರೆ ಆ ಎರಡೂ ದಾರಿಗಳೂ ಅವನಿಗೆ ಸಾಧ್ಯವಿರಲಿಲ್ಲ.

'ಅವನ ಅಂಗಡಿ ಆಗ ತಾನೇ ಕಣ್ಣು ತೆರೆಯುತ್ತಿತ್ತು. ನೆರೆಹೊರೆ ಯವರಲ್ಲಿ ಅವನ ಪರ ವಹಿಸುವವರು ಯಾರೂ ಇರಲಿಲ್ಲ ಹಾಗೆ ನೋಡಿ ದರೆ ಅವನ ಅಂಗಡಿಯ ಶೀಘ್ರ ಪ್ರಗತಿಯನ್ನು ಕಂಡು ಎಷ್ಟೋ ಜನಕ್ಕೆ ಹೊಟ್ಟೆ ಉರಿಯೇ ಇತ್ತು. ಬೇರೆ ರೀತಿಯಲ್ಲಿ ಅದನ್ನು ಅವರು ತೋರಿಸಿ ಕೊಂಡಿದ್ದರು ಹಾಗಿದ್ದಾಗ ಇನ್ನು ಅವನ ಮಕ್ಕಳ ಮರಿಗಳ ಮೇಲೆ ಪೋಲೀಸಿಗೆ ಫಿರ್ಯಾದು ಕೊಟ್ಟು ಇವನು ಆ ವಿಸ್ತರಣದಲ್ಲಿ ಅಂಗಡಿ ತೆರೆದುಕೊಂಡು ಬಾಳುವುದು ಸಾಧ್ಯವಾದೀತೇ ?

'ಈ ಭಯ, ಅವನೊಂದಿಗೆ ಸ್ವಾಭಾವಿಕವಾಗಿಯೆ ಸಜ್ಜನನಾದ ಭಗತ್‌ರಾಂಗೆ ಮಕ್ಕಳ ಮೇಲೆ ಪೋಲೀಸರಿಗೆ ಫಿರ್ಯಾದು ಕೊಟ್ಟು, ಅವರಿಂದ ಹುಡುಗನನ್ನು ಹೊಡೆಸುವುದಕ್ಕೂ ಮನಸ್ಸಿರಲಿಲ್ಲ.

'ಇನ್ನು ಆ ಸ್ಥಳದಿಂದ ಅಂಗಡಿ ತೆಗೆಯಬೇಕೆಂದರೆ ಅದೂ ಸಾಧ್ಯವಿರಲಿಲ್ಲ. ಬೊಂಬಾಯಲ್ಲಿ ಸಾವಿರಾರು ರೂಪಾಯಿ ಪಗಡಿ ಕೊಟ್ಟಲ್ಲದೆ ಅವನಿಗೆ ಅಂಗಡಿ ಇಡಲು ಸ್ಥಳ ಸಿಗುವುದುಂಟೆ ? ಬೇರೆ ಕಡೆಯೂ ಇಂಥ ಸರಕಾರಿ ಖಾಲಿ ನಿವೇಶನವನ್ನೇ ಹುಡುಕಿಕೊಂಡು ಹೋಗಬೇಕಾಗಿತ್ತು. ಆದರೆ ಬೊಂಬಾಯಲ್ಲಿ ಅವನಂಥ ನಿರಾಶ್ರಿತರು ಲಕ್ಷಾಂತರ ಮಂದಿ. ಭಗತ್‌ರಾಂ ಆ ಜಾಗ ಬಿಟ್ಟರೆ ಸಾಕು ಎಂದು ನೂರಾರು ಜನ ಕಾದಿದ್ದರು. ಹಾಗಿರುವಾಗ ಅಲ್ಲಿಂದ ಅಂಗಡಿ ತೆಗೆದುಕೊಂಡು ಹೋಗುವುದಾದರೂ ಎಲ್ಲಿಗೆ ?

'ಇಂಥ ಇಬ್ಬಂದಿ ಪರಿಸ್ಥಿತಿಯಲ್ಲಿ ಸಿಲುಕಿ ಭಗತ್‌ರಾಂ ದಿನದಿನಕ್ಕೆ ನವೆಯತೊಡಗಿದ ಅಷ್ಟು ದಿನ ನೆಮ್ಮದಿಯಾಗಿದ್ದ ಅವನ ಜೀವನ ಮತ್ತೆ ಒಡಕು ನಾವೆಯಾಯಿತು.

'ಈ ಕಾಲದಲ್ಲಿ ನಾನು ಅವರ ಮನೆಯಲ್ಲೇ ಇದ್ದರೂ, ಆ ಗಂಡ ಹೆಂಡಿರು ತಮ್ಮ ಈ ನೋವಿನ ವಿಷಯವಾಗಿ ಒಂದು ದಿನವಾದರೂ ಬಾಯಿ ಬಿಟ್ಟಿರಲಿಲ್ಲ. ಹೇಗೋ ಸಹಿಸಿಕೊಂಡು ಇದ್ದರು.

'ಕೊನೆಗೆ ಈ ದಿನ ಆತ ವಿಷಯವನ್ನು ತಾನಾಗಿಯೇ ಹೇಳದಿದ್ದರೂ ನನಗೇ ಗೊತ್ತಾಗುವಂಥ ಪ್ರಸಂಗ ಒದಗಿ ಬಂತು.

'ಆ ದಿನ ಭಗತ್‌ರಾಂ ಬೆಳಗ್ಗೆ ಅಷ್ಟು ಹೊತ್ತಿಗೇ ಎದ್ದು, ಹಿಂದಿನ ರಾತ್ರಿ ತಾನು ಮತ್ತು ತನ್ನ ಹೆಂಡತಿ ಮನೆಯಲ್ಲಿ ಮಾಡಿದ ಮಿಠಾಯಿಗಳ ಪರಾತಗಳನ್ನೂ ಹೊತ್ತುಕೊಂಡು ಅಂಗಡಿಯ ಕಡೆಗೆ ಹೊರಟ

'ಆತ ಅಂಗಡಿಗೆ ಹೋದ ಬಳಿಕ ನಾನೂ ನನ್ನ ಸ್ನಾನ ಮುಗಿಸಿ ಟೀ ಕುಡಿಯುತ್ತಾ ಕುಳಿತಿದ್ದೆ. ಅಷ್ಟರಲ್ಲೇ ಭಗತ್‌ರಾಂ ಬರಿದಾದ ತಟ್ಟೆಗಳನ್ನು ಕೈಯಲ್ಲಿ ಹಿಡಿದು ಮನೆಗೆ ಬಂದ. ಮನೆಗೆ ಬಂದಾಗ ಆತನ ತಟ್ಟೆಗಳೆಲ್ಲವೂ ಬರಿದಾಗಿದ್ದುದಷ್ಟೇ ಅಲ್ಲ, ಅವನು ಆ ಬೆಳಗ್ಗೆಯೇ ಉಟ್ಟ ಒಗೆದ ಬಟ್ಟೆಗಳೆಲ್ಲವೂ ಧೂಳುಧೂಪರಿತವಾಗಿ, ಅವನು ಉಟ್ಟ ಪಂಚೆ

ಮುಂಡಿಯ ಹತ್ತಿರ ಹರಿದುಹೋಗಿ, ಅವನ ಮೊಳಕಾಲು ಮೊಳಕೈಗೆ ತರೆದ ಗಾಯಗಳಾಗಿದ್ದವು.

'ಹಾಗೆ ಬಂದ ತನ್ನ ಗಂಡನನ್ನು ಕಂಡ ಅವನ ಹೆಂಡತಿ ಗಾಬರಿ ಬಿದ್ದು 'ಏನಾಯಿತು ?' ಎಂದು ಕೇಳಿದಳು. ಆಕೆಯ ಪ್ರಶ್ನೆಗೆ ಉತ್ತರ ಕೊಡದೆ ಭಗತ್‌ರಾಂ, ಕೈಯಲ್ಲಿದ್ದ ತಟ್ಟೆಗಳನ್ನು ಒಂದು ಕಡೆ ಬಿಸುಟು, ಸುಮ್ಮನೆ ತಲೆಯ ಮೇಲೆ ಕೈಹೊತ್ತು ಕುಳಿತುಬಿಟ್ಟ. ಆತನ ಸ್ಥಿತಿಯನ್ನು ನೋಡಿ ನನಗೂ ಕನಿಕರವಾಗಿ—

"ಏನಾಯಿತು ಭಗತ್‌ರಾಂಜಿ"

'—ಎಂದು ಕೇಳಿದೆ.

'ನನ ಪ್ರಶ್ನೆಗೆ ಉತ್ತರವಾಗಿ ಭಗತ್‌ರಾಂ ನಿಟ್ಟುಸಿರುಬಿಟ್ಟು—

"ಏನು ಹೇಳಲಿ ರಿಟಾಬೇಟಿ. ನಮ್ಮಂಥವರು ಭೂಮಿಯ ಮೇಲೆ ಬದುಕಿರಬಾರದು. ಹಾಳಾದ ದೇವರಿಗಾದರೂ ಕಣ್ಣಿದ್ದಿದ್ದರೆ, ಒಂದು ದಿನ ನಮ್ಮನ್ನು ಕೊಂದು ಸಿಟ್ಟು ತೀರಿಸಿಕೊಳ್ಳುತ್ತಿದ್ದ, ಹೀಗೆ ಜೀವಂತವಾಗಿ ಉಳಿಸಿ ದಿನಕ್ಕೊಂದು ಪರಿ ಕಾಡಿಸುತ್ತಿರಲಿಲ್ಲ"

'—ಎಂದ.

"ಅಷ್ಟು ನಿರಾಶನಾಗುವಂಥದು ಏನಾಯಿತು? ಇದೇನು ಗಾಯ ? ಅಂಗಡಿಗೆ ತೆಗೆದುಕೊಂಡು ಹೋದ ತಿಂಡಿಗಳೆಲ್ಲ ಏನಾದವು ?"

'—ಎಂದು ಕೇಳಿದೆ ನಾನು.

"ಏನಾಗುವುದೇನು ? ಎಲ್ಲಾ ಬೀದಿಗೊಪ್ಪಿಸಿ ಬಂದದ್ದಾಯಿತು."

"ಏಕೆ ?"

"ಏಕೆಂದರೇನು ಹೇಳುವುದು ಬೇಟ. ನನಗೊಂದು ನಾಲ್ಕು ಜನ ಹುಡುಗ ಪಿಶಾಚಿಗಳು ಗಂಟುಬಿದ್ದಿದಾರೆ. ಅವರ ಕಾಟದಲ್ಲಿ ನಾನು ಬದುಕುವುದೇ ಸಾಧ್ಯವಿಲ್ಲ. ಈ ಹಾಳು ಬೊಂಬಾಯಿಗೆ ಬಂದು, ಬದುಕ ಬಹುದು ಎಂದು ನಂಬಿದ್ದಾಯಿತು. ಊಹೂ—ಇಲ್ಲಿ ನಮ್ಮಂಥವರಿಗೆ ಉಳಿಗಾಲವೇ ಇಲ್ಲ"

'—ಎಂದ ಭಗತ್‌ರಾಂ

'ಆತನ ಮಾತು ಕೇಳಿ ನನಗೆ ಆಶ್ಚರ್ಯವಾಯಿತು.

"ಹುಡುಗ ಪಿಶಾಚಿಗಳು ಎಂದರೇನು ಭಗತ್‌ರಾಂಜಿ. ಯಾರು ಆ ಹುಡುಗರು? ಅವರೇನು ಮಾಡಿದರು?'

'—ಎಂದು ಕೇಳಿದೆ ನಾನು.

'ನನ್ನ ಪ್ರಶ್ನೆಗೆ ಉತ್ತರವಾಗಿ ಭಗತ್‌ರಾಂ ಕಳೆದ ಕೆಲವು ತಿಂಗಳುಗಳಿಂದಲೂ ಆ ಹುಡುಗರ ಗುಂಪು ತನಗೆ ಅಕಾರಣವಾಗಿ ಕೊಟ್ಟ ಬಗೆ ಬಗೆಯ ತೊಂದರೆಗಳನ್ನು ವಿವರಿಸಿ—

"ಈ ದಿನ ಬೆಳಗ್ಗೆ ನಾನು ಎದ್ದ ಹೊತ್ತು ಎಂಥ ಹಾಳು ಗಳಿಗೆಯೋ ಏನೋ, ನಾನಿನ್ನು ಮನೆ ಬಿಟ್ಟು ಅಷ್ಟು ದೂರ ಹೋಗುವುದರೊಳಗೇ ಆ ಗುಂಪು ನನಗೆ ಇದಿರಾಯಿತು. ನಾನಂತೂ ಅದನ್ನು ನೋಡಿಯೂ ನೋಡದವನ ಹಾಗೆ ಅಂಗಡಿಯ ಕಡೆ ಹೋಗುತ್ತಿದ್ದೆ ಹಾಗೆ ಹೋಗುತ್ತಿರುವಾಗ, ಆ ಗುಂಪಿನಲ್ಲಿ ಎಲ್ಲರಿಗಿಂತ ಸ್ವಲ್ಪ ಬಲವಾಗಿದ್ದ ಹುಡುಗ, ಓಡಿ ಬಂದು ನನಗೆ ತೊಡರುಗಾಲು ಕೊಟ್ಟು ಬೀಳಿಸಿದ. ನಾನು ಎರಡು ಕೈಗಳಿಂದಲೂ ತಲೆಯ ಮೇಲೆ ಭಾರವಾಗಿದ್ದ ತಟ್ಟೆಗಳನ್ನು ಹೊತ್ತುಕೊಂಡುದರಿಂದ, ನೆಲದ ಮೇಲೆ ಬಲವಾಗಿ ನಿಲ್ಲುವುದೂ ಸಾಧ್ಯವಾಗಲಿಲ್ಲ. ಮುಗ್ಗರಿಸಿ ನೆಲಕ್ಕೆ ಬಿದ್ದೆ, ನಾನು ನೆಲಕ್ಕೆ ಬೀಳುತ್ತಿದ್ದ ಹಾಗೇ ಆ ಹಾಳು ಹುಡುಗರು 'ಸಿಂಧೀ ಸೈತಾನ್' ಎಂದು ಬೈಯುತ್ತಾ, ನಗುತ್ತಾ ನುಗ್ಗಿ ಬಂದು, ನೆಲಕ್ಕೆ ಬಿದ್ದ ತಿಂಡಿ ಪದಾರ್ಥಗಳಲ್ಲ ಕೈಗೆಸಿಕ್ಕಷ್ಟನ್ನು ಹೊತ್ತುಕೊಂಡು, ಉಳಿದದ್ದನ್ನೆಲ್ಲಾ ನೆಲಕ್ಕೆ ತುಳಿದು ಹಾಳು ಮಾಡಿ ಎತ್ತಲೋ ಓಡಿಬಿಟ್ಟರು ಮೂವತ್ತು ರೂಪಾಯಿ ಮಣ್ಣುಪಾಲಾಯಿತು ಬೇಟಿ'

'—ಎಂದ ಭಗತ್‌ರಾಂ

'ಆತ ಹೇಳಿದುದನ್ನೆಲ್ಲಾ ಕೇಳಿ ನನ್ನ ವೈರಕ್ತ ಕುದಿಯಿತು. ಆ ಸಿಟ್ಟಿನಲ್ಲೇ ಕೇಳಿದೆ—

"ಆ ಹುಡುಗರೇನು ಈ ಮೊಹಲ್ಲಾದವರೋ ಅಥವಾ ಬೇರೆ ಕಡೆಯವರೋ?'

"ಎಲ್ಲಾ ಇಲ್ಲೇ ಸುತ್ತುಮೂರಿನ ಮನೆಯ ಮಕ್ಕಳು.'

"ಅವರು ಯಾರೆಂಬುದು ಗೊತ್ತಿದ್ದರೆ, ನೇರವಾಗಿ ಹೋಗಿ ಪೋಲೀಸರಿಗೆ ಫಿರ್ಯಾದು ಕೊಡದೆ, ಹೀಗೆ ಮನೆಹಾಳು ಮಾಡಿಕೊಂಡು

ಸುಮ್ಮನೆ ಬಿಟ್ಟಿರುವುದೇ ? '

' ಪೋಲೀಸರಿಗೆ ಫಿರ್ಯಾದು ಕೊಟ್ಟರೆ ತಾನೇ ಏನಾಗುತ್ತದೆ ಭೇಟಿ? ಎಲ್ಲಾ ಚಿಕ್ಕಪುಟ್ಟ ಹುಡುಗರು ಅವರ ಮೇಲೆ ಫಿರ್ಯಾದು ಕೊಟ್ಟು, ಸುಮ್ಮನೆ ದೊಡ್ಡವರ ದ್ವೇಷ ಕಟ್ಟಿಕೊಂಡ ಹಾಗಾಗುತ್ತದೆ. ಅದಕ್ಕೇ ಹೆದರಿ ಬಾಯಿ ಮುಚ್ಚಿಕೊಂಡಿದ್ದೇನೆ.'

" ಅದೇ ನಿಮ್ಮ ತಪ್ಪು. ಆ ಹುಡುಗರು ಗದ್ದಲ ಮಾಡಿದ ಮೊದಲ ದಿನವೇ ಇಬ್ಬರನ್ನು ಹಿಡಿದು ಕೆನ್ನೆ ಬೆಚ್ಚಗೆ ಮಾಡಿದ್ದರೆ ಇಷ್ಟು ಗರಿಕಟ್ಟಿ ಕೊಳ್ಳುತ್ತಿರಲಿಲ್ಲ. ಇಂಥ ವಿಷಯಗಳಲ್ಲಿ ಸಹನೆ ಬಹು ಅಪಾಯಕಾರಿ. ತುಂಟರಿಗೆ ಇಲ್ಲದ ಧೈರ್ಯ ತಂದುಕೊಡುತ್ತದೆ ನೀವು ಫಿರ್ಯಾದು ಕೊಡಬನ್ನಿ ಅವರೇನು ಮಾಡುತ್ತಾರೋ ನೋಡೋಣ '

'—ಎಂದೆ ನಾನು.

" ಅಂದರೆ ದೊಡ್ಡವರ ದ್ವೇಷ ಕಟ್ಟಿಕೊಳ್ಳಬೇಕಾಗುತ್ತದಲ್ಲಾ '

" ನೀವು ಬಿದ್ದಾಗ, ಆ ಹುಡುಗರು ನಿಮ್ಮ ತಿಂಡಿ ಹಾಳು ಮಾಡಿದಾಗ ಯಾರಾದರೂ ದೊಡ್ಡವರು ನಿಮ್ಮ ಸಹಾಯಕ್ಕೆ ಬಂದರೆ ಭಗತ್‌ರಾಂಜಿ ? '

" ಊಹು '

' — ಭಗತ್‌ರಾಂ ತಲೆಯಲ್ಲಾಡಿಸಿ ಹೇಳಿದ

" ಮತ್ತೆ ಅಂಥ ಹೃದಯಹೀನ ಜನರ ಸ್ನೇಹಕ್ಕೆ, ದ್ವೇಷಕ್ಕೆ ನಾನಾವರೂ ಏಕೆ ಬೆಲೆ ಕೊಡಬೇಕು ಈ ಜಗತ್ತಿನಲ್ಲಿ ಬಡವರಿಗಿರುವುದೆಲ್ಲಾ ಕಾನೂನಿನ ರಕ್ಷಣೆಯೊಂದೆ, ದಯೆ, ಮಾಯೆ, ಧರ್ಮ ಯಾವುದೂ ಬಡವರ ರಕ್ಷಣೆಗೆ ಬರುವುದಿಲ್ಲ. ಏನಾಗುತ್ತದೋ ಆಗಿಹೋಗಲಿ ಬನ್ನಿ '

'—ಎಂದೆ ನಾನು ಸಿಟ್ಟಿನಲ್ಲಿ ಹಟ ಹಿಡಿದು

' ಆ ದಿನ ತನಗಾದ ನಷ್ಟದಿಂದ ಭಗತ್‌ರಾಂಗೂ ತುಂಬಾ ಬೇಸರವಾಗಿತ್ತು. ಆದರಿಂದಾಗಿ ಆತ ಫಿರ್ಯಾದು ಕೊಡಲು ತನ್ನೊಂದಿಗೆ ಬರಲು ಒಪ್ಪಿದರೂ, ಆ ಕಾರ್ಯಕ್ಕೆ ಆತನ ಹೆಂಡತಿಯನ್ನು ಒಪ್ಪಿಸುವುದು ಕಷ್ಟವಾಯಿತು. ಆಕೆ ಹಾಗೆ ಮಾಡಬಾರದೆಂದು ನನಗೇ ಬುದ್ಧಿ ಹೇಳಿದಳು.

' ನಿನಗೆ ತಿಳಿಯದು ರಿಟಾ ಇನ್ನೂ ಚಿಕ್ಕಪ್ರಾಯ ರಕ್ತ ಬಹು ಬೇಗ ಬಿಸಿಯಾಗುತ್ತದೆ ಆ ಹುಡುಗನು ಯಾರ ಮನೆಯವನೊ ಏನೊ.

ಆ ಹುಡುಗನಮೇಲೆ ನಾವು ಕೈ ಮಾಡಿದರೆ, ಆ ಮಕ್ಕಳ ತಾಯಂದಿರು ನಮ್ಮ ಮೇಲೆ ಸಿಟ್ಟಾಗುತ್ತಾರೆ. ಹತ್ತು ಜನರ ಸಿಟ್ಟು ಕಟ್ಟಿಕೊಂಡು ನಾವು ಇಲ್ಲಿ ಬದುಕುವುದು ಸಾಧ್ಯವಾದೀತೇ ?'

'—ಎಂದಳು ಆಕೆ.

'' ಆ ಮಕ್ಕಳ ತಾಯಂದಿರಿಗೆ ನಿನ್ನ ಮೇಲೆ ಸಿಟ್ಟುಮಾಡುವುದು ತಿಳಿದ ಹಾಗೇ, ಅವರ ಮಕ್ಕಳು ಮಾಡುವ ಪುಂಡಾಟ, ತಪ್ಪು ತಿಳಿಯುವುದಿಲ್ಲವೇ ?'

'' ಊಹೂ. ಯಾವ ತಾಯಿಗೂ ತನ್ನ ಮಗು ಮಾಡಿದ ತಪ್ಪು ತಿಳಿಯುವುದಿಲ್ಲ. ತನ್ನ ಮಗು ಏನು ಮಾಡಿದರೂ ಅದು ಹುಡುಗತನದ ಕೆಲಸ ಎಂದೇ ಕಾಣುತ್ತದೆ; ತಪ್ಪು ಎಂದು ತೋರುವುದಿಲ್ಲ. ತಾಯ್ತನದ್ದು ಅಂಥ ಮಂದದೃಷ್ಟಿ. ಅದಕ್ಕೇ ನಾನು ಈ ಹುಡುಗರಿಗೆ ಬುದ್ಧಿ ಕಲಿಸ ಹೋಗಿ ಅವರ ದ್ವೇಷ ಕಟ್ಟಿಕೊಳ್ಳಬಾರದು ಎಂದದ್ದು, ನಿನಗೆ ತಿಳಿಯದು ರಿಟಾ. ಒಂದು ಕೇರಿಯಲ್ಲಿ ಹತ್ತು ಜನ ಗಂಡಸರ ದ್ವೇಷ ಕಟ್ಟಿಕೊಂಡು ಬಾಳಬಹುದು. ಆದರೆ ಇಬ್ಬರು ಹೆಂಗಸರ ಹಗೆ ಕಟ್ಟಿಕೊಂಡು ಸಂಸಾರ ನಡೆಸುವುದು ಅಸಾಧ್ಯ.'

'—ಎಂದು ನನಗೇ ಬುದ್ಧಿ ಹೇಳಿದಳು ಭಗತ್‌ರಾಂನ ಮಡದಿ.

'ಆಕೆಯ ಮಾತು ಬಹಳ ಸತ್ಯವೆಂದು ಭಗತ್‌ರಾಂನೂ ಒಪ್ಪಿಕೊಂಡ. ಅವರೇ ಪೋಲೀಸರಿಗೆ ದೂರು ಕೊಡಲು ಹಿಂಜರಿದ ಮೇಲೆ ನಾನಾದರೂ ಏನು ಮಾಡುವುದು. ಅವರ ಮಾತು ಕೇಳಿ ನನಗೆ ಅವರ ಮೇಲೇ ಸಿಟ್ಟು ಬಂತು.

'' ದೀದೀ ನಿನ್ನಂಥವರು ಬದುವುದಕ್ಕೇ ನಾಲಾಯಖ್ಖು. ಹೀಗೆ ಎಲ್ಲದಕ್ಕೂ ಅಂಜಿ ಕುಳಿತರೆ ನೀವು ಬಾಳ್ವೆ ಮಾಡುವುದು ಹೇಗೆ ?'

'—ಎಂದು ಕೇಳಿದೆ.

'' ನೀನು ಬಡವರಿಗೆ ಕಾನೂನೊಂದೇ ರಕ್ಷಣೆ ಎಂದೆ ಬೇಟಿ ಅದಲ್ಲ, ಬಡವರು ಯಾವುದರಲ್ಲಿ ಗೆಲ್ಲಬೇಕೆಂದರೂ ಪ್ರೀತಿಯಿಂದ, ಸಹನೆಯಿಂದಲೇ ಗೆಲ್ಲಬೇಕು. ಬೇರೆ ದಾರಿಯೇ ಇಲ್ಲ. ಕೋರ್ಟ್, ಕಾನೂನು, ಪೋಲೀಸು ಎಲ್ಲಾ ದುಡ್ಡಿದ್ದವರಿಗೆ. ನನ್ನ ನಿನ್ನಂಥವರಿಗಲ್ಲ.'

'—ಎಂದಳು ಆಕೆ.

" ಹಾಗಂದರೆ ಈಗೇನು ಮಾಡಬೇಕೆನ್ನುತ್ತೀಯ ನೀನು ? '

'—ಆಕೆಯನ್ನೇ ಪ್ರಶ್ನಿಸಿದೆ ನಾನು

" ಏನೋ ಆದದ್ದು ಆಗಿಹೋಯಿತು ನಿನಗೆ ಬಿಡುವಿದ್ದರೆ, ಅವರ ಜೊತೆಯಲ್ಲಿ ಅಂಗಡಿಗೆ ಹೋಗಿ, ಆ ಹುಡುಗರು ಸಿಕ್ಕರೆ, ಅವರನ್ನು ಪ್ರೀತಿಯಿಂದ ಮಾತಾಡಿಸಿ, ಅವರಿಗೆ ನಮ್ಮ ಮೇಲೆ ಏಕೆ ಸಿಟ್ಟೋ ಕೇಳು. ಮಕ್ಕಳಿಗೇನು ತಿಳಿಯುತ್ತದೆ. ಅವೇಕೆ ನಮ್ಮ ಮೇಲೆ ದ್ವೇಷ ಮಾಡುತ್ತವೆ. ಮಿಠಾಯಿಯ ಆಸೆಯೇನೋ ? ಬಾಯಿ ಬಿಟ್ಟು ಕೇಳಿದರೆ ಕೊಡುತ್ತಾರೋ ಇಲ್ಲವೋ ಎಂದೂ ಹೀಗಾಡುತ್ತಿರಬಹುದು. ಅವರಿಗೆ ತಿಳಿಹೇಳಬಾ, ಅಷ್ಟು ಸಾಕು. ಆ ಮೇಲೆ ದೇವರಿಟ್ಟದ್ದಾಗಲಿ '

'—ಎಂದಳು

'ಸಿಟ್ಟಿನ ಕಾವು ಸ್ವಲ್ಪ ಇಳಿದ ಮೇಲೆ ನನಗೂ ಆಕೆಯ ಮಾತು ನಿಜವೇನೋ ಎನಿಸಿ, ಭಗತ್‌ರಾಂಗೆ—

" ನೀವು ಅಂಗಡಿಗೆ ಹೋಗಿ ಭಗತ್‌ರಾಂಜಿ. ನಾನೂ ಬರುತ್ತೇನೆ. ನೋಡೋಣ. ಆ ಹುಡುಗರು ಸಿಕ್ಕಿದರೆ ಹೇಳಿ ನೋಡುತ್ತೇನೆ ಅದಕ್ಕೂ ಸಗ್ಗದಿದ್ದರೆ ಮುಂದಿನ ದಾರಿ ಇದ್ದೇ ಇದೆ '

'—ಎಂದು ಆತನನ್ನು ಅಂಗಡಿಗೆ ಕಳಿಸಿದೆ

'ಆ ಬಡವ ಬಟ್ಟೆ ಬದಲಿಸಿ, ಬರಿಗೈಲಿ ಅಂಗಡಿಯ ಬಾಗಿಲು ತೆರೆಯಲು ಹೊರಟ. ಸ್ವಲ್ಪ ಹೊತ್ತಿನಲ್ಲೇ ನಾನೂ ಆತನನ್ನು ಹಿಂಬಾಲಿಸಿ ಅಂಗಡಿಯ ಬಳಿ ಹೋದೆ

## ೩

'ನಾನು ಭಗತ್‌ರಾಂನ ಮಿಠಾಯಿ ಅಂಗಡಿಯ ಬಳಿ ಹೋದಾಗ ಅಂಗಡಿಯ ಬಳಿ ಹೆಚ್ಚು ಗಿರಾಕಿಗಳು ಯಾರೂ ಇರಲಿಲ್ಲ. ಭಗತ್‌ರಾಂ ನಿತ್ಯವೂ ಆತನಿಗೆ ಹಾಲು ತಂದು ಕೊಡುವ ಭಯ್ಯಾನೊಂದಿಗೆ ಮಾತಾಡುತ್ತಾ ಕುಳಿತಿದ್ದ. ನಾನೂ ಹೋಗಿ, ಅಂಗಡಿಯ ಮುಂದಿನ ಗರಿಯ

ಚಪ್ಪರದಡಿಯಲ್ಲಿ, ಎರಡು ಸೀಮೆಎಣ್ಣೆ ಡಬ್ಬಗಳ ಮೇಲೆ ಹಲಗೆಯನ್ನಿಟ್ಟು ಮಾಡಿದ ಬೆಂಚಿನ ಮೇಲೆ ಕುಳಿತುಕೊಂಡು, ಅಂಗಡಿಯ ಹತ್ತಿರದಲ್ಲಿ ಆ ಹುಡುಗರು ಯಾರಾದರೂ ಕಾಣಿಸುತ್ತಾರೋ ಏನೋ ಎಂದು ನೋಡಿದೆ. ಯಾರೂ ಹುಡುಗರು ಕಾಣಿಸಲಿಲ್ಲ, ಹಾಗೇ ಭಗತ್‌ರಾಂರ ಕೈಲಿ ಮಾತಾಡುತ್ತಾ ಕುಳಿತಿದ್ದೆ

'ನಾನು ಹಾಗೆ ಹತ್ತು—ಹದಿನೈದು ನಿಮಿಷ ಕುಳಿತಿದ್ದ ಬಳಿಕ ಅಂಗಡಿಗೆ ಎದುರುಬದಿಯಲ್ಲಿದ್ದ ಮತ್ತೊಂದು ಮಿಠಾಯಿ ಅಂಗಡಿಯ ಒಳ ಒಬ್ಬ ಹುಡುಗ ಬಂದ. ಆ ಹುಡುಗನಿಗೆ ಹತ್ತು ಹನ್ನೆರಡು ವರ್ಷ ವಯಸ್ಸಿರಬಹುದು. ನೋಡುವುದಕ್ಕೆ ತುಂಬಾ ಲಕ್ಷಣವಾದ ಹುಡುಗ ನಾನು ಆ ಹುಡುಗನ ಕಡೆ ನೋಡುತ್ತಿರುವಾಗಲೇ, ಭಗತ್‌ರಾಂ ನನ್ನ ಕಡೆ ತಿರುಗಿ—

''ರಟಾಬೇಟಿ—ಆ ಹುಡುಗನೇ ನೋಡು. ಆ ಪುಂಡರ ಗುಂಪಿನ ಮುಂದಾಳು.

'—ಎಂದ.

'ಆ ಹುಡುಗನನ್ನು ನೋಡಿ, ನನಗೇಕೋ ಭಗತ್‌ರಾಂನ ಮಾತನ್ನು ನಂಬುವದು ಅಸಾಧ್ಯವಾಯಿತು. ಭಗತ್‌ರಾಂ 'ಆ ಹುಡುಗ ಪುಂಡರ ಗುಂಪಿನ ಮುಂದಾಳು' ಆದರೆ ಹುಡುಗ ಮಾತ್ರ ನೋಡುವುದಕ್ಕೆ ಸ್ವಲ್ಪವೂ ಹಾಗೆ ಕಾಣುತ್ತಿರಲಿಲ್ಲ.

'' ಛೆ ! ಆ ಹುಡುಗ! ಎಲ್ಲಿಯಾದರೂ ಉಂಟೆ ? '

' —ಎಂದೆ.

''ನಿಜವಾಗಿಯೂ ಬೇಟಿ. ಅವನೇ ಈ ಗುಂಪಿನ ಮುಂದಾಳು ನೋಡುವುದಕ್ಕೇನೋ ಬಹು ಸಾಭ್ಯಸ್ತನಾಗಿ ಕಾಣುತ್ತಾನೆ ಆದರೆ ಶುದ್ಧ ಪಿಶಾಚಿ. ನನ್ನ ಅಂಗಡಿಯಲ್ಲಾಗುವ ಗದ್ದಲವೆಲ್ಲವೂ ಅವನದೆ ಅವನಿಲ್ಲ ದಿದ್ದರೆ ಯಾವ ಗದ್ದಲವೂ ಆಗುವುದಿಲ್ಲ ಅವನಿದ್ದರೆ ನನ್ನ ಜೀವನಕ್ಕೆ ಒಂದು ಗಳಿಗೆಯೂ ವಿಶ್ರಾಂತಿ ಇರುವುದಿಲ್ಲ ಹತ್ತು ನಾಗರಹಾವು ಹಾಕಿ. ಆ ಹುಡುಗನೊಬ್ಬನನ್ನು ದೇವರು ನಿರ್ಮಾಣ ಮಾಡಿದಾನೆ. ಸುಳ್ಳಾಡಿದರೆ ನನ್ನ ಕಣ್ಣು ಹೋಗಲಿ.'

'—ಎಂದ ಭಗತ್‌ರಾಂ.

'ಆತ ಅಷ್ಟು ಹೇಳಿದ ಬಳಿಕ ನನಗೆ ಆತನ ಮಾತು ಸುಳ್ಳು ಎಂದು ಹೇಳುವುದಾಗಲಿಲ್ಲ

'' ಆ ಹುಡುಗ ಯಾರು ಗೊತ್ತೆ ? '

'—ಎಂದು ಕೇಳಿದೆ.

'' ಆ ಮಿಠಾಯಿ ಅಂಗಡಿಯವನ ಮಗನಿರಬೇಕು. ಅಷ್ಟಕ್ಕಿಂತ ಹೆಚ್ಚಾಗಿ ನನಗೇನೂ ತಿಳಿಯದು. ಅಂತೂ ಆ ಅಂಗಡಿಯ ಹತ್ತಿರವೇ ಬಹಳ ಇರುತ್ತಾನೆ.'

'—ಎಂದ ಭಗತ್‌ರಾಂ.

' ಆತ ಹೇಳಿದುದನ್ನು ಕೇಳಿ ನನಗೇನೋ ಅನುಮಾನವಾಯಿತು. ಅದನ್ನು ಪರಿಹರಿಸಿಕೊಳ್ಳಲು ಕೇಳಿದೆ—

'' ಆ ಮಿಠಾಯಿ ಅಂಗಡಿ ನೀನು ಬರುವುದಕ್ಕಿಂತ ಮೊದಲಿನಿಂದಲೂ ಇತ್ತೆ ಭಗತ್‌ರಾಂಜಿ ? '

'' ಹೂ. ಈ ಕೇರಿಗೆ ಬಹಳ ಹಳೆಯ ಅಂಗಡಿ ಅದು.'

'' ನೀವಿಲ್ಲಿ ಅಂಗಡಿ ಇಟ್ಟ ಮೇಲೆ ಬಹುಶಃ ಆತನ ವ್ಯಾಪಾರಕ್ಕೆ ಪೆಟ್ಟು ಬಿದ್ದಿರಬೇಕು ಅಲ್ಲವೇ ? '

'' ಏನೋ ಹೇಗೆ ಹೇಳಲಿ ? ಈ ಮಿಠಾಯಿ ವ್ಯಾಪಾರ ವಿಚಿತ್ರವಾದುದ್ದು ಒಂದು ಅಂಗಡಿಯ ಪದಾರ್ಥ ನಾಲಗೆಗೆ ರುಚಿಸಿದ ಮೇಲೆ ಬೇರೆಯವರು ಅಮೃತವನ್ನೇ ಕೊಟ್ಟರೂ ಅದು ಸಪ್ಪೆಯಾಗಿ ಕಾಣುತ್ತದೆ. ಆದ್ದರಿಂದ ಹತ್ತು ಅಂಗಡಿಗಳಿದ್ದರೂ ನಮ್ಮ ಅಂಗಡಿಯ ಗಿರಾಕಿ ಬೇರೆ ಕಡೆಗೆ ಹೋಗುವುದಿಲ್ಲ. ಅವರಿಗಾಗುವ ವ್ಯಾಪಾರ ಅವರಿಗಾಗುತ್ತದೆ. ನಮಗಾಗುವ ವ್ಯಾಪಾರ ನಮಗಾಗುತ್ತದೆ ಇರಲಿ–ಆ ಮಾತೇಕೆ ಬಂತು ಈಗ ? '

'—ನನ್ನ ಪ್ರಶ್ನೆಯೇ ಅರ್ಥವಾಗದವನಂತೆ ಕೇಳಿದ ಭಗತ್‌ರಾಂ

'' ಏನೂ ಇಲ್ಲ. ನಿಮ್ಮಿಂದ ತನ್ನ ವ್ಯಾಪಾರ ಕಡಮೆಯಾಯಿತೆಂಬ ಹೊಟ್ಟೆ ಉರಿಗೆ ಆತನೇ ಹಾಗೇನಾದರೂ ಮಾಡಿಸುತ್ತಿದ್ದಾನೋ ಏನೋ ಅನಿಸಿತು ಅದಕ್ಕೆ ಕೇಳಿದೆ.'

"ಛಿ ! ಎಲ್ಲಾದರೂ ಉಂಟೆ ? ಮನುಷ್ಯರಾದವರು ಯಾರೂ ಮಕ್ಕಳಿಗೆ ಅಂಥ ಕೆಟ್ಟ ವಿದ್ಯೆ ಕಲಿಸುವುದಿಲ್ಲ. ಇನ್ನು ಹಾಗೆ ಮಾಡುತ್ತಿದ್ದರೆ 'ಬೇಡ' ಎಂತಾರೇ ವಿನಾ, ತಾವೇ ಅಂಥ ಕೆಲಸ ಮಾಡಿಸುವುದಿಲ್ಲ.'

"ಹಾಗಾದರೆ, ತನ್ನ ಹುಡುಗನ ಪುಂಡತನ ಆತನಿಗೆ ತಿಳಿಯದು ಎನ್ನುತ್ತೀರಾ ?'

"ಏನೋ ಭಗವಂತನಿಗೆ ಗೊತ್ತು.'

'—ಎಂದ ಭಗತ್‌ರಾಂ.

'ನಾವಿಬ್ಬರೂ ಮಾತಾಡುತ್ತಿದ್ದುದನ್ನು ಆ ಹುಡುಗ ಕಿಸಿಕಣ್ಣಿನಿಂದ ನೋಡುತ್ತಲೇ ನಿಂತಿದ್ದು, ಕಡೆಗೆ ನಮ್ಮ ಅಂಗಡಿಯ ಕಡೆ ನೋಡಿ ಉಗಿದು, ಏನೋ ಒಟಗುಟ್ಟಿಕೊಳ್ಳುತ್ತಾ ಅಂಗಡಿಯೊಳಗೆ ಹೋದ ಅವರು ಅಂಗಡಿಯ ಕಡೆ, ನಮ್ಮ ಕಡೆ ನೋಡಿಕೊಂಡು ಹೋದ ರೀತಿಯಲ್ಲಿ, ಆ ಹುಡುಗನಿಗೆ ನಮ್ಮ ಮೇಲೆ ಏನೋ ಭಯಂಕರ ದ್ವೇಷವಿದ್ದಂತೆ ತೋರಿತು. 'ಇರಲಿ, ಮಾತನಾಡಿಸಿನೋಡೋಣ' ಎಂದುಕೊಂಡು, ಭಗತ್‌ರಾಂನ ಕೈಲಿ ಅಷ್ಟು ತಿಂಡಿ ಕಟ್ಟಿಸಿಕೊಂಡು, ನಾನು ಹಾಗೇ ಆ ಹುಡುಗನಿದ್ದ ಅಂಗಡಿಯ ಮುಂದೆ ಹೋಗಿ, ಅಷ್ಟು ದೂರದಲ್ಲಿದ್ದ ವೃತ್ತ ಪತ್ರಿಕೆಗಳನ್ನು ಮಾರುವ ಅಂಗಡಿಯ ಬಳಿ ನಿಂತುಕೊಂಡೆ.

'ವೃತ್ತ ಪತ್ರಿಕೆಯ ಅಂಗಡಿಯ ಬಳಿ ನಾನು ಹತ್ತು ನಿಮಿಷ ಕಾದ ಬಳಿಕ ಆ ಹುಡುಗ ನನ್ನ ಹತ್ತಿರ ಬರುವವರೆಗೂ ನಾನು ಸುಮ್ಮನಿದ್ದು, ಹತ್ತಿರ ಬಂದಾಗ—

"ಭೈ ಥೋಡಾ ಇದರ್ ಆವ್' (ತಮ್ಮಾ ಸ್ವಲ್ಪ ಹೀಗೆ ಬಾ)

'—ಎಂದು ಕೂಗಿದೆ.

'ನನ್ನ ಕೂಗು ಕೇಳಿದ ಆ ಹುಡುಗ ಹಾಗೇ ಗಕ್ಕನೆ ನಿಂತು ನನ್ನ ಕಡೆ ತಿರುಗಿ ದುರುಗಟ್ಟಿ ನೋಡಿದ. ನನ್ನ ಕಡೆ ನೋಡಿದ ಅವನ ಕಣ್ಣುಗಳಲ್ಲಿ ಏನೋ ಭಯ, ಸಂಶಯ ಸಿಟ್ಟು—ನಿಜ, ಸಿಟ್ಟೋ—ಹೊಳೆಯುತ್ತಿದ್ದವು. ಅದನ್ನು ಕಂಡು ನನಗೆ ನಗುಬಂತು. ನಗುತ್ತಲೇ—

"ನಿನ್ನನ್ನೇ ಕರೆದದ್ದು, ಏನೂ ಹೆದರಬೇಡ, ಬಾ'

'—ಎಂದೆ.

‘ ನಾನು ‘ಹೆದರಬೇಡ’ ಎಂದದ್ದನ್ನು ಕೇಳಿ ಆ ಹುಡುಗ ಹೆಡೆ ತುಳಿದ ಹಾವಿನಂತೆ ಸೆಡೆದುನಿಂತು, ನನ್ನತ್ತಲೇ ದುರುಗಟ್ಟಿ ನೋಡಿ, ಹಾಗೆ ನನ್ನ ಹತ್ತಿರ ಬಂದು—

“ ಹೆದರಿಕೆ—ನನಗೆ ? ನಿಮ್ಮಪ್ಪಂದೂ ಭಯ ಇಲ್ಲ, ನಾನು ಯಾರೂಂತ ತಿಳುಕೊಂಡ್ಯೇ ಥತ್–ಸಿಂಧಿ ಸೂಳೆ.’

‘—ಎಂದ ನನ್ನತ್ತಲೇ ಉಗಿದು.

‘ ಆ ಹುಡುಗನ ಮಾತು ಕೇಳಿ ನನಗೆ ಕಾಣದೆ ಬೆಂಕಿಯುನ್ನು ತುಳಿದಂತಾಯಿತು. ಆ ಮಾತಾಡಿದ ಗಳಿಗೆಯಲ್ಲಿ ಆ ಹುಡುಗ ನನ್ನ ಕಣ್ಣಿಗೆ ಹುಡುಗನಾಗಿ ಕಾಣದೆ, ಆ ರೂಪು ಧರಿಸಿದ ಜೀವಂತದ್ವೇಷದ ಮೂರ್ತಿಯಾಗಿ ಕಂಡ.’

‘ಆ ಹುಡುಗ ನನ್ನನ್ನು ‘ಸೂಳೆ’ ಎಂದದ್ದನ್ನು ಕೇಳಿ ಅಂಗಡಿಯ ಬಳಿ ನಿಂತ ಒಂದಿಬ್ಬರು ನನ್ನ ಕಡೆ ನೋಡಿ ಕಿಸಿ ಕಿಸಿ ನಕ್ಕರು. ಆ ಹುಡುಗನ ಮಾತಿಗಿಂತಲೂ ಹೆಚ್ಚಾಗಿ, ಅವರ ನಗೆಯನ್ನು ಕೇಳಿ ನನಗೆ ಸಿಟ್ಟುಬಂತು. ಆ ಸಿಟ್ಟಿನಲ್ಲೇ—

“ ಹಾಗೆಲ್ಲಾ ನಾಲಗೆ ಸಡಿಲ ಬಿಟ್ಟು ಮಾತಾಡಿದರೆ ಹಲ್ಲು ಉದುರಿಯಾವು ಹುಷಾರ್ ! ’

‘—ಎಂದೆ.

‘ ಆದರೆ ನನ್ನ ಸಿಟ್ಟಾಗಲಿ, ಬೆದರಿಕೆಯ ಮಾತಾಗಲಿ ಆ ಹುಡುಗನ ಮೇಲೆ ಏನೂ ಪರಿಣಾಮ ಮಾಡಲಿಲ್ಲ. ಅದಕ್ಕೆ ಪ್ರತಿಯಾಗಿ ಮತ್ತಷ್ಟು ಉದ್ಧಟನಾದ.

“ ಒಂದುಸಲ ಏನು, ಸಾವಿರ ಸಲ ಅನ್ತೀನಿ ಅದೇನು ಮಾಡ್ತೀಯೋ ಮಾಡು, ಇಲ್ಲೇ ನಿನ್ನ ಹುಟ್ಟಡಗಿಸಿಬಿಟ್ಟೇನು ನಾನು ಯಾರೂಂತ ತಿಳಿದುಕೊಂಡೆ–ಮಧುಪಾರಕ್ ! ಹಾಗೆಲ್ಲಾ ಹೆದರಿ ಓಡಿ ಹೋಗೋಕೆ ನಾನೇನು ಸಿಂಧಿ ನಾಮುದಾರ್ ಅಂತ ತಿಳಿಕೊಂಡ್ಯಾ ? ಸಾಬರಕೈಲಿ ಏಟುತಿಂದು, ಊರು ಬಿಟ್ಟು ಬಂದದ್ದು ಮರೆತುಹೋಯ್ತೇ?’

‘ ಹೀಗೆ ಏನೇನೋ ವಾಚಾಮಗೋಚರವಾಗಿ ಮಾತನಾಡಿದ. ನಿಂತಿದ್ದವರಾರಿಗೂ ಆ ಹುಡುಗನ ಕೆನ್ನೆಗೆ ಹೊಡೆದು ಬುದ್ಧಿ ಕಲಿಸಬೇಕು

ಎನಿಸಲಿಲ್ಲ. ಅದಕ್ಕೆ ಬದಲಾಗಿ ಅವನಿಗೆ ಉಚಿತ ಮನೋರಂಜನೆಯ ಅವಕಾಶದೊರೆತಂತಾಗಿ ನಗುತ್ತಾ ನಿಂತಿದ್ದರು ಅದನ್ನು ಕಂಡು ನನಗೇನೋ ತಡೆಯಲಾಗಲಿಲ್ಲ, ಆ ಹುಡುಗನಿಗೆ ಬುದ್ಧಿ ಕಲಿಸಬೇಕೆಂದು ಮುಷ್ಟಿ ಬಿಗಿದು ಹತ್ತಿರ ಸರಿದೆ. ಆ ಹುಡುಗ ಥಂಗನೆ ಹಿಂದಕ್ಕೆ ಹಾರಿ, ರಸ್ತೆಯ ಬದಿಯಲ್ಲಿದ್ದ ಕಲ್ಲೊಂದನ್ನು ಕೈ ತೆಗೆದು ಕೊಂಡು—

'' ಸಿಂಧೀಗಳನ್ನೆಲ್ಲಾ ಬೊಂಬಾಯಿ ಬಿಟ್ಟು ಓಡಸ್ದೇ ಹೋದ್ರೆ ಕೇಳು ಊರೆಲ್ಲಾ ಹಾಳುಮಾಡಿ, ನನ್ನ ಹೊಡ್‌ಯೋಕೆ ಬರ್‍ತೀಯಾ, ಎಲ್ಲಿ ಬಾ ನೋಡೋಣ '

'—ಎಂದವನೇ ಕಲ್ಲನ್ನು ನನ್ನತ್ತ ಬೀಸಿದ

' ಕಲ್ಲು ಮಿಂಚಿನ ವೇಗದಲ್ಲಿ ನನ್ನತ್ತ ಹಾರಿಬಂದು, ಸಿಟ್ಟಿನಲ್ಲಿ ನನ್ನಗದು ತಿಳಿಯಲಿಲ್ಲ. ನನಗದು ತಿಳಿದಾಗ ಕಲ್ಲು ನನ್ನ ಹಣೆಯನ್ನಪ್ಪಳಿಸಿ, ಕಲ್ಲು ಬಿದ್ದ ಕಡೆ ಇಷ್ಟುದಪ್ಪ ಬುಗುಲೆ ಎದ್ದು ರಕ್ತ ಸೋರಲಾರಂಭಿಸಿತ್ತು. 'ಹಾ' ಎಂದು ಕೆಳಗೆ ಕುಳಿತೆ.

'' ಇನ್ನೊಂದ್ಸಲ ತನ್ನ ತಂಟೆಗೆ ಬರಬೇಕಾದ್ರೆ ಹುಷಾರಾಗಿರು'

'—ಎಂದು ಹೇಳಿ ಆ ಹುಡುಗ ಅಲ್ಲಿಂದ ಯಾವುದೋ ಗಲ್ಲಿಗೆ ಬಿದ್ದು ಓಡಿ ಹೋದ.

' ಅದುವರೆಗೂ ನಮ್ಮಿಬ್ಬರ ಮಾತು ಕೇಳಿ ನಗುತ್ತಾ ನಿಂತಿದ್ದ ಜನ, ಆಗ ನನ್ನ ಬಳಿ ಬಂದರು. ತನ್ನ ಅಂಗಡಿಯ ಬಳಿ ಇದ್ದ ಭಗತ್‌ರಾಂ ಕೂಡಾ ನೋಡಿರಬೇಕು 'ಕ್ಯಾಹೋಗಯಾ' ಎಂದು ಕೂಗಿಕೊಳ್ಳುತ್ತಾ ಓಡಿ ಬಂದ, ಆದರೇನು ಸಾರ್ಥಕ? ಅಲ್ಲಿದ್ದವರು ಯಾರಿಗೂ ನನ್ನ ವಿಷಯದಲ್ಲಿ ಸಹಾನುಭೂತಿ ಇರಲಿಲ್ಲ ಒಬ್ಬಿಬ್ಬರು ಸಹಾನುಭೂತಿಯ ಮಾತಾಡಿದವರೂ, ಹಾಗೆ ಮಾತಾಡಿಕೊಂಡು ಹೋದರೇ ಹೊರತು, ಹೆಚ್ಚಿನ ಸಹಾಯ ಮಾಡಲು ನಿಲ್ಲಲಿಲ್ಲ.

' ಗದ್ದಲ ನಡೆದುದು ಅಂಧೇರಿಯ ರೈಲ್ವೆನಿಲ್ದಾಣಕ್ಕೆ ಸಮೀಪದಲ್ಲಿಯೇ, ಆದುದರಿಂದ ಅಲ್ಲಿ ಗುಂಪು ಕಲೆತುದನ್ನು ಕಂಡು, ಅಲ್ಲೇ ಚೌಕಿಯಲ್ಲಿದ್ದ ಕಾನ್‌ಸ್ಟೇಬಲ್ ಗುಂಪಿನ ಬಳಿ ಬಂದು, ಗಾಯಗೊಂಡ ನನ್ನನ್ನು ನೋಡಿ 'ಏನಾಯಿತು' ಎಂದು ವಿಚಾರಿಸಿದಾಗ, ನಾನು ನಡೆದು

ದೆಲ್ಲವನ್ನೂ ತಿಳಿಸಿದೆ. ಆತ ಗುಂಪಿನಲ್ಲಿದ್ದವರನ್ನು ನನ್ನ ಮಾತು ನಿಜವೇ ಎಂದು ಕೇಳಿದ. ಕೆಲವರು 'ನಾವೇನೂ ಕಾಣೆವು' ಎಂದು ಹೇಳಿ ಜಾರಿ ಕೊಂಡರು. ಇನ್ನೊಂದಿಬ್ಬರು 'ಇವಳೇ ಆ ಹುಡುಗನನ್ನು ಕೆಣಕಿದಳು' ಎಂದು ಹೇಳಿದರು ಇನ್ನೊಂದಿಬ್ಬರು ಈ ಹಾಳು ಸಿಂಧಿಗಳೇ ಇಷ್ಟು ಇದ್ದಲ್ಲಿ ಬೆಂಕಿ ಹಚ್ಚುತ್ತಾರೆ' ಎಂದು ಬೈದುಕೊಂಡು ಹೋದರು. ಅಷ್ಟ ಕ್ಕಿಂತ ಹೆಚ್ಚಾಗಿ ನನ್ನ ಪರ ವಾದಿಸುವವರು ಅಲ್ಲಿ ಯಾರೂ ಕಾಣಲಿಲ್ಲ

'ಅದನ್ನು ಕಂಡು ನನಗೆ ಇಡೀ ಗುಂಪಿನ ಮೇಲೇ ಹೇಸಿಗೆಯಾಗಿ, ರಚ್ಚು ಹುಟ್ಟಿ, ಕಾನ್ಸ್ಟೇಬಲ್‌ನ ಜೊತೆಯಲ್ಲಿ ಪೋಲೀಸ್ ಸ್ಟೇಷನ್‌ಗೆ ಹೋಗಿ, ಆ ಹುಡುಗನ ಮೇಲೆ ಫಿರ್ಯಾದು ಕೊಟ್ಟು ಬಂದೆ

'ಇದು ನನ್ನ ಹಣೆಯ ಮೇಲಿನ ಗಾಯದ ಕಥೆ ವಾಸಂತೀ ಬಹೆನ್. ನಾನು ಸಿಂಧಿಯಾಗಿ ಹುಟ್ಟಿದ ಪಾಪಕ್ಕೆ ಪಡೆದ ಬಹುಮಾನ, ನಮ್ಮ ಜನ, ಇಲ್ಲಾದರೂ ನಮಗೆ ಆದರ ಸಿಗಬಹುದು ಎಂದು ನಂಬಿ ಬಂದುದಕ್ಕೆ ದೊರೆತ ಸ್ವಾಗತ.'

'ಬರಬಾರದಾಗಿತ್ತು ವಾಸಂತೀ ಬಹೆನ್, ನಾವು ಹಿಂದೂಸ್ಥಾನಕ್ಕೆ ನಮ್ಮ ದೇಶ ಎಂದು ನೆಚ್ಚಿಕೊಂಡು ಬರಬಾರದಾಗಿತ್ತು. ನಮ್ಮವರಿಂಗಲೇ ಇಂಥ ತಾತ್ಸಾರಕ್ಕೆ ಗುರಿಯಾಗುವುದಕ್ಕಿಂತ, ಅಲ್ಲೇ ಕೊನೆಯ ಗಳಿಗೆಯ ವರೆಗೂ ಹೋರಾಡಿ ಕಟುಕನ ಕೈಗತ್ತಿಗೆ ಬಲಿಯಾಗಿದ್ದರೆ ಲೇಸಾಗುತ್ತಿತ್ತು'

'—ಎಂದಳು ರಿಟಾ ತನ್ನ ಗಾಯದ ಕಥೆಯನ್ನು ಮುಗಿಸಿ.

'ಆಕೆ ಹೇಳಿದುದನ್ನು ಕೇಳಿ ನನಗೆ ಕರುಳನ್ನು ಹಿಸುಕಿದಷ್ಟು ವ್ಯಥೆಯಾಯಿತು.

"ಹೋಗಲಿ ಬಿಡು ರಿಟಾ. ಯಾರೋ ಒಬ್ಬ ಪೋಲಿ ಹುಡುಗನ ಮಾತಿಗೆ ಇಷ್ಟು ದೊಡ್ಡ ಅರ್ಥದ ಬೆಲೆ ಕೊಡಬಾರದು. ಆ ಹುಡುಗ ನಿಮಗೆ ಕೆಟ್ಟ ಮಾತು ಆಡಿದರೆ, ಅದು ದೇಶದ ಮಾತೆಂದು ಏಕೆ ಭ್ರಮಿಸು ತ್ತೀಯ. ಇಲ್ಲಿಯ ಜನ, ಸರ್ಕಾರ ನಿಮಗಾಗಿ ಏನೂ ಮಾಡಿಲ್ಲ? ಕೋಟ್ಯಾಂತರ ಹಣವನ್ನು ನಿಮ್ಮ ಪುನರ್ವಸತಿಗೆಂದು ವ್ಯಯಿಸು ತ್ತಿಲ್ಲವೇ? '

'—ಎಂದು ನಾನು ಅವಳಿಗೆ ಸಮಾಧಾನ ಹೇಳಿದೆ.

' ಅದಕ್ಕೆ ರಿಟಾ—

" ನಿನಗೆ ತಿಳಿಯದು ವಾಸಂತೀ ಬಹೆನ್, ಸರಕಾರ ಮಾಡುತ್ತಿರುವು ದೆಲ್ಲವೂ ಸರಕಾರೀ ಕೆಲಸ. ಜನಕ್ಕದು ಬೇಕಿಲ್ಲ. ಜನರಲ್ಲಿ ನಮ್ಮ ಬಗ್ಗೆ ಎಷ್ಟು ಅಪನಂಬಿಕೆ, ತಾತ್ಸಾರ, ಸಿಟ್ಟು ಹುದುಗಿದೆಯೆಂಬುದನ್ನು ನೀನ ರಿಯೆ. ಆ ನೋವು ಅನುಭವಿಸಿದವರಿಗೇ ಗೊತ್ತು.'

'—ಎಂದು ರಿಟಾ ಆ ಮಾತನ್ನು ಮುಂದುವರಿಸದೆ ಹೊರಟು ಹೋದಳು.

# ಮತ್ತೆ ಮಧುಪಾರಕ್

# ೧

‘ ರಿಟಾ ಹೇಳಿದುದನ್ನು ಕೇಳಿ ನನ್ನ ಹೃದಯಕ್ಕೆ ಅಪಾರ ವ್ಯಥೆಯಾಗಿತ್ತು ರಾವ್. ಅವಳಿಗೆ ಹಾಗಾಗಬಾರದಾಗಿತ್ತು ನಿಜ. ಆದರೆ ಹುಚ್ಚು ಹುಡುಗಿ, ಆ ಮಾತಿಗೆ ಅಷ್ಟು ಬೆಲೆ ಕೊಟ್ಟು, ತನ್ನ ಮನಸ್ಸನ್ನೂ ಕಹಿಮಾಡಿಕೊಳ್ಳಬೇಕೆ ಎನಿಸಿತ್ತು. ಆದರೆ ಅವಳಿಗೆಬುದ್ಧಿವಾದ ಹೇಳುವುದಾದರೂ ಹೇಗೆ ? ಹೇಳುವುದಾದರೆ ಆ ಕೆಲಸಕ್ಕೆ ನಮಗಿಂತ ಡಾಕ್ಟರೇ ಸರಿ ಎಂದುಕೊಂಡು ಆ ಸಂಜೆ ಡಾಕ್ಟರು ಕ್ಲಿನಿಕ್‌ಗೆ ಬಂದಾಗ, ಅವರಿಗೆ ನಡೆದುದೆಲ್ಲವನ್ನೂ ತಿಳಿಸಿದೆ.

‘ ರಿಟಾಗೆ ಆದುದನ್ನು ಕೇಳಿ ಡಾಕ್ಟರ ಮನಸ್ಸಿಗೂ ತುಂಬಾ ನೋವಾಯಿತು. ಆದರೂ ಛೆ, ಛೆ, ಹಾಗಾಗಬಾರದಾಗಿತ್ತು. ಎಂದರು ಆಗ ನಾನು—

“ ಡಾಕ್ಟರ್ ನೀವು ರಿಟಾಗೆ ಸ್ವಲ್ಪ ಸರಿಯಾಗಿ ಹೇಳಬೇಕು. ಅವಳ ವಿಕೃತ ಬುದ್ಧಿ (Warped mind) ಗೆ ಆ ಹುಡುಗನ ಮಾತು ದೇಶದ ಮಾತು ಎನಿಸಿದೆ. ಅದು ಅಲ್ಲ ಎಂದು ತಿಳಿಹೇಳಬೇಕು ’

‘—ಎಂದೆ

‘ ಅದಕ್ಕೆ ಡಾಕ್ಟರು—

“ ನಿನಗೆ ತಿಳಿಯದು ವಾಸಂತೀ, ರಿಟಾಳ ಮಾತು ನೊಂದ ಹೃದಯಕ್ಕಾದ ತೀವ್ರ ಆಘಾತದಿಂದ ಮೂಡಿ ಬಂದದ್ದಾದರೂ ಅವರಲ್ಲಿ ಸತ್ಯಾಂಶವಿಲ್ಲದೆ ಇಲ್ಲ. ಜನಕ್ಕೆ ಸಿಂಧಿಗಳ ವಿಷಯದಲ್ಲಿ ಅಸಮಾಧಾನವಿರುವುದು ಸುಳ್ಳಲ್ಲ, ಆ ಮಾತನ್ನು ನಾನೂ ಹತ್ತಾರು ಜನ—ಜವಾಬ್ದಾರಿಯುತ ಮನುಷ್ಯರ ಬಾಯಿಂದಲೇ ಕೇಳಿದ್ದೇನೆ ’

‘—ಎಂದರು.

‘ ಡಾಕ್ಟರೇ ಬಾಯಿಬಿಟ್ಟು ಹಾಗೆ ಹೇಳಿದರೂ ನನಗೇಕೋ ಆ ಮಾತನ್ನು ನಂಬುವುದಾಗಲಿಲ್ಲ.

"ಎಲ್ಲಿಯಾದರೂ ಉಂಟೆ ಡಾಕ್ಟರ್? ನೊಂದು ಬಂದ ಜನರನ್ನು ಹೀಗೆ-ಪಶುಗಳ ಹಾಗೆ ಕಾಣುವಷ್ಟು ಕ್ಷುಲ್ಲಕರೇ ನಮ್ಮ ಜನ'

'—ಎಂದೇ ಕೇಳಿದೆ.

"ನಿನಗೆ ಗೊತ್ತಿಲ್ಲ. ಇರುವಿಕೆಯ ಹೋರಾಟ (Struggle for Existance) ತಾನು ಬದುಕಬೇಕೆಂಬ ಬಯಕೆ, ಮನುಷ್ಯರನ್ನು ಎಂಥ ಪಶುವಾಗಿ ಮಾತನಾಡಿಸಬಲ್ಲರು ಎಂಬುದು ನಿನಗೆ ತಿಳಿಯದು. ಅದಕ್ಕೇ ಇನ್ನೂ ಹೈಸ್ಕೂಲು ಹುಡುಗಿಯ ಹಾಗೆ ಮಾತಾಡುತ್ತೀಯ. ನಮ್ಮ ಜನರ ತೋರಿಕೆಯ ಶಾಂತಜೀವನದ ಅಡಿಯಲ್ಲಿ ಎಂಥೆಂಥ ವಿಷ ಸುಳಿಗಳು ಸುತ್ತುತ್ತಿವೆ ಗೊತ್ತೆ?'

"ಇರಬಹುದು ಡಾಕ್ಟರ್. ಆದರೆ ಅದಕ್ಕೂ ಇದಕ್ಕೂ ಎಲ್ಲಿಯ ಸಂಬಂಧ?'

"ಸಂಬಂಧವಿದೆ ವಾಸಂತೀ.'

"ಏಕೋ ನಾನು ನಂಬಲಾರೆ ಡಾಕ್ಟರ್?'

"ನನ್ನ ಮಾತು ನಂಬದೆ ಹೋದರೆ, ಈ ವಿಷಯವನ್ನೇ 'ಟೆಸ್ಟ್ ಕೇಸ್' (Test case) ಆಗಿ ತೆಗೆದುಕೊಂಡು, ಇದಕ್ಕೆ ಸಂಬಂಧಿಸಿದ ವಿವರಗಳನ್ನೆಲ್ಲಾ ಸಂಗ್ರಹಿಸು. ಆಗ ನಿನಗೇ ನನ್ನ ಮಾತು ನಿಜ ಎಂದು ಗೊತ್ತಾಗುತ್ತದೆ. ಮೂಲಭೂತವಾಗಿ ಇದು ಒಂದು ವರ್ಗ ಇನ್ನೊಂದು ವರ್ಗದ ಮೇಲೆ ತನ್ನ ಆರ್ಥಿಕ ಸುಭದ್ರತೆಗಾಗಿ ಹೂಡಿದ ಸಮರ-ಬರೀ ಸಿಂಧೀ ದ್ವೇಷವಲ್ಲ'

'— ಎಂದರು ಡಾಕ್ಟರ್

"ನಿಮ್ಮ ವಾದವೇ ಅರ್ಥವಾಗುತ್ತಿಲ್ಲ ಡಾಕ್ಟರ್. ಅದೇನು ಕೊಂಚ ವಿವರಿಸಿ ಹೇಳಿ.'

'—ಎಂದು ಕೇಳಿದೆ ನಾನು.

"ನಾನು ಈಗಲೇ ಎಲ್ಲವನ್ನೂ ವಿವರಿಸಿ ಹೇಳಿದರೆ, ನಿನಗೆ ವಿಷಯ ಸಂಗ್ರಹದಲ್ಲಿ ಆಸಕ್ತಿಯೇ ತಪ್ಪಬಹುದು ವಾಸಂತೀ. ಈಗ ಸಧ್ಯಕ್ಕೆ ಇಷ್ಟು ಹೇಳುತ್ತೇನೆ—ಮೂಲಭೂತವಾಗಿ ಇದು ಆರ್ಥಿಕ ಸಮರ. ಹೌದೋ ಅಲ್ಲವೋ ಎಂದು ಪರೀಕ್ಷೆ ಮಾಡಿನೋಡು.'

“ಆದರೆ ಹೇಗೆ ಪರೀಕ್ಷೆ ಮಾಡುವುದು ?’

“ಈ ಹುಡುಗನ ವಿಷಯವನ್ನೆಲ್ಲಾ ಸಂಗ್ರಹಿಸು. ಆಗ ತಾನೇ ತಿಳಿಯುತ್ತದೆ. ಆ ಹುಡುಗನ ವಿಳಾಸ ನಿನಗೆ ಗೊತ್ತು ತಾನೇ ?’

“ಎಲ್ಲೋ ಅಂಧೇರಿಯಲ್ಲಿ ರೈಲ್ವೆನಿಲ್ದಾಣದ ಬಳಿ ಸಿಕ್ಕಿದ ಎಂದಳು ರಿಟಾ ?’

“ಹಾಗೇ. ಅವಳು ಪೋಲೀಸ್‌ಗೆ ಫಿರ್ಯಾದು ಕೊಟ್ಟಿದೇನೆ ಎಂದಳಲ್ಲವೇ ?’

“ಹೂ.’

“ಹಾಗಾದರೆ ಸ್ಟೇಷನ್ನಿನಲ್ಲಿ ವಿಚಾರಿಸಿದರೆ ತಿಳಿಯುತ್ತದೆ–ತಡಿ. ಹೇಗೂ ರಿಟಾಳ ಫಿರ್ಯಾದಿನ ಮೇಲೆ ಪೋಲೀಸಿನವರು ಏನಾದರೂ ಕ್ರಮ ಜರುಗಿಸಿರಲೇಬೇಕಲ್ಲ.’

‘—ಎಂದು ಡಾಕ್ಟರು, ಟೆಲಿಫೋನ್ ಡೈರೆಕ್ಟರಿಯನ್ನು ತೆಗೆದುಕೊಂಡು, ಅಂಧೇರಿ ಪೊಲೀಸ್ ಸ್ಟೇಷನ್ನಿನ ನಂಬರನ್ನು ಹುಡುಕಿ ತೆಗೆದು, ಅಲ್ಲಿಗೆ ‘ರಿಂಗ್’ ಮಾಡಿ ವಿಚಾರಿಸಿದರು.

‘ರಿಟಾಳ ದೂರಿನ ವಿಷಯದಲ್ಲಿ ಅಂಧೇರಿಯ ಪೋಲೀಸ್ ಇನ್‌ಸ್ಪೆಕ್ಟರು ಸಾಕಷ್ಟು ಗಮನ ಕೊಟ್ಟಿರಲಿಲ್ಲವೆಂದು ಕಾಣುತ್ತದೆ. ಆ ವಿಷಯದಲ್ಲಿ ಡಾಕ್ಟರು ಪ್ರವೇಶ ಮಾಡಿ, ತಾವು ಯಾರೆಂಬುದನ್ನು ತಿಳಿಸಿದ ಬಳಿಕ, ಆತ ಚುರುಕಾದಂತೆ ನನಗೆ ಡಾಕ್ಟರ ಮಾತಿನ ಮೇಲಿಂದ ಅರ್ಥವಾಯಿತು. ಆ ವಿಷಯದಲ್ಲಿ ಅವರಿಗೆ ತಮ್ಮ ಹೆಸರಿಗಿಂತ ಹೆಚ್ಚಾಗಿ ತಮ್ಮ ತಂದೆಯ ಹೆಸರು ಹೆಚ್ಚು ಸಹಾಯಕವಾಗಿರಬೇಕು. ಡಾಕ್ಟರ ತಂದೆಯವರ ಹೆಸರು ಕೇಳದವರು ಯಾರಿದ್ದಾರೆ ಬೊಂಬಾಯಲ್ಲಿ? ಬಹುಶಃ ಡಾಕ್ಟರ್ ಆ ವಿಷಯ ಇನ್‌ಸ್ಪೆಕ್ಟರಿಗೆ ತಿಳಿಸಿ ‘ರಿಟಾಳ ದೂರಿನ ವಿಷಯ ಏನು ಮಾಡಿದಿರಿ?’ ಎಂದು ಕೇಳಿದಾಗ ‘ಕೂಡಲೇ ಕ್ರಮ ಕೈಗೊಳ್ಳುವುದಾಗಿ’ ಹೇಳಿದನೇನೋ ಇನ್‌ಸ್ಪೆಕ್ಟರು. ಅದಕ್ಕೆ ಡಾಕ್ಟರು ಆತನಿಗೆ—

“ನೀವು ಹುಡುಗನ ಮೇಲೆ ಕೇಸ್ ರಿಜಿಸ್ಟರ್ ಮಾಡಿಕೊಳ್ಳುವುದೇನೂ ಆಗತ್ಯವಿಲ್ಲ ಇನ್‌ಸ್ಪೆಕ್ಟರ್. ಆದರೆ ಆ ಹುಡುಗ ನನಗೆ ಮನೋವೈಜ್ಞಾನಿಕ ಪರೀಕ್ಷೆಗಾಗಿ ಬೇಕು. ಅದಕ್ಕಾಗಿ ಆ ಹುಡುಗನ ತಂದೆತಾಯಿ

ಆ ಹುಡುಗನನ್ನು ನನ್ನ ಬಳಿ ಚಿಕಿತ್ಸೆಗೆ ಕಳಿಸುವುದಕ್ಕೆ ಒಪ್ಪಿಸಿದರೆ ಸಾಕು. ಅದಕ್ಕಾಗಿಯೇ ನಾನು ಈಗ ನಿಮ್ಮ ಸ್ಟೇಷನ್‌ಗೇ ಬರುತ್ತೇನೆ. ನೀವು ಅಲ್ಲೇ ಇದ್ದು ಹುಡುಗನ ತಂದೆಯ ಬಳಿಗೆ ನಮ್ಮೊಂದಿಗೆ ಬಂದರೆ ತುಂಬಾ ಉಪಕಾರವಾಗುತ್ತದೆ'

'—ಎಂದರು

'ಇನ್‌ಸ್ಪೆಕ್ಟರ್ ಆ ಮಾತಿಗೆ ಒಪ್ಪಿದ ಎಂದು ಕಾಣುತ್ತದೆ. ಅದಕ್ಕೇ ಡಾಕ್ಟರು 'ಈಗಲೇ ಬರುತ್ತೇವೆ' ಎಂದು ಆತನಿಗೆ ತಿಳಿಸಿ, ನನ್ನತ್ತ ತಿರುಗಿ—

" ನಡಿ ವಾಸಂತಿ, ಆ ಮಧುವಾತಕ್ ಹೇಗಿದಾನೋ ನೋಡಿ ಕೊಂಡು ಬರೋಣ. ಆ ಹುಡುಗ 'Hate complex' (ದ್ವೇಷ ಮನೋಭಾವ)ನ ಸ್ಪಷ್ಟ ನಿದರ್ಶನ ಇದ್ದಂತಿದಾನೆ. ವಿಶ್ಲೇಷಣಕ್ಕೆ ಒಳ್ಳೆ ಕೇಸು'

'—ಎಂದರು.

'ಆ ವೇಳೆಗೆ ನನಗೂ ಆ ವಿಷಯದಲ್ಲಿ ಸಾಕಷ್ಟು ಆಸಕ್ತಿ ಹುಟ್ಟಿತ್ತು. 'ಹೂ' ಎಂದು ಡಾಕ್ಟರನ್ನು ಹಿಂಬಾಲಿಸಿದೆ.

## ೨

'ನಾವು ಅಂಧೇರಿಯ ಪೋಲೀಸ್ ಸ್ಟೇಷನ್ ತಲಪುವ ವೇಳೆಗೆ ಸಂಜೆ ದೀಪ ಹೊತ್ತಿಸುವ ಹೊತ್ತಾಗಿತ್ತು. ಪೋಲೀಸ್ ಇನ್‌ಸ್ಪೆಕ್ಟರು ನಾವು ಬರುವುದನ್ನೇ ಕಾಯುತ್ತಾ ಕುಳಿತಿದ್ದರು. ನಾವು ಅಲ್ಲಿಗೆ ಹೋಗುವ ವೇಳೆಗೆ, ಅವರು ಬೆಳಗ್ಗೆ ಗದ್ದಲ ನಡೆದಿದ್ದಾಗ ಅಲ್ಲಿದ್ದ ಕಾನ್‌ಸ್ಟೇಬಲನ್ನು ಕರೆಸಿ, ಅವನಿಂದ ಆ ಹುಡುಗನ ವಿಚಾರವನ್ನೆಲ್ಲಾ ವಿಚಾರಿಸಿ ತಿಳಿದುಕೊಂಡಿದ್ದರೆಂದು ಕಾಣುತ್ತದೆ. ಎಂತಲೇ ಡಾಕ್ಟರು—

'ಆ ಹುಡುಗನ ಮನೆಗೆ ಹೋಗೋಣವೇ?'

'—ಎಂದು ಕೇಳುತ್ತಿದ್ದ ಹಾಗೇ—

'ಬನ್ನಿ ಹೋಗೋಣ. ನಾವು ಅಲ್ಲಿಗೆ ಹೋಗುವ ವೇಳೆಗೆ ಹುಡುಗ

ಅಲ್ಲಿರಬೇಕೆಂದು ಸುದ್ದಿ ಕಳಿಸಿದೇನೆ-ಅವರೂ ಈ ವೇಳೆಗೆ ನಮ್ಮನ್ನೇ ಕಾಯುತ್ತಿರಬಹುದು. ಇದು ಬಹು ಸಣ್ಣ ಘಟನೆ ಡಾಕ್ಟರ್. ಆದರೂ ಇದರಲ್ಲಿ ನಿಮಗಿರುವ ಆಸಕ್ತಿಯನ್ನು ಕಂಡು ನನಗೆ ಆಶ್ಚರ್ಯವಾಗುತ್ತದೆ.'

'—ಎಂದ ಪೋಲೀಸ್ ಇನ್‌ಸ್ಪೆಕ್ಟರ್.

'ಆ ಮಾತಿಗೆ ಉತ್ತರವಾಗಿ ಡಾಕ್ಟರು—

"ನನಗಿದರಲ್ಲಿ ಪ್ರತೀಕಾರಾಸಕ್ತಿಯೇನೂ ಇಲ್ಲ, ನನ್ನದು ಕೇವಲ ವೈಜ್ಞಾನಿಕ ಕುತೂಹಲ. ನಿರಾಶ್ರಿತರ ಪುನರ್ವಸತಿ ಸಮಿತಿ (Refugees Rehabilitation committee)ಯಲ್ಲಿ ನಾನೂ ಒಬ್ಬ ಸದಸ್ಯನಾಗಿದೇನೆ. ಆ ಸಮಸ್ಯೆಗೂ ಘಟನೆಗೂ ಏನಾದರೂ ಸಂಬಂಧವಿದೆಯೇ ಎಂಬುದನ್ನು ಪರೀಕ್ಷೆ ಮಾಡಬೇಕೆಂಬುದೇ ನನಗಿರುವ ಆಸಕ್ತಿ. ಅಲ್ಲದೆ ಹುಡುಗರ ಮನಸ್ಸಿನ ವಿಕಾರಗಳು ಹೇಗೆ ಬೆಳೆದು ಏನು ರೂಪಾಂತರ ತಾಳುತ್ತವೆಯೆಂಬುದನ್ನು ತಿಳಿಯುವುದಕ್ಕೂ ಇದೊಂದು ಒಳ್ಳೆ ನಿದರ್ಶನವಾಗಬಹುದು ಎನಿಸಿತು ನನಗೆ. ಅದಕ್ಕಾಗಿಯೇ ಬಂದೆ.'

'—ಎಂದರು.

"ನಿಮ್ಮ ಕೆಲಸದಲ್ಲಿ ನನ್ನ ಕೈಯಿಂದಾದ ಸಹಾಯವನ್ನೆಲ್ಲ ನಾನು ಖಂಡಿತವಾಗಿಯೂ ಮಾಡುತ್ತೇನೆ.

'—ಎಂದ ಇನ್‌ಸ್ಪೆಕ್ಟರ್.

'ಆತನಿಗೆ ಡಾಕ್ಟರು ನನ್ನ ಪರಿಚಯ ಮಾಡಿಸಿದ ಬಳಿಕ, ನಾವು ಮೂವರು, ನಮಗೆ ದಾರಿ ತೋರಿಸಲು ಬಂದ ಕಾನ್‌ಸ್ಟೇಬಲ್ ಒಬ್ಬನೊಂದಿಗೆ ಮಧುಮಾಠಕ್ ಇದ್ದ ಸ್ಥಳಕ್ಕೆ ಹೊರಟೆವು.

'ರಿಟಾ ಹೇಳಿದ ಹಾಗೆ ಆ ಹುಡುಗ ನಮಗೆ, ಆಕೆ ಹೇಳಿದ ಮಿಠಾಯಿ ಅಂಗಡಿಯ ಬಳಿಯಲ್ಲೇ ಸಿಕ್ಕ. ನಾವು ಆ ಅಂಗಡಿಯ ಬಳಿಗೆ ಹೋಗುವ ವೇಳೆಗೆ ಕಾನ್‌ಸ್ಟೇಬಲ್ ಆ ಹುಡುಗನನ್ನು ಅಲ್ಲಿಯೇ ಕೂಡಿಸಿಕೊಂಡು ನಮಗಾಗಿ ಕಾದಿದ್ದ.

'ಆ ಮಿಠಾಯಿ ಅಂಗಡಿ ಆ ಹುಡುಗನ ತಂದೆಯದು. ಅಂಗಡಿ, ಅಲ್ಲಿಯ ಗಾಜಿನ ಬೀರುಗಳು, ಗಿರಾಕಿಗಳು ಕೂಡಲು ಹಾಕಿದ್ದ ಆಸನಗಳು-ಎಲ್ಲವೂ ಅಂಗಡಿ ಹೆಚ್ಚು ವ್ಯಾಪಾರ ನಡೆಸುವಂಥದು ಎಂದು ಸಾರಿ

ಹೇಳುತ್ತಿದ್ದರೂ, ಆ ಹೆಚ್ಚು ವ್ಯಾಪಾರವೆನ್ನುವ ಮಾತು ಇಂದಿಗೆ ಅನ್ವಯ ವಾಗುವುದಿಲ್ಲವೆಂಬ ಮಾತನ್ನು, ಅಂಗಡಿಯಿದ್ದ ಗಲೀಜು ಸ್ಥಿತಿ, ಫರ್ನಿಚರು ಗಳ ಮೇಲೆ ಮುಸುಕಿದ ಧೂಳು, ಫೋಟೋಗಳಿಗೆ ಕಟ್ಟಿದ ಇಲ್ಲಣ—ಇವು ಸಾರಿ ಹೇಳುತ್ತಿದ್ದವು. ಆ ಹುಡುಗನ ತಂದೆಯನ್ನು ನೋಡಿದರೂ ಅದೇ ಮಾತು ಅನಿಸುತ್ತಿತ್ತು—ಒಂದು ಕಾಲಕ್ಕೆ ಚೆನ್ನಾಗಿ ಬಾಳಿ, ಈಗ ಕೈನಡೆಯು ದಂತಾದವನು ಈತ.

'ತನ್ನ ಮಗನನ್ನು ಕಾನ್‌ಸ್ಟೇಬಲು ಹಿಡಿದಾಗಲೇ ಗಾಬರಿ ಯಾಗಿದ್ದ. ಈಗ ಪೋಲೀಸ್ ಇನ್‌ಸ್ಪೆಕ್ಟರ ಜೊತೆಗೆ ನಾವೆಲ್ಲ ಬಂದುದನ್ನು ಕಂಡು ಆತನ ಭಯ ಇದ್ದದ್ದೂ ಹೆಚ್ಚಾಯಿತು.

'ಆ ಹುಡುಗ ನಮ್ಮೆಲ್ಲರನ್ನು ಮಿಕಮಿಕ ನೋಡುತ್ತ ಕುಳಿತಿದ್ದ. ಆದರೆ ಅವನಿಗೆ ಮಾತ್ರ ಯಾವ ಭಯವೂ ಇದ್ದಂತಿರಲಿಲ್ಲ.

'ನಮ್ಮನ್ನು ನೋಡುತ್ತಿದ್ದ ಹಾಗೇ ಹುಡುಗನ ತಂದೆ ಕಣ್ಣುತುಂಬ ನೀರಿಟ್ಟುಕೊಂಡು, ನನ್ನ ಕಡೆ ತಿರುಗಿ—

"ಮಾಸಾಬ್. ಇದೊಂದು ಸಲ ನನ್ನ ಮಗನನ್ನು ಕ್ಷಮಿಸಿ ಬಿಡಿ. ಇನ್ನೊಂದುಸಲ ಹೀಗೇನಾದರೂ ಮಾಡಿದರೆ ನಾನೇ ಅವನ ಚರ್ಮ ಸುಲಿದು ಬಿಡುತ್ತೇನೆ. ನಿಮಗೂ ಮಕ್ಕಳು ಮರಿ ಇರಬಹುದು. ಅವನನ್ನು ಪೋಲೀಸಿಗೆ ಕೊಟ್ಟು, ಕೇರಿಯಲ್ಲಿ ನನ್ನ ಮರ್ಯಾದೆ ಕಳೆಯಬೇಡಿ'

'—ಎಂದು ಬೇಡಿದ.

'ಆತನ ಬೇಡಿಕೆಗೆ, ನನಗಿಂತ ಮುಂಚಿತವಾಗಿ ಡಾಕ್ಟರೇ ಉತ್ತರ ಕೊಟ್ಟರು—

"ನೀನೇನೂ ಹೆದರಬೇಡ. ನಿನ್ನ ಮಗನನ್ನು ಜೈಲಿಗೆ ಕಳಿಸುವುದಿಲ್ಲ. ಆ ಕೆಲಸಕ್ಕಲ್ಲ ನಾನು ಬಂದಿರುವುದು, ನಿನ್ನನ್ನು ಕೆಲವು ಪ್ರಶ್ನೆ ಕೇಳಬೇ ಕೆಂದು ಬಂದಿದೇನೆ.'

'—ಎಂದರು.

'ಹೌದು. ಅವರ ಮಾತಿನ ಮೇಲೇ ನಾನೂ ನಿನ್ನ ಮಗನನ್ನು ಅರೆಸ್ಟ್ ಮಾಡದಿರುವುದು. ಆದ್ದರಿಂದ ಅವರು ಕೇಳಿದ ಪ್ರಶ್ನೆಗಳಿಗೆಲ್ಲಾ ಸರಿಯಾಗಿ ಉತ್ತರ ಕೊಟ್ಟು, ಅವರು ಹೇಳಿದ ಹಾಗೆ ಕೇಳು—ಹಾಗಾದರೆ

ಎಲ್ಲಾ ಸರಿಯಾಗುತ್ತದೆ–ಗೊತ್ತಾಯಿತೇ?'

'—ಎಂದು ಇನ್ಸ್‌ಪೆಕ್ಟರು ಡಾಕ್ಟರ ಮಾತಿಗೆ ತನ್ನ ಬೆದರಿಕೆಯನ್ನು ಬೆರೆಸಿದ.

'ಅಂಗಡಿಯಾತ ತನ್ನ ಹೆಗಲ ಮೇಲಿದ್ದ ಚೌಕದಿಂದ, ಕುರ್ಚಿಗಳ ಮೇಲಿನ ಧೂಳನ್ನು ಹೊಡೆದು—

"ಕೂತುಕೊಳ್ಳಿ. ನೀವೇನು ಕೇಳಿದರೂ ಅದಕ್ಕೆ ಸತ್ಯವಾಗಿ ಉತ್ತರ ಕೊಡುತ್ತೇನೆ. ನೀವು ಹೇಗೆ ಹೇಳಿದರೆ ಹಾಗೆ ಮಾಡುತ್ತೇನೆ. ಬೇಕೆಂದರೆ ಹೇಳಿ-ನನ್ನ ಮಗನಿಗೆ ಏನು ಶಿಕ್ಷೆ ಬೇಕೊ ಅದನ್ನು ನಾನೇ, ಕೈಯಾರ ನಿಮ್ಮ ಕಣ್ಣೆದುರಿಗೇ ಮಾಡುತ್ತೇನೆ. ಆದರೆ ಕೋರ್ಟು, ಕಛೇರಿ, ಜೈಲಿಗೆ ಮಾತ್ರ ಅಲೆಸಬೇಡಿ. ನಮ್ಮ ತಾತ ಮುತ್ತಾತಂದಿರ ಕಾಲದಿಂದ ನಮ್ಮ ಮನೆತನಕ್ಕೆ ಅವಮಾನವಾಗಿಲ್ಲ'

'—ಎಂದು ಬೇಡಿದ.

"ನಾನಾಗಲೇ ನಿನಗೆ ನಿನ್ನ ಮಗನನ್ನು ಜೈಲಿಗೆ ಕಳಿಸುವುದಿಲ್ಲ ಎಂದು ಹೇಳಲಿಲ್ಲವೇ? ಆ ಭಯ ಬಿಡು.'

'—ಎಂದು ಡಾಕ್ಟರು ಅವನಿಗೆ ಮತ್ತೊಮ್ಮೆ ಭರವಸೆ ಕೊಟ್ಟು, ಆತ ತೋರಿಸಿದ ಕುರ್ಚಿಯ ಮೇಲೆ ಕುಳಿತು—

"ನಿನ್ನ ಹೆಸರೇನು?'

'—ಎಂದು ಕೇಳಿದರು.

"ಕೃಷ್ಣಾ ಪಾಠಕ್.'

"ನಿನ್ನ ಮಗನ ಹೆಸರು.'

"ಮಧುಪಾಠಕ್.'

"ಇವನ ವಯಸ್ಸು?'

"ಹನ್ನೆರಡು, ಹದಿಮೂರು ಇರಬಹುದು.'

"ಇವನೊಬ್ಬನೇ ಮಗನೇ?'

"ಊಹೂ–ಇವನು ದೊಡ್ಡವನು ಇವನ ಮೇಲೆ ಇನ್ನು ನಾಲ್ಕು ಮಕ್ಕಳಿವೆ. ಎರಡು ಹೆಣ್ಣು, ಎರಡು ಗಂಡು.'

"ಹುಡುಗ ಎಲ್ಲಿಯವರೆಗೆ ಓದಿದ್ದಾನೆ?'

“ ಒಂದೆರಡು ವರ್ಷ ಪ್ರೈಮರಿಸ್ಕೂಲಿನಲ್ಲಿ ಓದಿದ, ಅಷ್ಟೆ.’

“ ಮುಂದಕ್ಕೆ ಏಕೆ ಓದಿಸಲಿಲ್ಲ.’

“ ಸಂಸಾರ ಬೆಳೆಯಿತು. ಕೈಸಾಗಲಿಲ್ಲ. ಸ್ಕೂಲು ಬಿಡಿಸಿಬಿಟ್ಟು, ಅಂಗಡಿ ಕೆಲಸಕ್ಕೆ ಜೊತೆಗೆ ಹಾಕಿಕೊಂಡೆ.’

“ ಹುಡುಗನ ತಾಯಿ ಇದ್ದಾಳೊ ? ’

“ ಹೂ.’

“ ಹುಡುಗ ಮೊದಲಿನಿಂದಲೂ ಹೀಗೆ ತುಂಟಾಟ ಮಾಡುವ ಸ್ವಭಾವದವನೇ ?’

“ ಊಹೂ. ಮೊದಮೊದಲು ಒಂದು ಗದ್ದಲ ಗಲಾಟೆಗೆ ಹೋಗುತ್ತಿರಲಿಲ್ಲ. ಈಗೀಗ ಅವನಿಗೇನು ಕೇಡುಗಾಲಕ್ಕೆ ಈ ಬುದ್ಧಿ ಬಂದಿತೊ, ಇಂಥ ಪುಂಡಾಟ ಆರಂಭ ಮಾಡಿದಾನೆ.’

“ ಹಾಗೆ ಮಾಡುವುದು ಒಳ್ಳೆಯದಲ್ಲ ಎಂದು ನೀವು ಅವನಿಗೆ ಬುದ್ಧಿ ಹೇಳಲಿಲ್ಲವೇ ?’

“ ಹೇಳಿದ್ದರೆ ಅವನಮ್ಮ ಹೇಳಿರಬೇಕು. ನನಗೆ ನನ್ನ ಕೆಲಸ ಮಾಡಿಕೊಂಡು, ಈ ಸಂಸಾರ ನಡೆಸುವುದೇ ಸಾಕಾಗಿದೆ. ಇನ್ನು ಇದಕ್ಕೆಲ್ಲಾ ಹೊತ್ತೆಲ್ಲಿಂದ ತರಲಿ. ಸಂಸಾರದ ಕಷ್ಟದಲ್ಲಿ ಯಾವುದಕ್ಕೂ ಹೊತ್ತು ಆಗುವುದಿಲ್ಲ, ಯಾವುದೂ ಬೇಕಾಗುವುದಿಲ್ಲ ’

‘ —ಜೀವನದ ಬಗ್ಗೆ ಬಹು ಬೇಸರ ತುಂಬಿದ ಧ್ವನಿಯಲ್ಲಿ ಹೇಳಿದ ಕೃಷ್ಣಾಪಾಠಕ್.

“ ಹೋಗಲಿ ಬಿಡು. ನಿನ್ನ ಹುಡುಗ ಕೇರಿಯಲ್ಲಿ ಎಲ್ಲರ ಮೇಲೂ ಹೀಗೇ ಪುಂಡತನ ಮಾಡುತ್ತಾನೇನು ? ’

“ ಅದೇನೊ ನನಗೆ ತಿಳಿಯದು. ಇದುವರೆಗೂ ಯಾರೂ ನನ್ನ ಮುಂದೆ ದೂರು ಹೇಳಿಲ್ಲ ’

‘ —ಎಂದ ಕೃಷ್ಣಾಪಾಠಕ್.

‘ ಇನ್ನು ಆತನನ್ನು ಪ್ರಶ್ನಿಸುವುದರಿಂದ ಹೆಚ್ಚು ವಿಷಯವೇನೂ ಗೊತ್ತಾಗುವುದಿಲ್ಲ ಎಂದು ನಂಬಿಕೆಯಾದ ಡಾಕ್ಟರು, ಆತನನ್ನು ಬಿಟ್ಟು ಹುಡುಗನ ಕಡೆ ತಿರುಗಿದರು.

# ೩

' ಡಾಕ್ಟರು ತನ್ನ ತಂದೆಯೊಂದಿಗೆ ಮಾತಾಡುತ್ತಿರುವಾಗ ಒಂದೂ ಮಾತಾಡದೆ ನಮ್ಮ ಕಡೆಯೇ ದುರುಗುಟ್ಟಿ ನೋಡುತ್ತಾ ಕುಳಿತಿದ್ದ. ಡಾಕ್ಟರ್ ಆ ಹುಡುಗನನ್ನು ಕರೆದು ತಮ್ಮ ಹತ್ತಿರ ಕೂಡಿಸಿಕೊಂಡು ಅವನ ಬೆನ್ನನ್ನು ನೇವರಿಸಿ—

" ನಿನ್ನ ಹೆಸರೇನು ಮಗೂ."

' —ಎಂದು ಮೃದುವಾಗಿ ಕೇಳಿದರು.

" ಮಧುವಾರಕ್ '

" —ಹುಡುಗ ಸೆಟೆದು ಉತ್ತರ ಕೊಟ್ಟ.

' ಹೀಗೆಲ್ಲಾ ಕಂಡವರ ಮೇಲೆ ಗದ್ದಲ ಮಾಡುವುದು, ಬೈಯುವುದು, ಕಲ್ಲಿನಿಂದ ಹೊಡೆಯುವುದು ತಪ್ಪಲ್ಲವೇ ?'

" ಎಲ್ಲರನ್ನೂ ಹೊಡೆದರೆ ತಪ್ಪು· ಆದರೆ ಸಿಂಧಿಗಳನ್ನು ಹೊಡೆದರೆ ತಪ್ಪೇನೂ ಇಲ್ಲ '

'—ಹುಡುಗ ಏನೋ ವಿಚಿತ್ರ ತರ್ಕದಲ್ಲಿನ ನಂಬಿಕೆಯಿಂದ ಹೇಳಿದ.

" ಹಾಗಂದರೇನು ? ಸಿಂಧಿಗಳನ್ನು ಹೊಡೆದರೆ ಏಕೆ ತಪ್ಪಲ್ಲ ? '

" ಹೊಡೆದರೆ—ಅವನನ್ನ ತುಂಡು ತುಂಡಾಗಿ ಕತ್ತರಿಸಿದರೂ ತಪ್ಪಿಲ್ಲ.'

' —ಹುಡುಗ ಮತ್ತಷ್ಟು ನಿಷ್ಠುರವಾಗಿ ಹೇಳಿದ.

" ಏಕೆ ? '

"' ಅವರು ಕಳ್ಳ ಸೂ—ಮಕ್ಕಳು, ಹರಾಮ್‌ಖೋರರು, ಮೋಸಗಾರರು, ಏನು ಮಾಡಲಿಕ್ಕೂ ಹೇಸದವರು. ಅದಕ್ಕೇ—ಅವರನ್ನು ಬೊಂಬಾಯಿ ಬಿಟ್ಟು ಓಡಿಸಬೇಕು. ಇಲ್ಲದಿದ್ದರೆ ನಮ್ಮೆಲ್ಲರನ್ನೂ ಹರಿದು ತಿಂದುಬಿಡುತ್ತಾರೆ. ಅದಕ್ಕೇ ಅವರನ್ನು ಕೊಂದೇಬಿಡಬೇಕು '

'—ದ್ವೇಷದ ಜ್ವಾಲಾಮುಖಿಯಂತೆ ಹುಡುಗ ಘುಡುಘುಡಿಸುತ್ತಾ ಹೇಳಿದ.

' ಆ ಹುಡುಗ ಡಾಕ್ಟರ ಪ್ರಶ್ನೆಗೆ ಕೊಟ್ಟ ಉತ್ತರವನ್ನು ಕೇಳಿ,

ಅವರಪ್ಪನಿಗೆ ಹುಡುಗನ ಮೇಲೆ ಭಯಂಕರ ಸಿಟ್ಟು ಬಂತು.

"ಬಾಯಿಗೆ ಬಂದದ್ದು ಬೊಗಳುತ್ತೀಯಾ ಕತ್ತೆ ಮಗನೆ.'

'—ಎಂದು ಹುಡುಗನನ್ನು ಹೊಡೆಯಲು ಹೋದ

"ಕೃಷ್ಣಾಪಾರಕ್–ನೀನು ಸ್ವಲ್ಪ ಸುಮ್ಮನಿರು. ನಡುವೆ ಏನೂ ಮಾತಾಡಬೇಡ'

'—ಎಂದು ಹುಡುಗನ ತಂದೆಯನ್ನು ಗದರಿಸಿ, ಡಾಕ್ಟರು ಹುಡುಗನ ಕಡೆ ತಿರುಗಿ—

"ಹೌದು ಮಧು, ಸಿಂಧಿಗಳನ್ನು ಇಲ್ಲಿಂದ ಓಡಿಸುತ್ತೀನಿ ಎನ್ನುತ್ತೀಯಲ್ಲಾ, ಬೊಂಬಾಯೇನು ನಿನ್ನದೇ ?'

'—ಎಂದು ಕೇಳಿದರು.

"ಹೋ, ಭೇಷಕ್, ನನ್ನದೇ. ನಾನು ಗುಜರಾತಿ. ಬೊಂಬಾಯಿ ಗುಜರಾತಿಗಳದು. ಈ ಊರು ಕಟ್ಟಿದವರು ನಾವು. ಈ ಸಿಂಧಿಗಳು ನಮ್ಮ ಮನೆ ಹಾಳು ಮಾಡಲು ಇಲ್ಲಿಗೇಕೆ ಬರಬೇಕು. ಇದೇನು ಅವರಪ್ಪನ ಮನೆಯೇ ?'

"ನಿಜ ಇದು ಸಿಂಧಿಗಳಿಗೆ ಅವರಪ್ಪನ ಮನೆಯಲ್ಲ. ಆದರೆ ಅವರಿಗೆ ಇರಲು ಬೇರೆ ಸ್ಥಳವಿಲ್ಲವಲ್ಲ.'

"ಇಲ್ಲದೆ ಹೋದರೆ ಅರಬ್ಬಿ ಸಮುದ್ರದಲ್ಲಿ ಬೀಳಲಿ. ಸಾಬರ ಕೈಲಿ ಏಟು ತಿಂದು ಸತ್ತೇ ಹೋಗಲಿ ನನಗೇನು? ಆದರೆ ಅವರ ಬೊಂಬಾಯಿಯಲ್ಲಿ ಮಾತ್ರ ಇರಕೂಡದು.'

"ಅದು ಸರಿಯೆ. ಆದರೆ ನೀನು ಸಿಂಧಿಗಳನ್ನು ಹೊಡೆಯಲು ಹೋದರೆ, ಪೋಲೀಸರು ನಿನ್ನನ್ನು ಜೈಲಿಗೆ ಕಳಿಸುತ್ತಾರಲ್ಲಾ.'

"ಕಳಿಸಲಿ. ನನಗೂ ಅದು ಗೊತ್ತಿದೆ. ಸಿಂಧಿಗಳು ಲಂಚಕೊಟ್ಟು ಎಲ್ಲರನ್ನೂ ಸರಿ ಮಾಡಿಕೊಂಡಿದಾರೆ—

'—ತಾನು ಎಲ್ಲವನ್ನೂ ತಿಳಿದ ಸರ್ವಜ್ಞ ಎಂಬಂತೆ ಹೇಳಿದ ಮಧುಪಾರಕ್.

"ಅದು ಹಾಗಿರಲಿ. ನಿನ್ನನ್ನು ಜೈಲಿಗೆ ಕಳಿಸುತ್ತಾರಲ್ಲಾ. ಅದಕ್ಕೇನು ಮಾಡುತ್ತೀಯ ?'

“ ಜೈಲಿಗೆ ಕಳಿಸುವುದಲ್ಲ. ಫಾಸಿಗೆ ಹಾಕಿದರೂ ಸರಿಯೆ. ಅವರನ್ನು ಬಿಡುವುದಿಲ್ಲ ’

“ ಇದು ಬಹಳ ಹೋಪ್‌ಲೆಸ್ ಕೇಸ್ ನನಗೆ ಬಿಡಿ ಡಾಕ್ಟರ್. ಇಂಥ ಖಾಯಿಲೆಗೆ ಏನು ಔಷಧ ಕೊಡಬೇಕೆಂದು ನಮಗೆ ಗೊತ್ತು ’

‘—ಎಂದ, ಅದುವರೆಗೂ ಒಂದೂ ಮಾತನಾಡದೆ ಸುಮ್ಮನೆ ಕುಳಿತಿದ್ದ ಪೋಲೀಸ್ ಇನ್‌ಸ್ಪೆಕ್ಟರ್

“ ಡಾಕ್ಟರ್‌ಸಾಬ್, ನಿಮ್ಮ ಕಾಲಿಗೆ ಬೀಳುತ್ತೇನೆ. ನನ್ನ ಮಗನನ್ನು ಪೋಲೀಸರಿಗೊಪ್ಪಿಸಬೇಡಿ ’

‘—ಎಂದು ಬೇಡಿದ ಕೃಷ್ಣಾಪಾರಕ್, ಪೋಲೀಸ್ ಇನ್‌ಸ್ಪೆಕ್ಟರು ಹೇಳಿದ್ದನ್ನು ಕೇಳಿ.

“ ಇಲ್ಲ, ನಿಮ್ಮ ಮಗನನ್ನು ಪೋಲೀಸರಿಗೊಪ್ಪಿಸುವುದಿಲ್ಲ. ನೀವೇನೂ ಹೆದರಬೇಡಿ ಆದರೆ ನಾನು ಹೇಳಿದ ಹಾಗೆ ಕೇಳುತ್ತೀರಾ ? ’

‘—ಡಾಕ್ಟರ್ ಕೃಷ್ಣಾಪಾರಕ್‌ನನ್ನು ಕೇಳಿದರು.

“ ಅದೊಂದಾದರೆ ನೀವು ಏನು ಹೇಳಿದರೂ ಮಾಡುತ್ತೇನೆ ’

“ ಹಾಗಾದರೆ ನಿಮ್ಮ ಹುಡುಗನನ್ನು ನನ್ನ ಜೊತೆಯಲ್ಲಿ ಕಳಿಸಿಕೊಡಿ ಹುಡುಗಬುದ್ಧಿಯಲ್ಲಿ ಹೀಗೆ ದ್ವೇಷ ಬೆಳೆಯಲು ಬಿಡಬಾರದು ’

“ ಅದವನ ಹುಟ್ಟುಗುಣ. ಅದಕ್ಕೇನು ಔಷಧ ಮಾಡಲಿಕ್ಕಾಗುತ್ತೆ ಡಾಕ್ಟರ್‌ಸಾಬ್. ದೊಣ್ಣೆಯೊಂದೇ ಔಷಧ ’

“ ಹಾಗಲ್ಲ, ಅದಕ್ಕೂ ಬೇರೆ ಔಷಧವಿದೆ ಈ ಜಾಡ್ಯ ಪ್ರೀತಿಯಿಂದ, ಸ್ನೇಹದಿಂದಲೇ ಗುಣವಾಗಬೇಕು. ನಾನು ನಿಮ್ಮ ಹುಡುಗನಿಗೆ ಯಾವ ವಿಧದಲ್ಲಿಲ್ಲೂ ಅಪಾಯವಾಗದಂತೆ ನೋಡಿಕೊಳ್ಳುತ್ತೇನೆ,’

‘—ಎಂದರು ಡಾಕ್ಟರ್.

‘ ಡಾಕ್ಟರು ಅಷ್ಟು ಹೇಳಿದರೂ ಕೃಷ್ಣಾಪಾರಕ್‌ಗೆ ಅವರ ಮಾತು ನಂಬಿಕೆಯಾಗಲಿಲ್ಲ. ಆತನಿಗೇನೋ ಡಾಕ್ಟರು, ಪೋಲೀಸ್ ಇನ್‌ಸ್ಪೆಕ್ಟರು ಇಬ್ಬರೂ ಸೇರಿಕೊಂಡು, ತನ್ನ ಮಗನನ್ನು, ತನ್ನ ಕಣ್ಮರೆಗೆ ಕರೆದೊಯ್ದು ಏನೋ ಮಾಡುತ್ತಾರೆ ಎಂಬ ಅಪನಂಬಿಕೆಯೇ ಇತ್ತು.

ಡಾಕ್ಟರ್, ಪೋಲೀಸ್ ಇನ್‌ಸ್ಪೆಕ್ಟರು ಏನೇನೋ ಭರವಸೆ ಕೊಟ್ಟ ಮೇಲೆ, ಆತ, ಡಾಕ್ಟರನ್ನು—

"ನೀವು ಯಾವ ಸೀಮೆಯ ಜನ?'

'—ಎಂದು ಕೇಳಿದ.

"ನಾನು ಮಹಾರಾಷ್ಟ್ರೀಯ ಈಕೆ ಗುಜರಾತಿ. ನಿಮ್ಮ ಸಂಶಯ ಏನೆಂಬುದು ನನಗೆ ಅರ್ಥವಾಗುತ್ತದೆ, ನಾವಾರೂ ಸಿಂಧಿಗಳಲ್ಲ. ನಿಮ್ಮ ಹುಡುಗನಿಗೆ ನಮ್ಮಲ್ಲಿ ಏನೂ ಅಪಾಯವಿಲ್ಲ.'

'—ಎಂದು ಭರವಸೆ ಕೊಟ್ಟರು ಡಾಕ್ಟರು.

'ನಾವೆಲ್ಲರೂ ಅಷ್ಟು ಭರವಸೆ ಕೊಟ್ಟ ಮೇಲೆ ಆತನಿಗೆ ಸ್ವಲ್ಪ ಸಮಾಧಾನವಾಗಿ—

"ಈಗಲೇ ಕರೆದುಕೊಂಡು ಹೋಗುತ್ತೀರಾ?'

'—ಎಂದು ಕೇಳಿದ.

"ಈಗಲೇ ಬೇಡ, ಬೆಳಗ್ಗೆ ಈಕೆಯನ್ನು ಕಳಿಸುತ್ತೇನೆ. ಈಕೆಯೊಂದಿಗೆ ಕಳಿಸಿಕೊಡಿ ಹುಡುಗ ಒಂದು ವಾರ ನನ್ನ ಜೊತೆಗಿರಲಿ. ಇದು ನನ್ನ ವಿಳಾಸ. ನಿಮಗೆ ಬೇಕೆನಿಸಿದಾಗ, ನೀವಾಗಲಿ, ನಿಮ್ಮ ಹೆಂಡತಿಯಾಗಲಿ ಬಂದು ನೋಡಿಕೊಂಡು ಹೋಗಿ.'

'—ಎಂದು ಹೇಳಿ ಡಾಕ್ಟರ್, ನನ್ನ ಕಡೆ ತಿರುಗಿ—

"ವಾಸಂತೀ ಬೆಳಗ್ಗೆ ಬಂದು ನೀನು ಈ ಹುಡುಗನ್ನು ಕ್ಲಿನಿಕ್‌ಗೆ ಕರೆದುಕೊಂಡು ಬಾ'

'—ಎಂದು ಹೇಳಿ, ಹುಡುಗನಿಗೆ—

"ಮಧು, ನನ್ನ ಮನೆಯಲ್ಲಿ ನಾಲ್ಕುದಿನ ಇರುತ್ತೀಯಾ?'

'—ಎಂದು ಕೇಳಿದರು.

"ಇರುತ್ತೇನೆ. ನನಗೇನೂ ಭಯವಿಲ್ಲ'

'—ಎಂದ ಹುಡುಗ.

'ಹಾಗಾದರೆ, ಬೆಳಗ್ಗೆ ಈಕೆಯ ಜೊತೆಯಲ್ಲಿ ಬಾ'

'—ಎಂದು ಡಾಕ್ಟರು ಅಲ್ಲಿಂದ ಹೊರಡಲು ಸಿದ್ಧವಾದರು;

'ನಾವೂ ಕೃಷ್ಣಾಪಾಠಕ್‌ಗೆ ನಮಸ್ಕರಿಸಿ ಅಲ್ಲಿಂದ ಹೊರಟೆವು.

'ಡಾಕ್ಟರ ಮಾತಿನಂತೆಯೇ ಮಾರನೆಯ ದಿನ, ನಾನು ಮಧುಪಾರಕ್‌ನ ಮನೆಗೆ ಹೋಗಿ, ಅವನ ತಂದೆತಾಯಿಗಳಿಬ್ಬರಿಗೂ ಸಮಾಧಾನ ಹೇಳಿ, ಹುಡುಗನನ್ನು ನನ್ನೊಂದಿಗೆ ಕ್ಲಿನಿಕ್‌ಗೆ ಕರೆತಂದೆ.

೪

'ಹುಡುಗನನ್ನು ಕ್ಲಿನಿಕ್‌ಗೆ ಕರೆತಂದುದೇನೋ ಆಯಿತು. ನಮ್ಮ ನಡುವೆಯೇ ಹುಡುಗ ಮಿತ್ರರ ನಡುವೆ ಇದ್ದಂತಿರಲಿಲ್ಲ. ಎಲ್ಲೋ ಶತ್ರು ಪಾಳಯದಂತಿದ್ದ. ಅಷ್ಟು ದಿನ ಯಾರೊಂದಿಗೂ ಮಾತನಾಡದೆ, ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡದೆ ತನ್ನ ಪಾಡಿಗೆ ತಾನು ಇದ್ದ. ಅವನ ರೀತಿಯನ್ನು ನೋಡಿದರೆ, ಅವನ ಶತ್ರುಗಳಾದ ಸಿಂಧಿಗಳು ನಮಗೆ ಏನೋ ಹೇಳಿಕೊಟ್ಟು ತನಗೆ ಕೆಡಕು ಮಾಡಲು ಹಿಡಿತರಿಸಿದ್ದಾರೆಂಬ ಹಾಗೇ ಇತ್ತು. ಬಹಳ ಒತ್ತಾಯ ಮಾಡಿ ಮಾತನಾಡಿಸಿದರೆ—

''ಇರಲಿ, ಇರಲಿ, ನನಗೆಲ್ಲಾ ಗೊತ್ತಿದೆ. ಏನು ಮಾಡುತ್ತೀರೋ ಮಾಡಿ. ಆಮೇಲೆ ನಾನೂ ನನ್ನ ಕೈತೋರಿಸುತ್ತೇನೆ.'

'—ಎಂದು ಗುರುಗುಟ್ಟುತ್ತಿದ್ದ.

'ಊಟ ತಿಂಡಿಗೂ ನಮ್ಮನ್ನು ಕೇಳುತ್ತಿರಲಿಲ್ಲ. ಏನಾದರೂ ಒಂದೆರಡು ಮಾತನಾಡಿದರೆ, ಆ ಮಾತು ಗುಜರಾತಿಯಲ್ಲಿ ಮಾತನಾಡುವ ನನ್ನೊಂದಿಗೆ ಮಾತ್ರ. ಡಾಕ್ಟರೊಂದಿಗೂ ಹೆಚ್ಚಾಗಿ ಮಾತಾಡುತ್ತಿರಲಿಲ್ಲ. ಈಗೀಗ ಡಾಕ್ಟರ್ ತನ್ನ ಮಿತ್ರರೆಂಬುದು ಅವನಿಗೆ ಅರಿವಾಗಿದೆ ಅವರೊಂದಿಗೆ ಸಲೀಸಾಗಿ ಮಾತಾಡುತ್ತಿದ್ದಾನೆ.

'ಮಧುಪಾರಕ್‌ನ ಹೃದಯದಲ್ಲಿದ್ದ ಸಿಂಧಿ ದ್ವೇಷದ ಮೂಲವೇನೆಂಬುದನ್ನು ಪತ್ತೆ ಹಚ್ಚದೆ ಅವನ ಬುದ್ಧಿಗೆ ಹಿಡಿದ ಜಾಡ್ಯವನ್ನು ಸರಿಪಡಿಸುವುದು ಸಾಧ್ಯವಿಲ್ಲವೆಂಬ ಕಾರಣದಿಂದ ನಾವು ಹುಡುಗನನ್ನು ಬಗೆಬಗೆಯಾಗಿ ಪರೀಕ್ಷೆ ಮಾಡಿದ ಬಳಿಕ, ಅದು ಹೊರಗಿನಿಂದ ಬರದೆ, ಅವರ ಮನೆಯಲ್ಲೇ ಹುಟ್ಟಿರಬೇಕು ಎಂಬುದನ್ನು ಅರ್ಥಮಾಡಿಕೊಂಡು, ಮಧು

ಪಾಠಕ್‌ನ ತಂದೆತಾಯಿಗಳು, ಸೋದರ ಸೋದರಿಯರು, ನೆರೆಹೊರೆಯವ ರೊಂದಿಗೆ ಮಾತನಾಡಿ ವಿಷಯ ಸಂಗ್ರಹ ಕೆಲಸವನ್ನು ಡಾಕ್ಟರು ನನಗೆ ವಹಿಸಿದರು.

‘ ಈಗೆರಡು ಮೂರು ದಿವಸದಿಂದ ನನಗೆ ಅದೇ ಕೆಲಸವಾಗಿತ್ತು.

‘ ವಿಷಯ ಸಂಗ್ರಹಣದ ಪರಿಣಾಮವಾಗಿ ನನಗೆ ಮೊದಲ ದಿನ ಡಾಕ್ಟರ್ ಮಾಡಿದ ವಿಶ್ಲೇಷಣವೇ ಸರಿಯೆಂಬುದು ಮನವರಿಕೆಯಾಯಿತು ರಾವ್. ಡಾಕ್ಟರ್ ಹೇಳಿದುದು ನಿಜ–ಎಲ್ಲ ಹಗೆತನದ ಬುನಾದಿಯೂ ಆರ್ಥಿಕವೇ ಮಧುಪಾರಕ್‌ನ ಮನೋವ್ಯಾಧಿಯ ಮೂಲವೂ ಅದೇ.

‘ ಆ ಜಾಡ್ಯ ಆರಂಭವಾದದ್ದು ಹೀಗೆ ’

‘ ಮಧುಪಾರಕ್‌ನ ತಂದೆ ಕೃಷ್ಣಾಪಾರಕ್ ಮೊದಲಿನಿಂದಲೂ ಮಿಠಾಯಿ ಮಾಡುವ ಕಸಬಿನವನು. ಅಂಧೇರಿಯಲ್ಲಿ ಅವನ ‘ಪಾರಕ್ಸ್ ಸ್ವೀಟ್‌ಮೀಟ್ ಸ್ಟಾಲ್’ ಜನಪ್ರಿಯವಾಗಿ, ಆತನ ಅಂಗಡಿಯಲ್ಲಿ ವ್ಯಾಪಾರ ಚೆನ್ನಾಗಿ ನಡೆಯುತ್ತಿತ್ತು. ಆ ವ್ಯಾಪಾರದಲ್ಲಿ ಆತನಿಗೆ ಪ್ರತಿಸ್ಪರ್ಧಿಗಳೂ ಹೆಚ್ಚಾಗಿ ಇರಲಿಲ್ಲ. ಆ ಕಾಲಕ್ಕೆ ಸಂಸಾರವೂ ಅಷ್ಟು ಬೆಳೆದಿರಲಿಲ್ಲ. ಎಂತಲೇ ಎಲ್ಲವೂ ಅನುಕೂಲವಾಗಿತ್ತು. ಈಗೆರಡು ವರ್ಷದ ಕೆಳಗೆ, ಬೊಂಬಾಯಿಗೆ ಸಿಂಧಿ ನಿರಾಶ್ರಿತರು ಬಂದ ಬಳಿಕ, ಕೃಷ್ಣಾಪಾರಕ್‌ನ ಅಂಗ ಡಿಯ ಬಳಿಯಲ್ಲೇ ಭಗತ್‌ರಾಂನ ಮಿಠಾಯಿ ಅಂಗಡಿ ಆರಂಭವಾಯಿತು. ಅಂದಿನಿಂದ ಕೃಷ್ಣಾಪಾಠಕ್‌ನ ಅಂಗಡಿಯಲ್ಲಿ ವ್ಯಾಪಾರ ಇಳಿಮುಖವಾ ಯಿತು.

‘ ಮೊದಮೊದಲು ಈ ಇಳಿತದ ಪರಿಣಾಮ ಸಂಸಾರದ ಮೇಲೆ ಅಷ್ಟಾಗದಿದ್ದರೂ, ಭಗತ್‌ರಾಂ ತನ್ನ ಮಿಠಾಯಿ ಅಂಗಡಿ ಆರಂಭಿಸಿದ ದಿನ ದಿಂದ ಕೃಷ್ಣಾಪಾಠಕ್‌ನ ಮನೆಯಲ್ಲಿ ಸಿಂಧಿಗಳ ವಿಷಯದಲ್ಲಿ ಹಗೆತನದ ಮಾತು ಆರಂಭವಾಯಿತು. ಹಾಗೇ ಸಂಸಾರದಲ್ಲಿ ಸಣ್ಣ ಪುಟ್ಟ ಕಿರಿ ಕಿರಿ ಗಳೂ ಆರಂಭವಾದವು.

‘ ಒಂದು ಕಡೆ ಕೃಷಾಪಾಠಕ್‌ನ ವ್ಯಾಪಾರ ಇಳಿದಂತೆ, ಭಗತ್‌ರಾಂನ ವ್ಯಾಪಾರ ಏರಿತು. ಅದಕ್ಕೆ ಭಗತ್‌ರಾಂ ತಯಾರಿಸುತ್ತಿದ್ದ ತಿಂಡಿಗಳ ರುಚಿಯೇ ಅಲ್ಲ, ಆತನ ಮಿಠಾಯಿಗಳ ಬೆಲೆಯೂ ಕಡಮೆಯಾಗಿದ್ದುದೂ

ಕಾರಣವಾಗಿತ್ತು. ಭಗತ್‌ರಾಂನೊಂದಿಗೆ ಸ್ಪರ್ಧೆ ಹೂಡಿ ಕೃಷ್ಣಾಪಾಠಕ್ ತನ್ನ ವ್ಯಾಪಾರ ಕುದುರಿಸಬೇಕೆಂದರೆ, ಅವನ ಹಾಗೇ ಈತನೂ ಸಿಹಿ ತಿಂಡಿಗಳ ಬೆಲೆ ಕಡಮೆ ಮಾಡಬೇಕಾಗಿತ್ತು. ಆದರೆ ಈತನಿಗದು ಸಾಧ್ಯವಿರಲಿಲ್ಲ.

'ಭಗತ್‌ರಾಂಗೆ ಕೃಷ್ಣಾರಕ್‌ಗೆ ಇದ್ದಷ್ಟು ವೆಚ್ಚಗಳಿರಲಿಲ್ಲ. ಅಂಗಡಿಯ ಬಾಡಿಗೆ ಇರಲಿಲ್ಲ, ಮುನ್ಸಿಪಾಲಿಟಿಯ ಕಂದಾಯವಿರಲಿಲ್ಲ, ಆಳುಕಾಳು ಸುಂಕ ಸಾರಿಗೆ ಯಾವುದೂ ಇರಲಿಲ್ಲ ಅಲ್ಲದೆ ಅವನು ಅಂಗಡಿ ಇಟ್ಟು ನಡೆಸುವುದಕ್ಕೂ ಭಗತ್‌ರಾಂಗೆ ನಿರಾಶ್ರಿತರ ಸಹಾಯ ಸಮಿತಿಯಿಂದ ನೆರವು ಸಿಕ್ಕಿತ್ತು. ಇದೆಲ್ಲದರಿಂದಾಗಿ ಆತ ತನ್ನ ಅಂಗಡಿಯಲ್ಲಿ ಮಿಠಾಯಿಗಳನ್ನು ಕಡಮೆ ಬೆಲೆಗೆ ಮಾರಾಟ ಮಾಡುವುದು ಸಾಧ್ಯವಿತ್ತು ಹೀಗಿರುವಾಗ ಕೃಷ್ಣಾಪಾಠಕ್ ಭಗತ್‌ರಾಂನೊಂದಿಗೆ ಸ್ಪರ್ಧಿಸುವುದು ಹೇಗೆ ?

'ಸ್ಪರ್ಧಿಸುವುದು ಸಾಧ್ಯವಿರಲಿಲ್ಲ. ಆದರೆ ವ್ಯಾಪಾರ ಇಳಿಮುಖವಾಗುತ್ತಿತ್ತು. ವ್ಯಾಪಾರ ಹಾಗೇ ಇಳಿದು ಬಿಟ್ಟರೆ ಮುಂದೆ ಗತಿ ಏನು? ಹಾಗೂ ಕೃಷ್ಣಾಪಾಠಕ್, ತನ್ನ ಮಿಠಾಯಿಗಳಿಗೆ ಹಾಕುತ್ತಿದ್ದ ಸಾಮಾನುಗಳಲ್ಲಿ ಆದಷ್ಟು ಕಡಮೆ ಬೆಲೆಯುನ್ನು ಉಪಯೋಗಿಸಿ, ಬೆಲೆ ಕಡಮೆ ಮಾಡಿದ ಆದರಿಂದ ಅವನ ತಿಂಡಿಗಳ ರುಚಿ ಕೆಟ್ಟು ವ್ಯಾಪಾರಕ್ಕೆ ಮತ್ತಷ್ಟು ಏಟುಬಿದ್ದಿತೇ ಹೊರತು, ಬೇರೇನೂ ಉಪಯೋಗವಾಗಲಿಲ್ಲ.

'ಇದರಿಂದಾಗಿ ಕೃಷ್ಣಾಪಾಠಕ್ ತನ್ನ ಸಂಸಾರಕ್ಕೆ ಮಾಡುತ್ತಿದ್ದ ಖರ್ಚುಗಳನ್ನೂ ಕಡಮೆ ಮಾಡಬೇಕಾಯಿತು. ಅಂಗಡಿಯಲ್ಲಿದ್ದ ಆಳನ್ನು ತೆಗೆದುಹಾಕಿ, ಸ್ವಲ್ಪ ದೊಡ್ಡವನಾದ ಮಧುಪಾಠಕ್‌ನನ್ನೇ ಕೆಲಸಕ್ಕೆ ಜೋಡಿಸಿಕೊಂಡ. ಇದರಿಂದ ಮಧುಪಾಠಕ್‌ಗೆ ಇದ್ದ, ಉಳಿದ ಹುಡುಗರಂತೆ ಆಟವಾಡುವ ಅವಕಾಶ ತಪ್ಪಿತು.

'ಮನೆಯಲ್ಲಿ ಮೊದಲಿದ್ದ ಆದರಣೆ ಇಲ್ಲ, ಹೊರಗೆ ಹೋಗಿ ಆಟವಾಡಲು ಅವಕಾಶವಿಲ್ಲ, ಇದರ ಜೊತೆಗೆ ಆದಾಯ ಕಡಮೆಯಾಗಿ. ಸಂಸಾರದಲ್ಲಿ ತಾಪತ್ರಯುಗಳು ಹೆಚ್ಚಿದ ಮೇಲೆ ಕೃಷ್ಣಾಪಾಠಕ್ ಆ ತೊಂದರೆಯಲ್ಲಿ ಸಿಟ್ಟಾಗಿ ಆಗಾಗ ಹುಡುಗರನ್ನು, ಹೆಂಡತಿಯನ್ನು ಹೊಡೆಯಲು ಆರಂಭಿಸಿದ.

'ಈ ಸುತ್ತು ಕಷ್ಟದ ಪರಿಸ್ಥಿತಿಯಲ್ಲಿ ಮುಸುಗುಟ್ಟುವ ಹುಡಗು ಬುದ್ಧಿ ಇದೆಲ್ಲದಕ್ಕೂ ಏನು ಕಾರಣ ಎಂದು ಬೆದಕತೊಡಗಿತು.

'ಏನು ಕಾರಣ—

'ಒಂದೇ—

'ದಿನವೂ ತನ್ನ ತಂದೆ, ತಾಯಿಯು ಮುಂದೆ ಹೇಳುತ್ತಿದ್ದುದು—ಸಿಂಧಿಗಳು!

'ದಿನದಿನವೂ ಮನೆಯಲ್ಲಿ ಆ ಮಾತು ಮಧುಪಾಠಕ್‌ನ ಕಿವಿಗೆ ಬೀಳುತ್ತಿತ್ತು. ಕೃಷ್ಣಾಪಾಠಕ್ ಹೇಳುತ್ತಿದ್ದ—ಎಲ್ಲ ಅನರ್ಥಕ್ಕೂ ಮೂಲ ಕಾರಣ ಸಿಂಧಿ ನಿರಾಶ್ರಿತರು. ಬೊಂಬಾಯಿನಲ್ಲಿ ಮನೆ ಬಾಡಿಗೆ ಹೆಚ್ಚಿದರೆ, ಯಾವುದಾದರೂ ಸಾಮಾನು ಸಿಕ್ಕದೆ ಹೋದರೆ, ವ್ಯಾಪಾರ-ವ್ಯವಹಾರದಲ್ಲಿ ನೀತಿ ನಿಯತ್ತು ಕಡಮೆಯಾದರೆ-ಎಲ್ಲ ತಪ್ಪಿನ ಭಾರವೂ ಸಿಂಧೀ ಜನರ ತಲೆಯ ಮೇಲೆಯೇ. ಈ ಭಾವನೆಯಲ್ಲಿ, ಆರಂಭ ಕಾಲದಲ್ಲಿ ಸಿಂಧೀ ಜನರ ವಿಷಯಕ್ಕಿದ್ದ ಅಲ್ಪಸ್ವಲ್ಪ ಸಹಾನುಭೂತಿಯೂ ಬತ್ತಿಹೋಗಿ ಸಿಂಧಿಗಳೆಂದರೆ ನಮ್ಮ ಮೇಲೆ ಎಲ್ಲಾ ರಂಗದಲ್ಲೂ ಸ್ಪರ್ಧೆ ಹೂಡಿ ತಮ್ಮ ಗಂಟಲು ಹಿಚುಕಲು ಬಂದವನೆಂಬ ಭಾವನೆಯೇ ಇಲ್ಲಿಯ ಜನರಲ್ಲಿ ಬೆಳೆಯುತ್ತಿದೆ.

'ಬೊಂಬಾಯಿಗೆ ಓಡಿಬಂದ ಸಿಂಧಿ ನಿರಾಶ್ರಿತರಲ್ಲಿ ಬಹು ಮಂದಿ ವ್ಯಾಪಾರಿಗಳು. ಕರಾಚಿಯಲ್ಲಿ ಕಳೆದುಕೊಂಡ ಆಸ್ತಿಯನ್ನು ಬೊಂಬಾಯಿನ ಬಂಗಾರದ ಹೊಲದಲ್ಲಿ ಮತ್ತೆ ಗಳಿಸಬೇಕೆಂಬ ಬಯಕೆಯಿಂದ ಬಂದವರು. ಬೊಂಬಾಯಿನಲ್ಲಿ ಮೊದಲಿನಿಂದಲೂ ವ್ಯಾಪಾರ ಮುಕ್ಕಾಲು ಪಾಲು ಗುಜರಾತಿಗಳ ಗುತ್ತಿಗೆಯಾಗಿತ್ತು. ಎಂತಲೇ, ಸ್ವಾಭಾವಿಕವಾಗಿಯೇ ಸಿಂಧಿಗಳೂ ಗುಜರಾತಿಗಳೂ ಪ್ರತಿಸ್ಪರ್ಧಿಗಳಾದರು. ಎಲ್ಲಕ್ಕೂ ಮೊದಲು ಗುಜರಾತಿಗಳಿಗೆ ಸಿಂಧಿಗಳ ವಿಷಯದಲ್ಲಿ ಅಸಮಧಾನ ಮೂಡಿತು.

'ಸಾಧಾರಣವಾಗಿ ಪ್ರತಿಯೊಬ್ಬ ಗುಜರಾತಿಗೂ ಬೊಂಬಾಯಿ ತನ್ನದು ಎಂಬಷ್ಟು ಅಭಿಮಾನವಿದೆ. ಆ ಅಭಿಮಾನದಲ್ಲಿ ವಾಸ್ತವಾಂಶವೂ ಇಲ್ಲದಿಲ್ಲ. ಇಲ್ಲಿಯ ದೊಡ್ಡ ವ್ಯಾಪಾರ, ವಹಿವಾಟು, ಕಾರ್ಖಾನೆಗಳು,

ಕೈಗಾರಿಕೆಗಳು–ಎಲ್ಲದರಲ್ಲೂ ಗುಜರಾತಿಗಳದೇ ಬಹು ದೊಡ್ಡ ಪಾಲು. ಹೀಗಿರುವಾಗ ತಮ್ಮ ಊರಿನಲ್ಲೇ, ಎಲ್ಲಿಂದಲೊ ಬಂದ ಸಿಂಧಿಗಳು ತಮ್ಮ ಗಂಟಲನ್ನೇ ಕತ್ತರಿಸಬಂದರೆ ಗುಜರಾತಿಗಳು ಸಹಿಸುವುದು ಹೇಗೆ ?

' ಅಲ್ಲದೆ ಸಿಂಧಿಗಳು ವ್ಯಾಪಾರದಲ್ಲಿ ನೀತಿ, ನಿಯತ್ತುಗಳಿಗೆ ಗುಜರಾತಿಗಳಷ್ಟು ಮಹತ್ವ ಕೊಡುವುದಿಲ್ಲ ಎಂದೂ ನಾನು ಕೇಳಿದೇನೆ. ಅದೆಷ್ಟು ನಿಜವೋ ಸುಳ್ಳೋ ಅಂತೂ ಜನ, ಸಿಂಧಿಗಳು ಲಾಭಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ ಎಂದು ಆಡಿಕೊಳ್ಳುತ್ತಾರೆ.

' ಗುಜರಾತಿ–ಸಿಂಧಿಗಳ ವೈಮನಸ್ಯದ ಬುಡದಲ್ಲಿ ಇದೆಲ್ಲವೂ ಹುದುಗಿದೆ.

' ಈ ಎಲ್ಲ ಮಾತುಗಳೂ ದಿನದಿನವೂ ಮಧುಪಾಠಕ್‌ನ ಎಳೆಗಿವಿಗಳ ಮೇಲೆ ಒಂದಲ್ಲ ಒಂದು ರೂಪದಲ್ಲಿ ಬೀಳುತ್ತಿತ್ತು. ಬೆಳೆಯುವ ಬುದ್ಧಿಗೆ ಕಣ್ಣು ಕಿವಿ, ಎರಡೂ ಬಹು ಚುರುಕು. ಮಧುಪಾಠಕ್‌ನೂ ಅಷ್ಟೆ.

' ದಿನದಿನವೂ ಮನೆಯಲ್ಲಿ ಈ ಬಗೆಯ ಮಾತುಗಳನ್ನು ಕೇಳುತ್ತಿದ್ದ ಹುಡುಗನ ಹೃದಯದಲ್ಲಿ ದ್ವೇಷದ ಭಾವನೆ ದಿನದಿನಕ್ಕೆ ಬೆಳೆದು ಗರಿಗಟ್ಟಿತು. ಮೊದಲಷ್ಟು ದಿನ ತಟಸ್ಥವಾಗಿದ್ದ ದ್ವೇಷ ಬರಬರುತ್ತಾ ಹಿಂಸಾತ್ಮಕವಾಗಿ, ಹೊರಹೊಮ್ಮತೊಡಗಿತು—'ಸಿಂಧಿಗಳು ಗುಜರಾತಿಗಳನ್ನು ಹಾಳುಮಾಡಲು ಬಂದಿದಾರೆ. ಅವರನ್ನು ಬೊಂಬಾಯಿ ಬಿಟ್ಟು ಓಡಿಸಬೇಕು' ಎಂಬ ಭಾವನೆ ಮಧುಪಾಠಕ್‌ನ ಹೃದಯದಲ್ಲಿ ಬೆಳೆಯಿತು.

' ದೊಡ್ಡವರಲ್ಲಿ ಈ ಭಾವನೆ ಬೇರೆ ರೀತಿಯ ಕ್ರಿಯೆಯಾಗಿ ಹೊರಹೊಮ್ಮಬಹುದು. ಆದರೆ ಬಾಲಬುದ್ಧಿಗೆ ತಿಳಿಯುವುದಿಷ್ಟು–ಆದಷ್ಟು ಕಾಡಿಸಿದರೆ ಓಡಿಹೋಗುತ್ತಾರೆ ಮಧುಪಾಠಕ್ ಮಾಡಿದುದು ಆ ಕೆಲಸವನ್ನೇ ತನ್ನ ಓರಿಗೆಯ ಹುಡುಗರನ್ನು ಗುಂಪು ಕಟ್ಟಿಕೊಂಡು, ಅವರ ತಲೆಯಲ್ಲಿ ಇಲ್ಲದ ಹುಚ್ಚು ತುಂಬಿ, ಕಣ್ಣಿಗೆ ಕಂಡ ಸಿಂಧಿಗಳನ್ನು ಕಾಡತೊಡಗಿದ. ಎಲ್ಲಕ್ಕೂ ಮುಖ್ಯವಾಗಿ ಅವರ ಕಣ್ಣಿಗೆ ಕಾಣುತ್ತಿದ್ದ ಬಹು ದೊಡ್ಡ ಸಿಂಧಿ ವೈರಿ—ತಮ್ಮಪ್ಪನ ಮೇಲೆ ಸ್ಪರ್ಧೆ ಮಾಡಬಂದ ಮಿಠಾಯಿಗಾರ ಭಗತ್‌ರಾಂ. ಆದಕ್ಕೇ ಈ ಗುಂಪು ಭಗತ್‌ರಾಂನನ್ನು ಅಷ್ಟು ಕಾಡಿದ್ದು.

' ಇದು ಮಧುಪಾರಕ್‌ನ ಹೃದಯದಲ್ಲಿಂದು ದೈತ್ಯಾಕಾರವಾಗಿ ಬೆಳೆದಿರುವ ಸಿಂಧಿ ದ್ವೇಷದ ಕಥೆ '

—ಎಂದು ಹೇಳಿ ವಾಸಂತೀಬಹೆನ್ ನಾನು ಹೇಳುತ್ತಿದ್ದ ಮಧುಪಾರಕ್‌ನ ಕಥೆ ಮುಗಿಸಿದಳು.

# ಇದು ಬೊಂಬಾಯಿ !

ವಾಸಂತೀಬಹೆನ್ ತನ್ನ ಕಥೆಯನ್ನು ಹೇಳಿ ಮುಗಿಸಿಯಾದ ಮೇಲೆ ಆಕೆ ಕಥೆ ಹೇಳುವವರೆಗೂ ಸುಮ್ಮನೆ ಸಿಗರೇಟು ಸೇದುತ್ತಾ ಕುಳಿತಿದ್ದ ಡಾಕ್ಟರು—

' ವಾಸಂತಿ ಹೇಳಿದುದನ್ನು ಕೇಳಿದಿರಲ್ಲಾ ರಾವ್, ಆದರೆ ಸಿಂಧಿ-ಗುಜರಾತಿಯ ಸಮಸ್ಯೆಯ ಬಗ್ಗೆ ಇನ್ನೂ ಒಂದು ಮಾತು ಹೇಳಬೇಕಾದ್ದಿದೆ. ಇಲ್ಲವಾದಲ್ಲಿ ನಿಮಗೆ ಈ ಸಮಸ್ಯೆಯ ಸರ್ವಾಂಗ ಪರಿಚಯ ಆದಂತಾಗುವುದಿಲ್ಲ '

—ಎಂದರು.

' ಮತ್ತೇನು ?'

—ಎಂದು ಕೇಳಿದೆ ನಾನು.

' ಮತ್ತೆ ಯಾವ ಕಥೆಯನ್ನು ಹೇಳಹೋಗುವುದಿಲ್ಲ ನಾನು-ಹೆದರಬೇಡಿ. ವಾಸಂತೀ ಇಲ್ಲಿಯ ಜನ, ಸಿಂಧಿಗಳು ಲಾಭಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ ಎಂದು ಆಡಿಕೊಳ್ಳುತ್ತಾರೆ ಎಂದು ಹೇಳಲಿಲ್ಲವೇ ? ಆ ಮಾತಿನಲ್ಲಿ ವಾಸ್ತವಾಂಶವಿಲ್ಲದಿಲ್ಲ. ಇದ್ದಂತೆ ಅದಕ್ಕೆ ಕಾರಣ ಅವರು ಹುಟ್ಟಾ ಲಾಭಬಡಕರು, ನೀತಿಬ್ರಷ್ಟರು ಎಂಬುದಲ್ಲಿ ಅದಕ್ಕೆ ಆ ಜನಾಂಗಕ್ಕೆ ಜನಾಂಗವೇ ಅನುಭವಿಸಿದ ಮಹಾದುರಂತ ಕಾರಣವಾಗಿದೆ. ದೇಶ ವಿಭಜನೆಯ ಕಾಲದ ಮಹಾ ದುರಂತ, ಈ ಜನಕ್ಕೆ ಜನಸಾಮಾನ್ಯವಾಗಿ ಆಡುವ ನೀತಿ, ನಿಯತ್ತು, ಮಾನವತೆ, ದಯೆ, ಪ್ರೇಮ ಎಂಬ ಎಲ್ಲವೂ ಅರ್ಥಶೂನ್ಯವಾದ ಮಾತುಗಳು ಎಂಬ ಪಾಠವನ್ನು ಕಲಿಸಿತು. ಆ ಮಾತುಗಳಿಗೆ ಬೆಲೆ ಹೋದ ಬಳಿಕ ಜೀವನದಲ್ಲಿ ಬೆಲೆಯುಳಿಯುವುದು ಹಣ ಒಂದಕ್ಕೇ. ಇಂದಿನ ಸಿಂಧಿಗಳ ಜೀವನ ಈ ಮಾತಿಗೆ ಜೀವಂತ ದೃಷ್ಟಾಂತ.

' ಹಾಗೇ ಇಲ್ಲಿಯ ಜನಕ್ಕೆ 'ಸರಕಾರ ಸಿಂಧಿಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಿಸುತ್ತಿದೆ, ಅವರಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡುತ್ತದೆ. ಹೀಗಾಗಿ ಆ ನಿರಾಶ್ರಿತರಿಗಿಂತ ನಾವೇ ಹೆಚ್ಚಿನ ನಿರಾಶ್ರಿತರು' ಎಂಬ ಭಾವನೆಯೂ ಇದೆ. ಆದರೆ ಈ ಮಾತಾಡುವ ಜನ

ಸಿಂಧಿಗಳು ಕಳೆದುಕೊಂಡುದೆಷ್ಟು, ಅವರಿಗೆ ಇಲ್ಲಿ ಪ್ರತಿಯಾಗಿ ದೊರೆತಿರುವುದೆಷ್ಟು ಎಂದು ಯೋಚಿಸುತ್ತಿಲ್ಲ. ಅಲ್ಲದೆ ನಾವು ದುಡಿದ ಕಿರುಗಾಸಿನ ವಸ್ತುವಿಗೆ, ಬೇರೆಯವರು ಕೊಡುವ ಹೊನ್ನಿಗಿಂತಲೂ ಹೆಚ್ಚಿನ ಬೆಲೆ ಇದೆ. ಅಲ್ಲವೇ ರಾವ್ ? ಹಾಗಾಗಿ ಸಿಂಧಿಗಳಿಗೆ ತಾವು ಕಳೆದುಕೊಂಡಷ್ಟು ಇಲ್ಲಿ ದೊರಕುತ್ತಿಲ್ಲ ಎಂಬ ಭಾವನೆಯಿದೆ ಎಂತಲೇ ಸಿಂಧಿಜನಕ್ಕೆ ಮಾಡುವ ಸಹಾಯದ ವಿಷಯದಲ್ಲಿ ಜನ ಕೃಪಣತನದ ಮಾತಾಡಿದಾಗ ಮೊದಲೇ ಅವರ ಕಹಿಯಾದ ಮನಸ್ಸು ಮತ್ತಷ್ಟು ಕಹಿಯಾಗಿ ಹಳಬರು ಮತ್ತು ಹೊಸದಾಗಿ ಬಂದವರ ನಡುವೆ ಸಾಮರಸ್ಯಮಾಡಲು ಅಡ್ಡಿಯಾಗಿದೆ.

‘ ಈ ಎರಡು ವರ್ಗಗಳ ನಡುವಿನ ವಿರಸ ಇಂದಿನ್ನೂ ಮೊಳಕೆಯಾಗಿದೆ ರಾವ್. ಮುಂದೆ ಈಗಲೇ ಇದು ಪರಿಹಾರವಾಗದಿದ್ದರೆ ಇದು ಏನು ಭಯಂಕರಾವಸ್ಥೆಯನ್ನು ಪಡೆಯಬಹುದು ಎಂಬುದಕ್ಕೆ ನಮ್ಮ ಶಿಶುದೈತ್ಯ ನಿದರ್ಶನ, ಜೀವಂತ ಎಚ್ಚರಿಕೆ ’

—ಎಂದು ಹೇಳಿದರು ಡಾಕ್ಟರ್.

ಅವರು ಆ ಮಾತು ಹೇಳಿ ಸುಮ್ಮನೆ ಕುಳಿತರು. ಅವರೆಲ್ಲರೂ ಹೇಳಿದ ಒಂದಾದ ಮೇಲೊಂದು ದುರಂತ ಕಥೆಗಳನ್ನೇ ಕೇಳಿ ನನ್ನ ಮತಿಯೂ ಮಸಣಿಸಿದಂತಾಗಿತ್ತು ಉಳಿದವರೂ ಸುಮ್ಮನಿದ್ದರು.

ಕೊನೆಗೆ ಡಾಕ್ಟರೇ ಮತ್ತೊಂದು ಸಿಗರೇಟು ಹೊತ್ತಿಸಿ ಕೈಗಡಿಯಾರ ನೋಡಿಕೊಂಡು—

‘ ಗಂಟೆ ಒಂಭತ್ತಕ್ಕೆ ಬಂತು. ಇಲ್ಲಿಗೆ ನಮ್ಮ ಮಾತು ಕೊನೆ ಮುಟ್ಟಿಸೋಣವೇ ರಾವ್ ಒಂದು ದಿನಕ್ಕೆ ಇಷ್ಟು ಸಾಕು ಎಂದು ತೋರುತ್ತದೆ. ಬೊಂಬಾಯಿಯಲ್ಲಿ ನೀವು ಇನ್ನು ನಾಲ್ಕು ದಿನ ಇರುವುದಾದರೆ, ಮತ್ತೆ ಯಾವಾಗಲಾದರೂ ಕಲೆಯೋಣ ’

—ಎಂದವರೇ ಏನೋ ಮರೆತು ಹೋದ ಮಾತನ್ನು ಜ್ಞಾಪಿಸಿಕೊಂಡು—

‘ ಈ ಮಾತೆಲ್ಲಾ ಬಂದದ್ದು ನಾನು ನಿಮ್ಮನ್ನು ‘ಬೊಂಬಾಯನ್ನು ಕಂಡ ನಿಮಗೆ ಏನು ಅನಿಸುತ್ತದೆ’ ಎಂದು ಕೇಳಿದ್ದಕ್ಕಲ್ಲವೇ ರಾವ್ ? ಈಗ ಹೇಳಿ—ಏನನಿಸುತ್ತದೆ ? ಬಗೆಬಗೆಯ ದ್ವೀಪಗಳು ಕಿಕ್ಕಿರಿದ

ಬೊಂಬಾಯಿಯಂಥ ಮಹಾ ಪಟ್ಟಣಗಳು ಇರಬೇಕೇ, ಅಥವಾ ಸಾಂಕ್ರಾಮಿಕ ಜಾಡ್ಯದ ಮಾಟವನ್ನೇ ಸುಟ್ಟುಹಾಕುವಂತೆ ಈ ಮಹಾನಗರಗಳನ್ನು ಕತ್ತರಿಸಿ ಚೆಲ್ಲಬೇಕೇ ?'

—ಎಂದು ನನ್ನನ್ನು ಕೇಳಿದರು.

ಒಂದು ಗಳಿಗೆ ನನಗೆ ಯಾರೊ ಇದ್ದಕ್ಕಿದ್ದ ಹಾಗೇ ಹಿಡಿದು ಎಳೆದ ಹಾಗಾಯಿತು ಎಂತಲೇ ಏನೂ ಉತ್ತರ ಕೊಡಲಾಗಲಿಲ್ಲ. ಸುಮ್ಮನೆ ಕುಳಿತಿದ್ದೆ.

'ದಿನದಿನಕ್ಕೆ ಬೊಂಬಾಯಿ ಬೆಳೆಯುತ್ತಿದೆ ರಾವ್, ದೈತ್ಯಾಕಾರವಾಗಿ ಬೆಳೆಯುತ್ತಿದೆ ಹೇಳಿ–ಈ ಬೊಂಬಾಯಲ್ಲಿ ಮನುಷ್ಯತ್ವಕ್ಕೆ ಬೆಲೆ ಇದೆಯೇ ? ಇಲ್ಲವಾದಲ್ಲಿ ಈ ಬೊಂಬಾಯಿಗೇನು ಬೆಲೆ ? ಎಲ್ಲರೂ ಬದುಕಬಹುದು ಎಂದು ಬೊಂಬಾಯಿಗೆ ಬರುತ್ತಾರೆ ರಾವ್ ಆದರೆ ಹಾಗೆ ಬಂದವರಾರೂ ಇಲ್ಲಿ ಬದುಕುವುದಿಲ್ಲ ಎಲ್ಲರನ್ನು ತಿಂದು ಬೊಂಬಾಯಿ ಬದುಕುತ್ತದೆ ಮಾನವನ್ನು ತಿಂದು ಅರಗಿಸಿಕೊಂಡು, ದೈತ್ಯರನ್ನು ಸೃಷ್ಟಿಸುವ ಬೃಹತ್ ಕಾರ್ಖಾನೆ ಬೊಂಬಾಯಿ ಈ ಮನುಷ್ಯ ಮನುಷ್ಯರನ್ನು ಪ್ರೀತಿಸುವುದಿರಲಿ, ಮಗ ತಂದೆಯನ್ನು ಪ್ರೀತಿಸುವುದೂ ಅಪರೂಪ'

—ಡಾಕ್ಟರೇ ತಮ್ಮ ಮಾತು ಮುಂದುವರೆಸಿ ಹೇಳಿದರು

'ನಿಮ್ಮ ಮಾತು ನಿಜ ರಾವ್ ತಂದೆಯನ್ನು ದ್ವೇಷಿಸುವ ಮಕ್ಕಳನ್ನು ಕಾಣಬೇಕೆಂದರೂ ಈ ಬೊಂಬಾಯಿನ ಮೃಗಾಲಯಕ್ಕೇ ಬರಬೇಕು ನಮ್ಮ ರಾವ್‌ಗೆ ತಾಯಿಯನ್ನು ಕಂಡರೆ ಹರಿದು ತಿನ್ನುವ ನಮ್ಮ ರುಕ್ಮಿಣಿಯ ವಿಷಯ ಹೇಳಿದಿರಾ ?'

—ವಾಸಂತೀಬಹೆನ್ ಕೇಳಿದಳು.

'ಈ ದಿನಕ್ಕೆ ರಾವ್ ಇಷ್ಟನ್ನು ಜೀರ್ಣಿಸಿಕೊಳ್ಳಲಿ. ಇದನ್ನು ಕೇಳಿ ಅವರು ಬೊಂಬಾಯಿಯಲ್ಲಿದ್ದರೆ ಇನ್ನೊಂದು ದಿನ ಆ ವಿಷಯವನ್ನು ಹೇಳಬಹುದು'

—ಎಂದರು ಡಾಕ್ಟರ್.

'ಅಂದರೆ–ನಿಮ್ಮ ರೋಗಿಗಳ ಪೈಕಿ ತಾಯಿಯನ್ನು ಕೊಲ್ಲುತ್ತೇನೆ ಎನ್ನುವ ಮಗುವೂ ಬಂದಿದೆಯೇ ಡಾಕ್ಟರ್ ?'

—ನಾನು ಚಕಿತನಾಗಿ ಕೇಳಿದೆ.

'ಇದೆ, ಇದೆ, ಬೊಂಬಾಯಲ್ಲಿ ಇಲ್ಲದ್ದು ಯಾವುದೂ ಇಲ್ಲ ರಾವ್. ಈ ದಿನ ನನಗೆ ವೇಳೆಯಾಯಿತು, ಕ್ಷಮಿಸಿ. ಮತ್ತೊಮ್ಮೆ, ಸಿಕ್ಕಾಗ ನಿಮಗೆ ಆ ಮಗುವಿನ ವಿಷಯ ಹೇಳುತ್ತೇನೆ. ಇಲ್ಲವಾದರೆ ಕುಸುಮಾಗೂ ಅದು ಗೊತ್ತು. ಆ ಮಗು ಅವಳ ಪಟ್ಟಿಗೆ ಸೇರಿದೆ. ಆಕೆಯೇ ಹೇಳಿ ದರೂ ಹೇಳುತ್ತಾಳೆ. ಈ ದಿನ ನನಗೆ ಬಿಡುವಿಲ್ಲ. ಈಗ ಗಡಿಯಾರ ನೋಡಿಕೊಂಡಾಗ ಸಿ ಸಿ ಐನಲ್ಲಿ ಒಂದು ಪಾರ್ಟಿಗೆ ನಾನು ಹೋಗ ಬೇಕಾಗಿದ್ದುದು ನೆನಪಾಯಿತು. ಆಯಿತು—ಇವತ್ತು ಮನೆಯವರು ನನ್ನನ್ನು ಜೀವಂತ ಉಳಿಸುವುದಿಲ್ಲ ಬರುವುದಾದರೆ ಬನ್ನಿ ·ನಿಮ್ಮನ್ನೂ ನಿಮ್ಮ ಹೋಟೆಲ್‌ನಲ್ಲಿ 'ಡ್ರಾಪ್' ಮಾಡಿ ಹೋಗುತ್ತೇನೆ'

—ಎಂದರು ಡಾಕ್ಟರ್.

'ನನ್ನ ಹೋಟೆಲ್ ಇಲ್ಲೇ ಹತ್ತಿರದಲ್ಲಿದೆ, ನಡದೇ ಹೋಗುತ್ತೇನೆ. ನೀವು ಹೋಗಿ ಡಾಕ್ಟರ್. ಅಂತೂ ನನ್ನಿಂದ ನಿಮಗೆ ತುಂಬಾ ತೊಂದರೆ ಯಾಯಿತು.'

—ಎಂದೆ ನಾನು.

'ತೊಂದರೆ ಏನೂ ಇಲ್ಲ ಲೇಖಕರೊಬ್ಬರ ಪರಿಚಯವಾದದ್ದು ನನಗೇ ಲಾಭವಾಯಿತು. ನಾನಿನ್ನು ಬರಲೇ ರಾವ್?'

—ಎಂದು ಕೇಳಿ, ಕುಸುಮಳತ್ತ ತಿರುಗಿ—

'ನಿನಗೂ ಹೊತ್ತಾಯಿತು? ಹಾಸ್ಟಲ್‌ಗೆ ಒಬ್ಬಳೇ ಹೋಗು ತ್ತೀಯಾ?'

—ಎಂದು ಕೇಳಿದರು.

'ಭಯವೇನೂ ಇಲ್ಲ. ಹೋಗುತ್ತೇನೆ.'

—ಎಂದಳು ಕುಸುಮಾ.

'ಆಕೆಯನ್ನು ಹಾಸ್ಟಲಿಗೆ ತಲುಪಿಸುವ ಜವಾಬ್ದಾರಿ ನನಗಿರಲಿ'

- ಎಂದೆ ನಾನು

'ಎಷ್ಟೇ ಆಗಲಿ—ಹಾಲು ಸಕ್ಕರೆ ಒಂದು, ಕಲಸಿದ ಬಟ್ಟಲೇ ಬೇರೆ ಎಂಬುದೇ ನಿಜವಾಯಿತು. ನೀವೆಲ್ಲರೂ ಒಂದಾಗಿ ನನ್ನನ್ನು ಮರತೇ